ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ಅಕ್ಟೋಬರ್ 22 ಶನಿವಾರ 2022

₹4

ಸಂಪುಟ: 43 | ಸಂಚಿಕೆ: 186 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಾಳೆ ಮೈಸೂರಲ್ಲಿ ವಿಷ್ಣುವರ್ಧನ್ ಸಂಭ್ರಮ



ಮೈಸೂರು, ಅ.21(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಅ.23ರಂದು ಸಂಜೆ 5ಕ್ಕೆ 'ಸಿಂಹದ ಧ್ವನಿ ಡಾ. ವಿಷ್ಣುವರ್ಧನ್ ಸಂಭ್ರಮ' ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ಬಿ.ಎಸ್. ಜಯರಾಮರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ನಡೆಯುವ ಗೀತಗಾಯನ ಕಾರ್ಯಕ್ರಮದಲ್ಲಿ ಸಾಹಸಸಿಂಹ ಡಾ.ವಿಷ್ಣುವರ್ಧನ್ ಅಭಿನಯಿಸಿರುವ ಚಿತ್ರಗಳ ಆಯ್ದ ಗೀತೆಗಳನ್ನು ಪ್ರಸ್ತುತಪಡಿಸಲಾಗುವುದು. ನೈಜ ವಾದ್ಯ ನುಡಿಸುವ ಮೂಲಕ ಗೀತಗಾಯನ ನಡೆಸಲಾಗುತ್ತದೆ. ಗಾಯಕರಾದ ಬಾಲು ಪ್ರಕಾಶ್, ಚಂದ್ರಶೇಖರ್, ಶ್ರೀನಿವಾಸ್, ಸರ್ವಮಂಗಳ, ವಾಣಿ, ಧನ್ಯ ವಿವಿಧ ಗೀತೆಗಳನ್ನು ಹಾಡಲಿದ್ದಾರೆ. ಮೇಲುಕೋಟೆಯ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸುವ ಕಾರ್ಯಕ್ರಮವನ್ನು ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಉದ್ಘಾಟಿಸಲಿದ್ದಾರೆ. ಪಾಲಿಕೆ ಸದಸ್ಯೆ ವೇದಾವತಿ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಬಾಲು ಪ್ರಕಾಶ್, ಚಂದ್ರಶೇಖರ್, ಸುರೇಶ್, ಸುಧೀಂದ್ರ ಇದ್ದರು.

ರೇಡಿಯೋ ಮಾನಸ ಎಫ್‌ಎಂ 89.6 ಮತ್ತೆ ಪತ್ರಿಕೋದ್ಯಮ ವಿಭಾಗಕ್ಕೆ ಒಪ್ಪಿಸಲು ಆಗ್ರಹ

ತಪ್ಪಿದಲ್ಲಿ ಕಾನೂನು ಹೋರಾಟಕ್ಕೆ ಪತ್ರಿಕೋದ್ಯಮ ವಿದ್ಯಾರ್ಥಿಗಳ ಎಚ್ಚರಿಕೆ

ಮೈಸೂರು, ಅ.21(ಎಂಟಿವೈ)– ಮೈಸೂರು ವಿವಿಯ ಪತ್ರಿಕೋದ್ಯಮ ಹಾಗೂ ಸಂವಹನ ಅಧ್ಯಯನ ವಿಭಾಗದ ಅಧೀನದಲ್ಲಿದ್ದ ರೇಡಿಯೋ ಮಾನಸ ಎಫ್‌ಎಂ 89.6 ಅನ್ನು ಮತ್ತೆ ಪತ್ರಿಕೋದ್ಯಮ ವಿಭಾಗಕ್ಕೆ ಒಪ್ಪಿಸದಿದ್ದರೆ ಕಾನೂನು ಹೋರಾಟ ಮಾಡುವುದಾಗಿ ಪತ್ರಿಕೋದ್ಯಮದ ವಿದ್ಯಾರ್ಥಿಗಳು ಎಚ್ಚರಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳಾದ ಚಿನ್ಮಯ್,ಬಿ.ಎಸ್. ಭೂಮಿಕಾ, ರಾಕೇಶ್, ರಂಜಿತಾ ಮಾತನಾಡಿ, ಈ ಹಿಂದೆ ಪತ್ರಿಕೋದ್ಯಮ ವಿಭಾಗದ ಅಧೀನದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದ ರೇಡಿಯೋ ಮಾನಸ ಎಫ್‌ಎಂ 89.6 ಅನ್ನು ಇದೀಗ ವಾಸ್ತುಶಿಲ್ಪ ವಿನ್ಯಾಸ ವಿಭಾಗದ ಪ್ರೊಫೆಸರ್ ಅವರ ನಿರ್ವಹಣೆಗೆ ಒಪ್ಪಿಸಲಾಗಿದೆ. ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗ ಈ ಎಫ್‌ಎಂ ಅನ್ನು ಸಮರ್ಥವಾಗಿ ನಿರ್ವಹಿಸುತ್ತಿತ್ತು. ಸಮಾಜದ ಎಲ್ಲ ವರ್ಗದವರ ಸಂದರ್ಶನ ನಡೆಸಲಾಗುತ್ತಿತ್ತು. ಈ ಎಫ್‌ಎಂಗೆ ಅನುಮತಿ ಪಡೆಯುವಾಗ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ನಿರ್ವಹಣೆಯಲ್ಲಿರಲಿದೆ ಎಂದು ಪ್ರಮಾಣಪತ್ರ ಸಲ್ಲಿಸಲಾಗಿತ್ತು. ಆದರೂ ಈಗ ಏಕಾಏಕಿ ಬೇರೊಂದು ವಿಭಾಗಕ್ಕೆ ಹಸ್ತಾಂತರಿಸಿರುವುದು ಸರಿಯಲ್ಲ. ಕೂಡಲೇ ಮತ್ತೆ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗಕ್ಕೆ ಹಸ್ತಾಂತರಿಸದಿದ್ದಲ್ಲಿ ಕಾನೂನು ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಸಂಸ್ಥಾಪನಾ ದಿನಾಚರಣೆ

ಭವಿಷ್ಯದಲ್ಲಿ ಸುಸ್ಥಿರ ಆಹಾರ ಭದ್ರತೆ ಸಾಧಿಸುವುದು ಅತ್ಯಗತ್ಯ

ಭಾರತ ಸರ್ಕಾರದ ಮಾಜಿ ಕಾರ್ಯದರ್ಶಿ ಡಾ.ಟಿ.ರಾಮಸ್ವಾಮಿ ಅಭಿಮತ





ಮೈಸೂರಿನ ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಸಂಸ್ಥಾಪನಾ ದಿನಾಚರಣೆಯನ್ನು ಭಾರತ ಸರ್ಕಾರದ ಮಾಜಿ ಕಾರ್ಯದರ್ಶಿ ಡಾ.ಟಿ.ರಾಮಸ್ವಾಮಿ ಉದ್ಘಾಟಿಸಿದರು. ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ಸಂಸ್ಥೆಯ ಅತ್ಯುತ್ತಮ ವಿಜ್ಞಾನಿಗಳು ಮತ್ತು ವಿವಿಧ ವಿಭಾಗಗಳ ಪ್ರಶಸ್ತಿ ಪಡೆದವರು.

ಮೈಸೂರು, ಅ.21(ಆರ್‌ಕೆಬಿ)– ದೇಶದ ಸಮಸ್ತ ಜನತೆಗೆ ಸುಸ್ಥಿರ ಆಹಾರ ಭದ್ರತೆಯನ್ನು ಸಾಧಿಸುವುದು ಅತ್ಯಗತ್ಯ,, ಆಹಾರದ ಮುಂದಿನ ಸವಾಲುಗಳನ್ನು ಎದುರಿಸಿ, ಆಹಾರ ಪೂರೈಸಲು ಸಿಎಸ್‌ಐಆರ್ – ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ಸಜ್ಜಾಗಬೇಕು ಎಂದು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮಾಜಿ ಕಾರ್ಯದರ್ಶಿ ಪದ್ಮಭೂಷಣ ಡಾ.ಟಿ.ರಾಮಸ್ವಾಮಿ ಇಂದಿಲ್ಲಿ ತಿಳಿಸಿದರು.

ಮೈಸೂರಿನ ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಐಎಫ್‌ಟಿಟಿಸಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಪ್ರಸ್ತುತ ಕಾಲಕ್ಕೆ ಅನುಗುಣವಾಗಿ ತಂತ್ರಜ್ಞಾನಗಳು ಮತ್ತು ಸೇವೆಗಳನ್ನು ಅಪ್‌ಡೇಟ್ ಮಾಡಲು ಸಿಎಫ್‌ಟಿಆರ್‌ಐನಂತಹ ಉನ್ನತ ಶಿಕ್ಷಣಗಳ ಅಗತ್ಯವನ್ನು ಒತ್ತಿ ಹೇಳಿದರು. ಸಂಸ್ಥೆಗಳು ಹಿಂದಿನದನ್ನು ಮಾತನಾಡುವ ಬದಲು ಭವಿಷ್ಯಕ್ಕಾಗಿ ಉತ್ತಮ ಯೋಜನೆಗಳನ್ನು ರೂಪಿಸಬೇಕು ಎಂದು ಸಲಹೆ ನೀಡಿದರು.

ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಆಹಾರ ಆಮದು ಮಾಡಿಕೊಳ್ಳುವ ದೇಶವಾಗಿ ಪರಿವರ್ತನೆಗೊಂಡಿದ್ದ ಭಾರತ, ಸ್ವಾತಂತ್ರ್ಯದ ನಂತರದ ಕೆಲವು ದಶಕಗಳ ಅವಧಿಯಲ್ಲಿ ಸಂಪೂರ್ಣ ಸ್ವಾವಲಂಬಿಯಾಗುತ್ತಿದೆ ಎಂದು ಹೇಳಿದ ಅವರು, ದೇಶದ ಪ್ರತಿಯೊಬ್ಬ ನಾಗರಿಕರಿಗೂ ಆಹಾರ ಭದ್ರತೆಯನ್ನು ಖಾತರಿಪಡಿಸುವ ಅಗತ್ಯವಿದೆ. ಇದಕ್ಕಾಗಿ ಪ್ರಮುಖ ಪಾತ್ರ ವಹಿಸಬೇಕಿದೆ ಎಂದರು. ಐದು ದಶಕಗಳ ಹಿಂದೆ ಇಂದಿರಾಗಾಂಧಿಯವರು ಪ್ರಧಾನಿಯಾಗಿದ್ದಾಗ ನಡೆದ ಹಸಿರುಕ್ರಾಂತಿಯಿಂದ ಭಾರತದ ಸ್ವಾವಲಂಬನೆಯ ಕಥೆ ಪ್ರಾರಂಭವಾಯಿತು. ಭಾರತವು 1950 ಮತ್ತು 1990 ರ ನಡುವೆ ಆಹಾರ ಉತ್ಪಾದನೆಯಲ್ಲಿ ವೇಗದ ಬೆಳವಣಿಗೆಯನ್ನು ಕಂಡಿತು ಎಂದು ಹೇಳಿದರು. ಆಹಾರ ಉತ್ಪಾದನೆಯಲ್ಲಿ ಭಾರತವು ಈಗ ಅಮೆರಿಕದ ನಂತರದ ಸ್ಥಾನದಲ್ಲಿದೆ. ನಮ್ಮ ನೆರೆಯ ಚೀನಾ ಬಹಳ ಹಿಂದೆ ಉಳಿದಿದೆ. ಸಂಯುಕ್ತ ರಾಷ್ಟ್ರಗಳ ಜಾಗತಿಕ ಹಸಿವು ಸೂಚ್ಯಂಕ ಪಟ್ಟಿಯಲ್ಲಿ ದೇಶವು ಮುಂಚೂಣಿಯಲ್ಲಿ ಸಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಸಿಎಫ್‌ಟಿಆರ್‌ಐ ಹೊಂದಿದೆ ಎಂದು ತಿಳಿಸಿದರು.

ತಾಂತ್ರಿಕ ಪ್ರಗತಿಯ ಹೊರತಾಗಿಯೂ, ಎಲ್ಲಾ ಉದ್ದೇಶಿತ ಸಮುದಾಯಗಳು ಮತ್ತು ಗುಂಪುಗಳಿಗೆ ಸಾಕಷ್ಟು ಆಹಾರ ತಲುಪಲು ಸಾಧ್ಯವಾಗಿಲ್ಲ ಎಂದು ವಿಷಾದಿಸಿದ ಅವರು, 2030 ರ ವೇಳೆಗೆ ಜಗತ್ತನ್ನು ಹಸಿವು ಮುಕ್ತಗೊಳಿಸುವ ವಿಶ್ವಸಂಸ್ಥೆಯ ಕರೆಯನ್ನು ಪೂರೈಸಲು ಸಿಎಫ್‌ಟಿಆರ್‌ಐ ಕೆಲಸ ಮಾಡಿ, ಯಶಸ್ವಿಯಾಗಬೇಕು ಎಂದು ಹೇಳಿದರು.

ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಸಂಸ್ಥೆಯ ಸಂಸ್ಥಾಪನಾ ದಿನ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ, ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಸಂಸ್ಥೆಯು 1950 ರ ದಶಕದಲ್ಲಿ ಸ್ಥಾಪನೆಯಾದ ನಂತರದ ವರ್ಷಗಳಲ್ಲಿ ಕಂಡ ಬೆಳವಣಿಗೆ ಮತ್ತು ಸಾಧನೆಗಳನ್ನು ವಿವರಿಸಿದರು.

ಇದೇ ಸಂದರ್ಭದಲ್ಲಿ 20 ಮಂದಿ ಅತ್ಯುತ್ತಮ ವಿಜ್ಞಾನಿಗಳು ಮತ್ತು ಸಂಸ್ಥೆಯ ವಿವಿಧ ವಿಭಾಗಗಳಿಗೆ ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ವಾರ್ಷಿಕ ಪ್ರಶಸ್ತಿ(2021–22)ಗಳನ್ನು ವಿತರಿಸಲಾಯಿತು. ಮುಖ್ಯ ವಿಜ್ಞಾನಿ ಡಾ.ಉಮೇಶ ಹೆಬ್ಬಾರ್ ಸ್ವಾಗತಿಸಿದರು. ಡಾ.ಪಿ.ವಿಜಯಾನಂದ್ ಇನ್ನಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ವಿಜ್ಞಾನಿ ಡಾ. ಪಿ.ವಿಜಯಾನಂದ್ ಮತ್ತಿತರರು ಉಪಸ್ಥಿತರಿದ್ದರು.

ಮುಂದಿನ ಬಾರಿಯಲ್ಲಿ ಜೆಡಿಎಸ್ ಸರ್ಕಾರ ನಡೆಸುತ್ತೆ: ಬ್ರಹ್ಮಾಂಡ ಗುರೂಜಿ



ಹಾಸನ: ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಪಕ್ಷಬಹಳ ಮುಖ್ಯವಾದ ಪಾತ್ರ ವಹಿಸುತ್ತೆ, ಸರ್ಕಾರ ನಡೆಸುತ್ತೆ ಎಂದು ಬ್ರಹ್ಮಾಂಡ ಗುರೂಜಿ ಭವಿಷ್ಯ ನುಡಿದಿದ್ದಾರೆ.

ಎರಡನೇ ಬಾರಿ ಹಾಸನಾಂಬೆ ದೇವಿ ದರ್ಶನ ಪಡೆದ ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ದೇವೇಗೌಡರಿಗೆ ಪರಿಪೂರ್ಣವಾದಂತಹ ಆರೋಗ್ಯ ಸಿಗಲು ಸಲಹೆ ಕೇಳಿದ್ದರು. ದೇವೇಗೌಡರ ಆರೋಗ್ಯಕ್ಕೆ ದೇವಿಯಲ್ಲಿ ಪ್ರಾರ್ಥನೆ ಮಾಡಿ ಅಂತ ಕೇಳಿದ್ದರು. ನಾನು ಎರಡು ಮೂರು ಸಲಹೆ ಕೊಟ್ಟಿದ್ದೇನೆ ಎಂದರು.

ರೇವಣ್ಣ ಅವರು ಮೊದಲಿನಿಂದಲೂ ಬಹಳ ಆಸ್ತಿಕರು. ಅವರ ತಂದೆಯವರ ಆರೋಗ್ಯ ಸುಧಾರಿಸುವುದಕ್ಕೋಸ್ಕರ ಏನು ಮಾಡಬಹುದು ಎಂದು ಪರಿಹಾರ ಹೇಳಿ ಎಂದರು. ಅವರ ಆರೋಗ್ಯ ಬಹಳ ಚೆನ್ನಾಗಿರಲಿ. ಯಡಿಯೂರಪ್ಪ, ಸಿದ್ದರಾಮಯ್ಯ ಬಂದರು ಆರೋಗ್ಯ ನೋಡಿಕೊಳ್ಳಿ ಅಂತ ಹೇಳ್ತಾರೆ ಎಂದು ಹೇಳಿದರು. ಕರ್ನಾಟಕದಿಂದ ಒಬ್ಬ ರೈತ ಪ್ರಧಾನಮಂತ್ರಿ ಆಗಿದ್ದಾರೆ. ಲೋಕೋಪಯೋಗಿ ಸಚಿವರಾಗಿ, ಪ್ರಧಾನಮಂತ್ರಿಯಾಗಿ ಎಲ್ಲಾ ಪ್ರಾಜೆಕ್ಟ್‌ಗಳಿಗೆ ಅನುಮತಿ ನೀಡಿರುವವರು ದೇವೇಗೌಡರು ಒಬ್ಬರೇ ಎಂದರು.

ಕೆ.ಆರ್.ಕ್ಷೇತ್ರದಲ್ಲಿ ಕಾಮಗಾರಿಗಳಿಗೆ ಶಾಸಕ ರಾಮದಾಸ್ ಚಾಲನೆ

ಮೈಸೂರು, ಅ.21(ಎಸ್‌ಪಿಎನ್)– ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಹೈಟೆಕ್ ಬಸ್ ನಿಲ್ದಾಣ ಕಾಮಗಾರಿ ಸೇರಿದಂತೆ ಒಟ್ಟು 12 ಕೋಟಿ ವೆಚ್ಚದ ಕಾಮಗಾರಿಗಳಿಗೆ ಶಾಸಕ ಎಸ್.ಎ. ರಾಮದಾಸ್ ಚಾಲನೆ ನೀಡಿದರು.

ಮೈಸೂರು ನಗರ ಪಾಲಿಕೆ ವಾರ್ಡ್ ವಾರ್ಡ್ ನಂ– 47, 57, 59 ಮತ್ತು 64 ರಲ್ಲಿ ಒಟ್ಟು ರೂ. 12 ಕೋಟಿ ಮೊತ್ತದ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ್ದು, ಅಪೋಲೋ ಆಸ್ಪತ್ರೆಯಿಂದ ಆದಿ ಚುಂಚನಗಿರಿ ಮುಖ್ಯರಸ್ತೆ ಮಾರ್ಗವಾಗಿ ಜಯಮ್ಮ ಗೋವಿಂದೇಗೌಡ ವೃತ್ತದವರಗೆ ಡಾಂಬರೀಕರಣ, ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ಗ್ರಂಥಾಲಯದಿಂದ ಮಾರುತಿ ದೇವಸ್ಥಾನ ಮಾರ್ಗದ ರಸ್ತೆ ಅಭಿವೃದ್ಧಿ, ನ್ಯೂ ಕಾಂತ ರಾಜ ಅರಸ್ ರಸ್ತೆಯಲ್ಲಿರುವ ಕವಿತಾ ಬೇಕರಿ ರಸ್ತೆಯಿಂದ ವಿಶ್ವಮಾನವ ಜೋಡಿ ರಸ್ತೆ ಹಾಗೂ ಉದಯ ರವಿ ರಸ್ತೆ ಮಾರ್ಗದ ರಸ್ತೆ, ಸರ್ವೋದಯ ರಸ್ತೆಯಿಂದ ವಿವೇಕಾನಂದ ವೃತ್ತದ ಮಾರ್ಗವಾಗಿ ಶ್ರೀರಾಂಪುರ ಬಡಾವಣೆಗೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದರು.

ನಂತರ ಕುವೆಂಪುನಗರದಲ್ಲಿರುವ ಶಾಂತಿಸಾಗರ್ ಕಾಂಪ್ಲೆಕ್ಸ್‌ನಿಂದ ಉದಯರವಿ ರಸ್ತೆ ಮಾರ್ಗವಾಗಿ ಕುವೆಂಪುನಗರದ ಬಸ್ ಡಿಪೋ ರಸ್ತೆ ಅಭಿವೃದ್ಧಿ, ವಿವೇಕಾನಂದ ವೃತ್ತದಿಂದ ಬನಶಂಕರಿ ದೇವಸ್ಥಾನದವರೆಗಿನ ರಸ್ತೆ, ವಿವೇಕಾನಂದ ವೃತ್ತದಲ್ಲಿ ನೂತನವಾಗಿ ನಿರ್ಮಿಸಿರುವ ಹೈಟೆಕ್ ಬಸ್ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕ ಎಸ್.ಎ.ರಾಮದಾಸ್, ನಮ್ಮ ಜೊತೆ ಮೇಯರ್ ಶಿವಕುಮಾರ್, ಈ ಭಾಗದ ನಗರ ಪಾಲಿಕೆ ಸದಸ್ಯರು ಹಾಗೂ ಪಕ್ಷದ ಮುಖಂಡರು ಅಭಿವೃದ್ಧಿ ವಿಚಾರವಾಗಿ ಸಾಥ್ ನೀಡಿದ್ದಾರಲ್ಲದೆ, ವಿಶೇಷವಾಗಿ ಈ ಪ್ರದೇಶದಲ್ಲಿ ಯುಜಿಡಿ ಸಮಸ್ಯೆ ಹಲವು ದಿನಗಳಿಂದ ಇತ್ತು. ಈ ಕಾಮಗಾರಿಗೆ 7 ಕೋಟಿ ರೂ. ವೆಚ್ಚದಲ್ಲಿ ಈ ಹಿಂದೆ ಚಾಲನೆ ನೀಡಲಾಗಿದ್ದು, ಆ ಕೆಲಸ ಅಂತಿಮ ಹಂತ ತಲುಪಿದೆ ಎಂದರು.

ಹಾಗಾಗಿ ಅಪೋಲೋ ಮುಂದಿನ ರಸ್ತೆ ಸೇರಿದಂತೆ ಒಟ್ಟು ಆರು ರಸ್ತೆಗಳ ಡಾಂಬರೀಕರಣಕ್ಕೆ ಚಾಲನೆ ನೀಡಲಾಗಿದೆ. ಈ ಕಾಮಗಾರಿಗೆ ಪಾಲಿಕೆ ನಗರೋತ್ಥಾನದಿಂದ 5 ಕೋಟಿ ರೂ. ಬಿಡುಗಡೆಗೊಂಡಿದ್ದು, ಈ ಅನುದಾನದಲ್ಲಿ ವಿವೇಕಾನಂದ ವೃತ್ತ ಸುಸಜ್ಜಿತ ಬಸ್ ಶೆಲ್ಟರ್ ನಿರ್ಮಾಣ ಸೇರಿದೆ ಎಂದು ತಿಳಿಸಿದರು.

ನಮ್ಮ ಕ್ಷೇತ್ರದಲ್ಲಿರುವ 472 ಕಿಮೀ ರಸ್ತೆಯನ್ನು ಇನ್ನು 3 ತಿಂಗಳ ಒಳಗೆ ಡಾಂಬ ರೀಕರಣ ಮಾಡಲಾಗುವುದು. ಹಲವು ದಿನಗಳಿಂದ ಮೈಸೂರಿನಲ್ಲಿ ಧಾರಾಕಾರ ಮಳೆಯಾಗುತ್ತಿರುವುದರಿಂದ ರಸ್ತೆ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಇದಕ್ಕಾಗಿ ಸಾರ್ವಜನಿಕರಲ್ಲಿ ಕ್ಷಮೆಯಾಚಿಸುತ್ತೇನೆ. ಅಂತೆಯೇ ನಮ್ಮ ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ 216 ಕೋಟಿ ರೂ. ಅನುದಾನ ಬಿಡುಗಡೆಗೊಂಡಿದೆ ಎಂದು ಶಾಸಕ ಎಸ್.ಎ. ರಾಮದಾಸ್ ಭರವಸೆ ನೀಡಿದರು.

ಈ ವೇಳೆ ನಗರ ಪಾಲಿಕೆ ಸದಸ್ಯೆ ಚಂಪಕ, ಸ್ಥಳೀಯ ಮುಖಂಡರಾದ ಜಗದೀಶ್, ಶಾಂತ ವೀರಪ್ಪ, ಮಾಯಾ ಜಗದೀಶ್ ಪ್ರಸಾದ್, ಪಚ್ಚು, ಗಿರೀಶ್, ಡಿಪೋ ರವಿ, ಗೋಪಾಲ್, ಉಪೇಂದ್ರ, ಕೇಬಲ್ ಸೋಮು, ಸಂಪತ್, ಅಶೋಕ್ ಅರಸ್, ಸಂಪತ್, ರವಿ ಜೋಡಿ ಬಸವ, ಶ್ರೀಧರ, ರೋಹಿತ್, ವಿನಯ್, ರಮೇಶ್, ಬಸವರಾಜು, ರೂಪ, ಪ್ರಫುಲ್ಲ, ವರಲಕ್ಷ್ಮಿ, ಅನ್ನಪೂರ್ಣ, ಉಮಾ, ಪದ್ಮ, ಆಶಾ, ಕಮಲಮ್ಮ, ಛಾಯಾ, ಗಿರಿಧರ್ ಯಾಧವ್, ಪ್ರದೀಪ್, ಪ್ರಸನ್ನ, ರಾಜೇಶ್, ಮುರಳಿ, ನಾಗರಾಜ್, ಸಂಪತ್, ಚಂದ್ರು, ಗುರುಸ್ವಾಮಿ, ಚಂದ್ರಶೇಖರ್, ಶೋಭ, ಠಾಗೂರ್, ದಿನಕರ್ ವಾಜಪೇಯಿ, ಚಿನ್ನಗಿರಿ ಕೊಪ್ಪಲ್ ಗಿರೀಶ್, ಅನಿಲ್, ರಾಜೀವ್, ಕಾರ್ತಿಕ್, ಮಹೇಶ್, ಮನು ಹೊಯ್ಸಳ, ನಾಗೇಶ, ನಗರಪಾಲಿಕೆ, ಮುಡಾ ಮತ್ತು ಪೋಲಿಸ್ ಅಧಿಕಾರಿಗಳು ಹಾಜರಿದ್ದರು.



ಮೈಸೂರು, ಕೊಡಗು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಇಂದಿನಿಂದ ಐದು ದಿನ ಸಾಧಾರಣ ಮಳೆ



ಮೈಸೂರು, ಅ.21(ಆರ್‌ಕೆಬಿ)– ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಮೈಸೂರು, ಕೊಡಗು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಮುಂದಿನ ಐದು ದಿನ (ಅ.22ರಿಂದ 26ರವರೆಗೆ) ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ಮೈಸೂರು ಜಿಲ್ಲೆಯಲ್ಲಿ ಅ.22 ಮತ್ತು 23ರಂದು ತಲಾ 15 ಮಿ.ಮೀ., 24ರಂದು 8, 25ರಂದು 4 ಮಿ.ಮೀ. ಮಳೆಯಾಗಲಿದೆ. ಕೊಡಗು ಜಿಲ್ಲೆಯಲ್ಲಿ ಈ ಅವಧಿಯಲ್ಲಿ ಕ್ರಮವಾಗಿ 23 ಮಿ.ಮೀ., 24 ಮಿ.ಮೀ., 20 ಮಿ.ಮೀ., 4 ಮಿ.ಮೀ., ಮಂಡ್ಯ ಜಿಲ್ಲೆಯಲ್ಲಿ ಕ್ರಮವಾಗಿ 8, 21, 5, 2ಮಿ.ಮೀ. ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಕ್ರಮವಾಗಿ 14, 12, 8, 4 ಮತ್ತು 26ರಂದು 3 ಮಿ.ಮೀ. ಮಳೆಯಾಗಲಿದೆ ಎಂದು ನಾಗನಹಳ್ಳಿ ಗ್ರಾಮೀಣ ಕೃಷಿ ಹವಾಮಾನ ಕ್ಷೇತ್ರದ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ದೀರ್ಘಾವಧಿ ಹವಾಮಾನ ಮುನ್ಸೂಚನೆಯ ಪ್ರಕಾರ ಅ.28ರಿಂದ 03.11.2022ರವರೆಗೆ ಸರಾಸರಿ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಅಂಗಾಂಗ ದಾನದ ಮೂಲಕ ಐದು ಜೀವ ಉಳಿಸಿದ ಮನೋಜ್ ಶಂಕರ್

ಹೃದಯ ಕವಾಟಗಳು, ಮೂತ್ರಪಿಂಡ, ಯಕೃತ್ತು, ಕಾರ್ನಿಯಾ ದಾನ

ಮೈಸೂರು, ಅ. 21– ಮೈಸೂರಿನ ಹೆಬ್ಬಾಳ ನಿವಾಸಿ, ಮೆಕ್ಯಾನಿಕಲ್ ಇಂಜಿನಿಯರ್, 26 ವರ್ಷ ವಯಸ್ಸಿನ ಜೆ. ಮನೋಜ್ ಶಂಕರ್ ಜೆ.ಸಿ.ನಗರದ ಬಳಿ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು, ಗಂಭೀರ ಸ್ಥಿತಿಯಲ್ಲಿ ಕಳೆದ 17ರ ರಾತ್ರಿ 11.40ಕ್ಕೆ ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿದ್ದರು.

ಆರಂಭಿಕ ಸಿಟಿ ಸ್ಕ್ಯಾನಿಂಗ್‌ನಲ್ಲಿ ಮೆದುಳಿನ ಪ್ರಮುಖ ಭಾಗಕ್ಕೆ ಹಾನಿಯಾಗಿದ್ದು ಗೋಚರಿಸಿತು. ಜೀವ ಬೆಂಬಲ ಮತ್ತು ತೀವ್ರ ನಿಗಾದಡಿ ಅವರನ್ನು ಐಸಿಯುಗೆ ಸ್ಥಳಾಂತರಿಸಲಾಗಿತ್ತು. ಎರಡು ದಿನಗಳ ಕಾಲ ಲೈಫ್ ಸಪೋರ್ಟ್‌ನಲ್ಲಿ ಇರಿಸಲಾಗಿತ್ತು. ಅಕ್ಟೋಬರ್ 20ರ ಬೆಳಗ್ಗೆ 6.49ಕ್ಕೆ, ಮಾನವ ಅಂಗಾಂಗ ಕಸಿ ಕಾಯಿದೆ 1994ರ ಆಸ್ಪತ್ರೆಯ ಪ್ರೋಟೋಕಾಲ್ ಪ್ರಕಾರ ಮೆದುಳಿನ ನಿಷ್ಕ್ರಿಯೆ (ಬ್ರೇನ್ ಡೆಡ್) ಎಂದು ಅಪೋಲೊ ಬಿ.ಜಿ.ಎಸ್ ಆಸ್ಪತ್ರೆಯ ಪ್ಯಾನೆಲ್ಲಿಸ್ಟ್‌ನಲ್ಲಿರುವ ವೈದ್ಯರು ಘೋಷಿಸಿದ್ದರು. ಈ ಮೊದಲು ಮನೋಜ್ ಅವರು ಆರೋಗ್ಯವಾಗಿದ್ದು, ಹಲವಾರು ಪರೀಕ್ಷೆಗಳಿಂದ ಅವರು ಅಂಗಾಂಗ ದಾನಕ್ಕೆ ಅರ್ಹರು ಎಂದು ಖಚಿತಪಡಿಸಲಾಯಿತು. ಅಂಗಾಂಗ ದಾನಕ್ಕಾಗಿ ಅವರ ಕುಟುಂಬದವರಿಗೆ ಸಲಹೆ ಕೂಡ ನೀಡಲಾಯಿತು. ಮನೋಜ್ ಅವರ ಪೋಷಕರಾದ ಜಯಶಂಕರ್ ಮತ್ತು ಶ್ರೀಮತಿ ಜಯಲಕ್ಷ್ಮಿ ಇದಕ್ಕೆ ಸಹಮತ ನೀಡಿದ್ದರು.

ನಿನ್ನೆ ಮಧ್ಯರಾತ್ರಿ ಸುಮಾರಿಗೆ ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯಲ್ಲಿ ಮನೋಜ್ ಅವರ ಅಂಗಗಳನ್ನು (ಹೃದಯ ಕವಾಟಗಳು, 1 ಮೂತ್ರಪಿಂಡ, ಯಕೃತ್ತು ಮತ್ತು ಕಾರ್ನಿಯಾಗಳನ್ನು) ಕಸಿ ಮಾಡಲಾಯಿತು. ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯಿಂದ ಹೃದಯ ಕವಾಟಗಳು (ಜಯದೇವ ಆಸ್ಪತ್ರೆ, ಬೆಂಗಳೂರು), ಲಿವರ್(ಅಪೋಲೊ ಬಿಜಿಎಸ್ ಆಸ್ಪತ್ರೆ ಮೈಸೂರು), ಬಲ ಕಿಡ್ನಿ (ಅಪೋಲೊ ಬಿಜಿಎಸ್ ಆಸ್ಪತ್ರೆ ಮೈಸೂರು), ಕಾರ್ನಿಯಾಸ್ (ಜೆಎಸ್‌ಎಸ್ ಆಸ್ಪತ್ರೆ, ಮೈಸೂರು) ಅಂಗಾಂಗಗಳನ್ನು ವರ್ಗಾಯಿಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.10.2022 ಶನಿವಾರ, ಮಳೆ ನಕ್ಷತ್ರ: ಚಿತ್ತ 11.10.2022 ರಿಂದ 23.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ : ಪೂಷ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಗೊಂಬೆಗಳ ಪ್ರದರ್ಶನ:** ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ. ಸ್ಥಳ: ಇಂಚರ ಕಲಾ ಕ್ಷೇತ್ರ, ವಿಜಯನಗರ. ಬೆಳಗ್ಗೆ 10 ಗಂಟೆಯಿಂದ.

■ **ಅರಿವು ಸಂಸ್ಥೆ :** ಆಯುರ್ವೇದ ದಿನಾಚರಣೆ ಅಂಗವಾಗಿ ಆಯುಷ್ ಆಯುರ್ವೇದ ಜಾಗೃತಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಸರ್ಕಾರಿ ಆಯುರ್ವೇದ ಕಾಲೇಜು ಪ್ರಿನ್ಸಿಪಾಲ್ ಡಾ. ಗಜಾನನ ಹೆಗಡೆ, ಡಾ. ಮನು ಮೆನನ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಕಾಂಗ್ರೆಸ್ ಮುಖಂಡರಾದ ಎನ್.ಎಂ. ನವೀನ್ ಕುಮಾರ್, ಪಾಲಿಕೆ ಸದಸ್ಯೆ ಶೋಭಾ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಸ್ಥಳ: ಇಸ್ಕಾನ್ ದೇವಸ್ಥಾನದ ಪಕ್ಕ, ಜಯನಗರ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ. ಬೆಳಗ್ಗೆಯಿಂದ.

■ **ಪಂಡಿತರತ್ನಂ ಕೆ.ಎಸ್. ವರದಾಚಾರ್ಯ ಶತಮಾನೋತ್ಸವ ಸಮಿತಿ :** ಪಂಡಿತರತ್ನಂ ಕೆ.ಎಸ್. ವರದಾಚಾರ್ಯ ಶತಮಾನೋತ್ಸವ ಸಮಾರಂಭ, ಉಪಸ್ಥಿತರು : ಸೋಂದಾ ಶ್ರೀ ಸ್ವರ್ಣವಲ್ಲೀ ಮಹಾ ಸಂಸ್ಥಾನದ ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಪರಕಾಲ ಮಠದ ಶ್ರೀ ಮದಭಿನವ ವಾಗೀಶ ಬ್ರಹ್ಮತಂತ್ರ ಮಹಾಸ್ವಾಮಿಗಳು, ಉದ್ಘಾಟನೆ : ಮಾನವ ಸಂಪನ್ಮೂಲ ವಿಕಾಸ ಮಂತ್ರಾಲಯ ಸಚಿವ ಧರ್ಮೇಂದ್ರ ಪ್ರಧಾನ್, ಸಮನ್ವಯ ವರದ–ಸಂಸ್ಕರಣ ಗ್ರಂಥ ಲೋಕಾರ್ಪಣೆ: ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿದ್ವತ್ಸಮ್ಮಾನ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕುಲಪತಿ ಡಾ. ಪ್ರೊ. ಕೆ.ಇ. ದೇವನಾಥನ್, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ. ರಾಮದಾಸ್, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್.ಎಸ್. ಸಚ್ಚಿದಾನಂದಮೂರ್ತಿ, ಸಂವಾನ ಸ್ವೀಕಾರ : ನವದೆಹಲಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ ವಿಶ್ರಾಂತ ಕುಲಪತಿ ವಿದ್ವಾನ್ ಡಾ. ಪರಮೇಶ್ವರ ನಾರಾಯಣ ಶಾಸ್ತ್ರಿ, ತಿರುಪತಿ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ನಿರ್ದೇಶಕ ವಿದ್ವಾನ್ ಡಾ. ಚಕ್ರವರ್ತಿ ರಂಗನಾಥನ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾಲಯ, ಸಾಮಾಜಿಕ ಕೆಲಸ ಅಧ್ಯಯನ ವಿಭಾಗ :** ಉದ್ಯೋಗ ಕೌಶಲ್ಯಗಳು ಮತ್ತು ನೇಮಕಾತಿ ಅಭಿಯಾನ ಕುರಿತು ಕಾರ್ಯಾಗಾರ, ಉದ್ಘಾಟನೆ : ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಜಿ.ಎಸ್. ಸೋಮಶೇಖರ್, ಗೌರವ ಅತಿಥಿಗಳು : ಮಾನವ ಸಂಪನ್ಮೂಲ ಅಧಿಕಾರಿ ಜಿ.ಬಿ. ಪ್ರಶಾಂತ್, ಅಧ್ಯಕ್ಷತೆ : ಸಾಮಾಜಿಕ ಕೆಲಸ ಅಧ್ಯಯನ ವಿಭಾಗದ ಅಧ್ಯಕ್ಷೆ ಹೆಚ್.ಪಿ.ಜ್ಯೋತಿ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ.ಎಸ್. ಶೇಖರ್, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಕುಲಪತಿ ಪ್ರೊ. ಟಿ.ಎಂ. ಭಾಸ್ಕರ್ ಅವರಿಂದ ಕರ್ನಾಟಕದ ಬೌದ್ಧ ವಿಹಾರಗಳ ಸಾಂಸ್ಕೃತಿಕ ಮಹತ್ವ ಕುರಿತು ಉಪನ್ಯಾಸ, ಅಧ್ಯಕ್ಷತೆ : ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ. ಎಸ್. ನರೇಂದ್ರಕುಮಾರ್, ಉಪಸ್ಥಿತರು : ಪ್ರಾಧ್ಯಾಪಕ ಪ್ರೊ. ಜೆ. ಸೋಮಶೇಖರ್, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಬೆಳಗ್ಗೆ 11.30ಕ್ಕೆ

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಸಂಗೀತ ವಿದುಷಿ ಕು. ಲಕ್ಷ್ಮಿ ಹೆಚ್.ಕೆ. ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಶೃತಿ–ಪಿಟೀಲು, ವಿದ್ವಾನ್ ಪ್ರಹ್ಲಾದ್–ಮೃದಂಗ, ಸ್ಥಳ: ಶ್ರೀರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಿಪಾಲಾನಂದ ಅವರಿಂದ ದುಃಖದಿಂದ ಮುಕ್ತಿ, ನಾವು ನಿಜವಾಗಿಯೂ ಸ್ವತಂತ್ರರಾಗಬಹುದೇ? ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಅಂತರಂಗ ಬಹಿರಂಗ ಹಾಗೂ ಕಲ್ಪವೃಕ್ಷ ಸಂಸ್ಥೆ :** ಅಂತರಂಗ ಬಹಿರಂಗ ತಂಡದಿಂದ ಯಥಾ ಪ್ರಕಾರ ನಾಟಕ ಪ್ರದರ್ಶನ, ನಿರ್ದೇಶನ : ಭೀಷ್ಮ ರಾಮಯ್ಯ, ಸಂಗೀತ : ಮೇಘನಾ ಹುಳಿಯಾಳ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು–ರಚನೆ ಮತ್ತು ಪ್ರಸ್ತುತಿ– ಡಾ.ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ–ಎನ್. ಅಪರ್ಣ, 10.00 ಡಿ. ಬಾಲಕೃಷ್ಣ – ವೀಣಾವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ದೊಡ್ಡಗವಿ ಬಸಪ್ಪ ಮತ್ತು ತಂಡ, 1.20 ಭಾವಗೀತೆ, 3.30 ಮಕ್ಕಳ ಮಂಟಪ–ಮುಖಾಮುಖಿ–ಪರಸರ ಸ್ವಚ್ಛತೆಯಲ್ಲಿ ಮಕ್ಕಳ ಪಾತ್ರ ನಡೆಸಿಕೊಡುತ್ತಾರೆ ರಂಜನ್ ಬೆಲ್ಲರ್ ಪಾಡಿ–ಭಾಗವಹಿಸುವ ಮಕ್ಕಳು–ಅನಂತ ವಾಸುಕಿ ರಾವ್, ಆದಿತ್ಯ ವಿ., 4.00 ನಾಟಕ, 4.30 ನೆನಪಿನಂಗಳ–ಹಿರಿಯ ಚಿತ್ರ ಸಾಹಿತಿ ಜಿ.ವಿ. ಅಯ್ಯರ್ ಅವರೊಂದಿಗೆ ಎನ್.ವಿ.ರಮೇಶ್ ಅವರು ನಡೆಸಿರುವ ಸಂವಾದ, 6.50 ಕೃಷಿರಂಗ–"ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 9.00 ಕನಕ ಗಾನಾಮೃತ–ಕನಕದಾಸರ ಪದಗಳನ್ನಾಧರಿಸಿದ ಬಾನುಲಿ ಸರಣಿ, ಲೇಖನ–ಡಾ. ಶ್ರೀಧರ ಹೆಗಡೆ ಭದ್ರನ್, ನಿರ್ಮಾಣ– ದಿವಾಕರ ಹೆಗಡೆ, 9.15 ಹಬ್ಬಗಳು ನಮ್ಮ ಸಂಪತ್ತು–ಮಾತನಾಡುತ್ತಾರೆ –ಡಾ.ವಿಜಯಲಕ್ಷ್ಮಿ ಮನಾಪುರ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿನೋದ್ ದಿಗ್ರಾಜ್ ಕರ್–ಗಾಯನ, ರೋಹಿತ್ ಮಜುಂದಾರ್–ತಬಲಾ ಸೋಲೋ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 22 ಶನಿವಾರ 2022

ಸಂಪುಟ: 43 | ಸಂಚಿಕೆ: 186 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ

ರಸಾಯನಶಾಸ್ತ್ರ ಲ್ಯಾಬ್ ಭಾಗ ಕುಸಿತ



● ಅದೃಷ್ಟವಶಾತ್ ವಿದ್ಯಾರ್ಥಿನಿಯರು, ಸಿಬ್ಬಂದಿ, ಉಪನ್ಯಾಸಕರು ಪಾರು ● ಕಟ್ಟಡದ ಸುತ್ತಮುತ್ತ ಸುದೈವವಶಾತ್ ಯಾರೂ ಇಲ್ಲದ್ದು ಮತ್ತೊಂದು ಪವಾಡವೇ ಸರಿ

ಮೈಸೂರು,ಅ.21(ಎಂಟಿವೈ)–ಕುಸಿದ ಮೈಸೂರಿನ ಪಾರಂಪರಿಕ ಕಟ್ಟಡಗಳ ಸಾಲಿಗೆ ಶತಮಾನದ ಇತಿಹಾಸವಿರುವ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡವೂ ಸೇರ್ಪಡೆಗೊಂಡಿದೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಣಿ ವಿಜ್ಞಾನ ಕಾಲೇಜಿನ ಕಟ್ಟಡದ ಒಂದು ಭಾಗ ಈಗಾಗಲೇ ಶಿಥಿಲಾವಸ್ಥೆ ತಲುಪಿದ್ದು, ನಿರಂತರ ಮಳೆಯಿಂದ ಕಾಲೇಜಿನ ಪ್ರಯೋಗಾಲಯ ಇರುವ ಕೊಠಡಿ ಭಾಗ(ಜೆಎಲ್‌ಬಿ ರಸ್ತೆ–ಡಿಸಿ ಕಚೇರಿ ರಸ್ತೆ) ಶುಕ್ರವಾರ ಬೆಳಗ್ಗೆ ಸುಮಾರು 10.42ರ ಸಮಯದಲ್ಲಿ ಕುಸಿದಿದೆ. ತರಗತಿ ಆರಂಭವಾಗಬೇಕಿದ್ದ ಕೆಲವೇ ನಿಮಿಷಗಳ ಮುನ್ನ ಕಟ್ಟಡದ ಮೊದಲ ಹಂತದಲ್ಲಿರುವ ರಸಾಯನಶಾಸ್ತ್ರ ವಿಭಾಗದ ಪ್ರಯೋಗಾಲಯದ ಮೇಲ್ಛಾವಣಿ ಹಾಗೂ ಎರಡು ಬದಿ ಗೋಡೆ ಕುಸಿದಿದ್ದು, ▶ 7ನೇ ಪುಟಕ್ಕೆ

ಪ್ರಾಂಶುಪಾಲ ಡಾ.ರವಿ, ವಿಭಾಗದ ಮುಖ್ಯಸ್ಥ ಡಾ.ಪದ್ಮನಾಭರ ಸಮಯಪ್ರಜ್ಞೆ, ಎಚ್ಚರಿಕಾ ಕ್ರಮದಿಂದ ತಪ್ಪಿದ ಭಾರೀ ಅನಾಹುತ

● ಒಂದು ಪಾಳಿಗೆ 40 ವಿದ್ಯಾರ್ಥಿನಿಯರು ಪ್ರಯೋಗ ನಡೆಸುತ್ತಿದ್ದರು; ನೂರಾರು ಮಂದಿ ಪಾಠ ಕೇಳುತ್ತಿದ್ದರು. ● ಗಾರೆ ಉದುರುವುದು, ನೀರು ಜಿನುಗುವುದು ಕಂಡು ಎಚ್ಚೆತ್ತ ಪ್ರಿನ್ಸಿಪಾಲ್, ವಿಭಾಗ ಮುಖ್ಯಸ್ಥರು ● ಲ್ಯಾಬ್ ಬೀಗ ಜಡಿದ ಏಳೇ ನಿಮಿಷದಲ್ಲಿ ಕಟ್ಟಡ ಕುಸಿತ

■ ಪೂರ್ಣ ವರದಿ ಪುಟ–7

ಚಾಮುಂಡಿಬೆಟ್ಟದಲ್ಲಿ ಮತ್ತೆ ಭೂಕುಸಿತ

ಮಳೆ ನಿಂತ ಮೇಲೆ ದುರಸ್ತಿಗೆ ಸಿದ್ಧತೆ



ಮೈಸೂರು, ಅ. 21 (ಆರ್‌ಕೆ)– ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಮೈಸೂರಿನ ಚಾಮುಂಡಿಬೆಟ್ಟದ ನಂದಿ ಪ್ರತಿಮೆ ರಸ್ತೆಯಲ್ಲಿ ವ್ಯೂ ಪಾಯಿಂಟ್ ಬಳಿ ಕಳೆದ ರಾತ್ರಿ ಮತ್ತೆ ಭೂ ಕುಸಿತ ಉಂಟಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಲೋಕೋಪಯೋಗಿ ಇಲಾಖೆ ಇಂಜಿನಿಯರ್ ರಘು, ಸಿಬ್ಬಂದಿಗಳೊಂದಿಗೆ ಇಂದು ಬೆಳಗ್ಗೆ ಸ್ಥಳ ಪರಿಶೀಲನೆ ನಡೆಸಿ, ಮಾಹಿತಿ ಕಲೆ ಹಾಕಿದರು. ಈ ಹಿಂದೆಯೂ ಚಾಮುಂಡಿಬೆಟ್ಟದ ನಂದಿ ಪ್ರತಿಮೆ ರಸ್ತೆಯಲ್ಲಿ ▶ 9ನೇ ಪುಟಕ್ಕೆ

ಜನವರಿಯಲ್ಲಿ ಚಾಮುಂಡೇಶ್ವರಿಗೆ ಚಂಡಿಕಾ ಹೋಮ ಮಾಡಿಸಿ ಜೆಡಿಎಸ್‌ನಿಂದ ಚುನಾವಣಾ ಕಾರ್ಯ ಆರಂಭ


ಮೈಸೂರು, ಅ.21– ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ಜನವರಿಯಲ್ಲಿ ಚಾಮುಂಡೇಶ್ವರಿ ತಾಯಿಗೆ ಚಂಡಿಕಾ ಹೋಮ ಮಾಡಿಸಿ, 2023ರ ಚುನಾವಣಾ ಕಾರ್ಯವನ್ನು ಇಲ್ಲಿಂದಲೇ ಆರಂಭಿಸುತ್ತಾರೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಹೇಳಿದರು. ಚಾಮುಂಡಿ ಬೆಟ್ಟದಲ್ಲಿ ಇಂದು ಹೆಚ್.ಡಿ.ದೇವೇಗೌಡರು ಚಾಮುಂಡೇಶ್ವರಿ ತಾಯಿಗೆ ವಿಶೇಷ ಪೂಜೆ ಸಲ್ಲಿಸಿದ ವೇಳೆ ಅವರೊಂದಿಗಿದ್ದ ▶ 9ನೇ ಪುಟಕ್ಕೆ

ಜಿ.ಟಿ.ದೇವೇಗೌಡರಿಗೆ ಮೈಸೂರು ಜಿಲ್ಲೆ ಸಂಪೂರ್ಣ ಜವಾಬ್ದಾರಿ

● ಇದನ್ನು ಒಪ್ಪದವರು ಪಕ್ಷದಿಂದ ಹೊರ ಹೋಗಬಹುದು ● ದಿವಂಗತ ಚಿಕ್ಕಮಾದು ಎಂಎಲ್‌ಸಿ ಮಾಡಿದ್ದು ಜಿ.ಟಿ.ದೇವೇಗೌಡರೇ...

ಮಾಜಿ ಪ್ರಧಾನಿ ದೇವೇಗೌಡರ ಘೋಷಣೆ

ಮೈಸೂರು, ಅ.21–ಮೈಸೂರು ಜಿಲ್ಲೆಯ ಸಂಪೂರ್ಣ ಜವಾಬ್ದಾರಿಯನ್ನು ಜಿ.ಟಿ.ದೇವೇಗೌಡರಿಗೆ ನೀಡಲು ತೀರ್ಮಾನಿಸಲಾಗಿದೆ ಎಂದು ಮಾಜಿ ಪ್ರಧಾನಿಯೂ ಆದ ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡ ಇಂದಿಲ್ಲಿ ಹೇಳಿದರು. ಇಂದು ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಜಿ.ಟಿ.ದೇವೇಗೌಡರಿಗೆ ಮೈಸೂರು ಜಿಲ್ಲೆಯ ಜವಾಬ್ದಾರಿ ನೀಡುವ ಬಗ್ಗೆ ಎಲ್ಲರೂ ಒಗ್ಗಟ್ಟಿನಿಂದಲೇ ತೀರ್ಮಾನ ಮಾಡಿದ್ದೇವೆ. ಆಗ ಸಾ.ರಾ. ಮಹೇಶ್ ಕೂಡ ಇದ್ದರು ಎಂದ ಅವರು, ಈ ತೀರ್ಮಾನದಲ್ಲಿ ಒಂದು ಸಣ್ಣ ಲೋಪವೂ ಇಲ್ಲ. ಲೋಪವಿದೆ




ಎಂದು ಅನಿಸಿದವರು ಪಕ್ಷದಿಂದ ಹೊರ ಹೋಗಬಹುದು ಎಂದು ನಿಷ್ಠೂರವಾಗಿ ಹೇಳಿದರು. ಜಿ.ಟಿ.ದೇವೇಗೌಡರ ನಾಯಕತ್ವಕ್ಕೆ ಯಾವುದೇ ವಿರೋಧ ಬರಬಾರದು. ಇಂತಹ ವಿರೋಧಗಳಿಗೆಲ್ಲಾ ಅಂತ್ಯ ಹಾಡಬೇಕು. ಈ ಹಿಂದೆ ಹಲವಾರು ಘಟನೆಗಳು ನಡೆದಿವೆ. ಅದನ್ನೆಲ್ಲಾ ಸಹಿಸಿಕೊಂಡಿದ್ದೇವೆ ▶ 9ನೇ ಪುಟಕ್ಕೆ



ತಾವು ಚಾಮುಂಡೇಶ್ವರಿಯಿಂದ, ಪುತ್ರ ಹುಣಸೂರಿಂದ ಸ್ಪರ್ಧೆ



ಪ್ರಶ್ನೆಯೊಂದಕ್ಕೆ ಉತ್ತರಿಸಿದ ಜಿ.ಟಿ. ದೇವೇಗೌಡರು, ತಾವು ಚಾಮುಂಡೇಶ್ವರಿ ಕ್ಷೇತ್ರದಲ್ಲಿ, ಪುತ್ರ ಜಿ.ಡಿ.ಹರೀಶ್‌ಗೌಡ ಹುಣಸೂರಿನಲ್ಲಿ ಸ್ಪರ್ಧಿಸುವುದಾಗಿ ಹೇಳಿದರಲ್ಲದೆ, ಹಾಲಿ ಶಾಸಕರಾಗಿರುವ ಸಾ.ರಾ. ಮಹೇಶ್ ಕೆ.ಆರ್.ನಗರದಲ್ಲಿ ಮತ್ತು ಅಶ್ವಿನ್‌ಕುಮಾರ್ ತಿ.ನರಸೀಪುರದಲ್ಲಿ ಸ್ಪರ್ಧಿಸುತ್ತಾರೆ. ಹೆಚ್.ಡಿ.ಕೋಟೆ ಕ್ಷೇತ್ರದ ಬಗ್ಗೆಯೂ ಚರ್ಚೆ ನಡೆದಿದ್ದು, ಮಾಜಿ ಶಾಸಕ ಚಿಕ್ಕಣ್ಣ ಅವರ ಪುತ್ರ ಜಯಪ್ರಕಾಶ್ ಮತ್ತು ಮತ್ತೋರ್ವ ಆಕಾಂಕ್ಷಿ ಕೃಷ್ಣ ಅವರನ್ನು ಕರೆದು ವರಿಷ್ಠರು ಮಾತನಾಡಿದ್ದಾರೆ. ಜಯಪ್ರಕಾಶ್ ಅವರಿಗೆ ಬಹುತೇಕವಾಗಿ ಟಿಕೆಟ್ ಅಂತಿಮವಾಗಬಹುದು ಎಂದು ಹೇಳಿದರು.



ಬೆಟ್ಟದಲ್ಲಿ ಝರಿ ಸಂಭ್ರಮ...

ಚಾಮುಂಡಿಬೆಟ್ಟದಲ್ಲಿ ಈಗ ಝರಿಗಳ ಸಂಭ್ರಮ. ಭಾರೀ ಮಳೆಯಿಂದಾಗಿ ಬೆಟ್ಟದಲ್ಲಿ ಭಾರೀ ಪ್ರಮಾಣದ ಝರಿಗಳು ಸೃಷ್ಟಿಯಾಗಿವೆ. ಮಳೆಯಿಂದ ಬೆಟ್ಟದೆಲ್ಲೆಡೆ ನೀರು ಜಿನುಗುತ್ತಿದೆ. ಜನ ಮಕ್ಕಳೊಂದಿಗೆ ಅಲ್ಲಲ್ಲಿ ರಸ್ತೆ ಬದಿ ಕಂಡು ಬರುತ್ತಿರುವ ಝರಿಗಳಲ್ಲಿ ಕುಣಿದು ಕುಪ್ಪಳಿಸಿ, ಫೋಟೋ ತೆಗೆಸಿಕೊಂಡು ಸಂಭ್ರಮಿಸುತ್ತಿದ್ದಾರೆ. ಮತ್ತೆ ಕೆಲವೆಡೆ ಪುಟ್ಟ ಜಲಪಾತವೇ ಸೃಷ್ಟಿಯಾಗಿದೆ.

ನಕ್ಕರೆ ಅದೇ ಸ್ವರ್ಗ

ಗಂಡ : ನೀನು ಒಮ್ಮೆಯಾದ್ರೂ ಪ್ರೇಮದಿಂದ ಮಾತಾಡಿದೀಯೇನೆ ನನ್ನ ಜೊತೆ. ಯಾವಾಗ್ಲೂ ವಟವಟಾಂತ ಏನಾದರೂ ಅನ್ನುತ್ಲೆ ಇರುತ್ತಿ.

ಹೆಂಡತಿ : ಪ್ರೇಮದಿಂದ ಮಾತಾಡೋದಕ್ಕೆ ನಾನೇನು ನಿಮ್ಮ ಪ್ರೇಯಸೀನಾ? ನಾನು ನಿಮ್ಮ ಹೆಂಡ್ತಿ ಅನ್ನೋದನ್ನ ನೆನಪಿನಲ್ಲಿಟ್ಟುಕೊಳ್ಳಿ..!

ಮೈಸೂರು ಮಿತ್ರ

ಶನಿವಾರ, 22 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಒಳ್ಳೆಯ ಮಿತ್ರರನ್ನು ಹುಡುಕುವ ಮೊದಲು ನಾವು ಒಳ್ಳೆಯ ಮಿತ್ರರಾಗುವುದು ಅಗತ್ಯ –ಸಿಸಿರೊ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬರುವುದು ಕಡಿಮೆಯಾದರೂ ತೆರವುದು ತಪ್ಪಲಿಲ್ಲ

ನಿಮ್ಮ ಪತ್ರಗಳು

ರಸ್ತೆಗಳ ಗುಂಡಿ–ಹೊಂಡಾ ತುರ್ತಾಗಿ ಮುಚ್ಚಿ!

ಮಾನ್ಯರೆ,

ಕಳೆದ ಹಲವು ತಿಂಗಳುಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ರಾಜ್ಯದ ಕೆಲವು ಪ್ರಮುಖ ಹೆದ್ದಾರಿ ರಸ್ತೆಗಳಿಗೆ ಹೆಚ್ಚು ಹಾನಿಯಾಗಿದೆ. ಇದರ ಜೊತೆಗೆ ಗ್ರಾಮೀಣ ಭಾಗದ ರಸ್ತೆಗಳು ಕೂಡ ಮಳೆಗೂ ಮುಂಚೆಯೇ ಹಾಳಾಗಿದ್ದು, ಪ್ರಸ್ತುತ ಮಳೆಯಿಂದಾಗಿ ಹೊಂಡಾ–ಗುಂಡಿಗಳು ಮತ್ತಷ್ಟು ಹೆಚ್ಚಾಗಿವೆ. ಕೆಲವು ಕಡೆಗಳಲ್ಲಿ ಮಳೆಯು ಕಳಪೆ ಕಾಮಗಾರಿಯನ್ನು ಬಟಾ ಬಯಲು ಮಾಡಿದೆ! ಪ್ರವಾಹದಿಂದ ಆಗಿರುವ ರಸ್ತೆ ಹಾನಿಯಿಂದ ಗ್ರಾಮೀಣ ಹಾಗೂ ನಗರ ಭಾಗದಲ್ಲಿ ಸಂಚಾರವೇ ದುಸ್ತರವಾಗಿದೆ. ರಾಜ್ಯ ಹೆದ್ದಾರಿ, ಜಿಲ್ಲಾ ಹಾಗೂ ತಾಲೂಕು ರಸ್ತೆಗಳಲ್ಲಿ ವಾಹನ ಓಡಿಸುವುದೆಂದರೆ ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ. ಗುಂಡಿ ಬಿದ್ದ ರಸ್ತೆಯಲ್ಲಿ ಜನ ಸಂಚಾರಕ್ಕೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇದರಿಂದ ರಸ್ತೆಗಳಲ್ಲಿ ಗುಂಡಿ ಬಿದ್ದ ಜಾಗದಲ್ಲಿ ನೀರು ತುಂಬಿ ಯಾವುದು ರಸ್ತೆ, ಯಾವುದು ಗುಂಡಿ ಎಂಬುದರ ವ್ಯತ್ಯಾಸ ಗೊತ್ತಾಗದೆ ಅಪಘಾತ ಸಂಭವಿಸುತ್ತಿವೆ. ಅಲ್ಲದೇ ರಸ್ತೆಯ ಗುಂಡಿಗಳಲ್ಲಿ ಕೆಲವರು ತಮ್ಮ ಜೀವವನ್ನೇ ಬಲಿ ಕೊಟ್ಟಿದ್ದಾರೆ. ಇದರ ಜೊತೆಗೆ ಗುಂಡಿಮಯ ರಸ್ತೆಯಲ್ಲಿ ವಾಹನಗಳ ಸಂಚಾರ ವೇಗ ಶೇ. 50ರಷ್ಟು ಕಡಿಮೆಯಾಗಿದೆ ಹಾಗೂ ವಾಹನಗಳಿಗೆ ಇಂಧನ ಕೂಡ ಜಾಸ್ತಿ ಖರ್ಚಾಗುತ್ತಿದೆ. ವಾಹನ ಮತ್ತು ಆರೋಗ್ಯ ಎರಡೂ ಕೂಡ ಹಾಳಾಗುತ್ತಿವೆ. ಹೀಗಾಗಿ ಸರ್ಕಾರ ರಸ್ತೆಗಳಲ್ಲಿ ಗುಂಡಿ ಬಿದ್ದಿರುವ ಹೊಂಡಾಗಳನ್ನು ತುರ್ತಾಗಿ ಮುಚ್ಚಿಸಿ, ಪ್ರಯಾಣಿಕರ ಜೀವ ರಕ್ಷಣೆಯತ್ತ ಹೆಚ್ಚಿನ ಗಮನ ಕೊಡಬೇಕಿದೆ.

–ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ಹಾಲಿನ ಬೆಲೆ ಏರಿಕೆಯ ಪ್ರಸ್ತಾಪ

ಮಾನ್ಯರೆ,

ಅಕ್ಟೋಬರ್ 14 ರಿಂದ ಅನ್ವಯವಾಗುವ ರೀತಿ ಈಗಾಗಲೇ ಮೈಮುಲ್ ತುಪ್ಪದ ಬೆಲೆಯನ್ನು ಲೀಟರ್‌ಗೆ ರೂ.40 ನಂತೆ ಸದ್ದು ಗದ್ದಲವಿಲ್ಲದೆ ಏರಿಸಿದೆ. ವಿದ್ಯುತ್ ಇಲಾಖೆ ವರ್ಷದಲ್ಲಿ ಈಗಾಗಲೇ ಮೂರು ಬಾರಿ ದರ ಏರಿಸಿ ಗ್ರಾಹಕರನ್ನು ಹೈರಾಣು ಮಾಡಿದೆ. ಜೊತೆಗೆ ಮೈಸೂರು ಪಾಕ್, ಪೇಡಾ, ಮತ್ತಿತರ ಉಪ ಉತ್ಪನ್ನಗಳ ಬೆಲೆಗೆ ಸರ್ಕಾರದ ನಿಯಂತ್ರಣವೇ ಇಲ್ಲ. ಇವುಗಳಿಗನುಗುಣವಾಗಿ ಇತರೆ ದಿನಬಳಕೆ ಪದಾರ್ಥಗಳ ಬೆಲೆಯೂ ಹೆಚ್ಚಿದೆ. ಇವುಗಳು ಸಾಲದೆಂಬಂತೆ ಸಹಕಾರ ಸಚಿವರು ಎರಡು ದಿನಗಳ ಹಿಂದೆ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜ್ಯದ ಹದಿನಾರು ಒಕ್ಕೂಟಗಳಿಂದ ಹಾಲಿನ ದರ ಏರಿಕೆಯ ಪ್ರಸ್ತಾಪ ಬಂದಿದ್ದು, ರೈತರಿಗೆ ಅನುವಾಗುವಂತೆ ಇದರ ಬಗ್ಗೆ ಪರಿಶೀಲಿಸಲಾಗುವುದು ಎಂದಿದ್ದಾರೆ. ಅಂದರೆ ಮತ್ತೆ ಬೆಲೆ ಏರಿಕೆಯೇ ಹೌದಲ್ಲವೇ! ರೈತರು ಎಂದಾಕ್ಷಣ ಸರ್ಕಾರ ಒಪ್ಪಿಗೆ ಖಂಡಿತಾ ನೀಡುತ್ತದೆ. ಮತ್ತೆ ಹಾಲಿನ ಬೆಲೆ ಏರಿಕೆ, ಮೊಸರು, ತುಪ್ಪ, ಇತ್ಯಾದಿ ಉಪ ಉತ್ಪನ್ನಗಳ ಬೆಲೆ ಏರುವುದರಲ್ಲಿ ಸಂಶಯವೇ ಇಲ್ಲ. ಒಟ್ಟಾರೆ, ಸರ್ಕಾರ ಯಾವುದಾದರೇನು, ಬೆಲೆ ಏರಿಕೆ ಉಪದ್ರವ ತಪ್ಪಿದ್ದಲ್ಲ. ಜನಸಾಮಾನ್ಯನಿಗೆ ದರಗಳ ಹೊಡೆತ ತಪ್ಪವುದೂ ಇಲ್ಲ. ಸರ್ಕಾರಿ ನೌಕರರಿಗಾದರೆ ವರುಷದಲ್ಲಿ ಎರಡು ಬಾರಿ ಡಿಎ ಪರಿಷ್ಕರಣೆ ಮತ್ತು ವರ್ಷವಾರು ವೇತನ ಬಡ್ತಿ. ಹಾಗಾದರೆ ಖಾಸಗಿ ಮತ್ತು ಇತರೆ ಅಸಂಘಟಿತ ವಲಯದವರ ಪಾಡು ದೇವರೇ ಬಲ್ಲ.

–ವಿಜಯ್ ಹೆಮ್ಮಿಗೆ, ಮೈಸೂರು

ಪ್ರಾಥಮಿಕ ಚಿಕಿತ್ಸಾ ತರಬೇತಿ ನೀಡಿ

ಮಾನ್ಯರೆ,

ದೀಪಾವಳಿ ಹಬ್ಬವೆಂದರೆ ಎಲ್ಲೆಡೆ ಸಂಭ್ರಮ ಮಕ್ಕಳಿಗಂತೂ ಪಟಾಕಿ ಸಿಡಿಸುವುದರಲ್ಲಿ ಎಲ್ಲಿಲ್ಲದ ಆನಂದ. ಆದರೆ ಈ ಹಬ್ಬದ ಸಂದರ್ಭದಲ್ಲಿ ಎಷ್ಟೇ ಎಚ್ಚರಿಕೆ ವಹಿಸಿದರೂ ಅನೇಕ ಅವಘಡಗಳು ನಡೆಯುತ್ತವೆ. ಆದ್ದರಿಂದ ಇಂತಹ ಸಂದರ್ಭದಲ್ಲಿ ಸಾರ್ವಜನಿಕರಿಗೆ ಎಲ್ಲೆಡೆ ಪ್ರಾಥಮಿಕ ಚಿಕಿತ್ಸೆಯ ತರಬೇತಿ ನೀಡಲಿ. ಶಾಲಾ ಕಾಲೇಜು ಮಕ್ಕಳಲ್ಲಿ ಪಟಾಕಿ ಸಿಡಿಸುವ ಬಗ್ಗೆ ಹಾಗೂ ಅದರಿಂದ ಆಗುವ ಅನಾಹುತದ ಬಗ್ಗೆ ತಿಳಿಸಿದರೆ ಮಕ್ಕಳಿಗೆ ಎಚ್ಚರಿಕೆ ನೀಡಿದಂತಾಗುತ್ತದೆ. ಪಟಾಕಿಯ ದುರಂತವನ್ನು ತಪ್ಪಿಸಿದಂತಾಗುತ್ತದೆ. ಪರಿಸರದ ಅರಿವು ಮೂಡಿಸಬೇಕು. ವಿದ್ಯುತ್ ದೀಪ ಹಚ್ಚಿ ಪೋಲು ಮಾಡುವ ಬದಲು ಕುಂಬಾರ ಮಾಡಿದ ಹಣತೆ ದೀಪ ಹಚ್ಚಿ ಬೆಳಕಿನ ಜೊತೆ ಕುಂಬಾರನಿಗೆ ಈ ಸಂದರ್ಭದಲ್ಲಿ ಹಣ ಗಳಿಕೆಗೆ ಅವಕಾಶ ನೀಡಿದಂತಾಗುತ್ತದೆ ಅವನ ಜೀವನವು ಸುಖಮಯವಾಗಿರುತ್ತದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು

ಹಿರಿಯ ನಾಗರಿಕರ ದಿನದ ಔಚಿತ್ಯವೇನು?

ಮಾನ್ಯರೆ,



ಹಿರಿಯ ನಾಗರಿಕರ ದಿನಾಚರಣೆ ಎಂದು ವೇದಿಕೆಗಳಲ್ಲಿ ಉದ್ದುದ್ದ ಭಾಷಣ ಬಿಗಿಯುತ್ತಾ ಬಾಯುಪಚಾರ ಮಾಡುತ್ತಾ ಅನೇಕರ ಸಮಯವನ್ನು ವ್ಯರ್ಥ ಮಾಡುವುದಕ್ಕಿಂತ ಹಿರಿಯ ನಾಗರಿಕರಿಗೆ ಅನುಕೂಲತೆಗಳನ್ನು ಒದಗಿಸುವ ಕೆಲಸ ಮಾಡಿದರೆ ತುಸುಮಟ್ಟಿನ ಪ್ರಯೋಜನವಾಗುತ್ತಿತ್ತು. ಏಕೆಂದರೆ ವಯಸ್ಸಾದವರು ಪಡುತ್ತಿರುವ ಕಷ್ಟಗಳು ಇತರ ಅಧಿಕಾರಿಗಳಿಗೆ ಅರ್ಥವಾಗುವುದಿಲ್ಲ. ಕೇವಲ ಶೇ. ಅರ್ಧದಷ್ಟು ಬಡ್ಡಿಯನ್ನು ಹೆಚ್ಚಿಸಿದರೆ ಅವರ ದೈಹಿಕ ಅನಾನುಕೂಲತೆಗಳ ಬಗ್ಗೆ ಯೋಚಿಸಿದ್ದೀರಾ? ಅಂಚೆ ಕಚೇರಿ, ಬ್ಯಾಂಕ್ ಮುಂತಾದ ಅನೇಕ ಕಚೇರಿಗಳು ಒಂದನೆಯ ಅಥವಾ ಎರಡನೆಯ ಮಹಡಿಯ ಮೇಲಿವೆ. ಬಸ್ಸುಗಳಲ್ಲಿ ಕೇವಲ ಎರಡು ಸೀಟು ಹಿರಿಯ ನಾಗರಿಕರಿಗೆ. ಅದೂ ಯುವಕ ಯುವತಿಯರಿಂದ ಆಕ್ರಮಿಸಲ್ಪಟ್ಟಿರುತ್ತವೆ.

ನಿರ್ವಾಹಕ ಇದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಸಾರಿಗೆ ಬಸ್ಸಿನಲ್ಲಿ ಕಿವಿ ಹರಿಯುವಂತೆ ಧ್ವನಿವರ್ಧಕ ಅರಚಿಕೊಳ್ಳುತ್ತಿರುತ್ತದೆ. ತರಕಾರಿ ಮಾರುವವನು, ಗುಜರಿ ಸಂಗ್ರಹದವನು, ಹಾಸಿಗೆ ಹೊಲಿಯುವವನು ಧ್ವನಿವರ್ಧಕದಲ್ಲಿ ಕೂಗುತ್ತಲೇ ಇರುತ್ತಾರೆ. ಅದರೊಂದಿಗೆ ಪಡ್ಡೆ ಯುವಕರ ಬುಲೆಟ್ ಶಬ್ದವು ಎಲ್ಲರ ನೆಮ್ಮದಿಯನ್ನು ಕೆಡಿಸುತ್ತದೆ. ಇನ್ನು ರೈಲ್ವೆಯಲ್ಲಿ ಸುಖವಾಗಿ ಪ್ರಯಾಣಿಸಬೇಕೆಂದರೆ ಬಹುತೇಕ ನಿಲ್ದಾಣಗಳಲ್ಲಿ ಲಿಫ್ಟಿಲ್ಲ. ನೂರಾರು ಮೆಟ್ಟಿಲು ಹತ್ತಲು ಅಥವಾ ಚಲಿಸುವ ಮೆಟ್ಟಿಲ ಮೇಲೆ ಹೋಗಲು ಸಾಧ್ಯವಾಗುವುದಿಲ್ಲ. ರೈಲಿನ ಸಾಮಾನ್ಯ ಬೋಗಿಗಳಲ್ಲಿ ಒಂದೆರಡು ಸೀಟುಗಳೂ ಹಿರಿಯರಿಗಿಲ್ಲ. ಹಿರಿಯ ನಾಗರಿಕರಿಗೆಂದು ಬಸ್ಸಿನಲ್ಲಿ ಮತ್ತು ರೈಲಿನಲ್ಲಿ ಶೇ.25ರಷ್ಟು ಆಸನಗಳನ್ನು ಮೀಸಲಿಟ್ಟರೆ ನಷ್ಟವೇನಿಲ್ಲವಲ್ಲ? ಖಾಲೀ ಇದ್ದರೆ ಯಾರಾದರೂ ಕುಳಿತುಕೊಳ್ಳುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ರೀತಿಯ ಸೌಕರ್ಯಗಳನ್ನು ಅಳವಡಿಸಿ ತಮ್ಮ ಸಾಧನೆಗಳನ್ನು ಹೇಳಿಕೊಳ್ಳಲು ಹಿರಿಯ ನಾಗರಿಕರ ದಿನಾಚರಣೆ ಯನ್ನು ಆಚರಿಸಿದರೆ ಅದಕ್ಕೊಂದು ಮೌಲ್ಯ, ಇಲ್ಲದಿದ್ದರೆ 'ಊಟ ವಸತಿ ಕೆಳಬೇಡ, ಗಿಣಿ ಸಾಕಿದಂತೆ ಸಾಕ್ತೀನಿ' ಎಂದಂತಾಗುತ್ತದೆ.

– ರಾಮಸುಬ್ರಾಯಶೇಟ್, ನಿವೃತ್ತ ಉಪನ್ಯಾಸಕ, ಎಸ್.ಎಲ್.ರಾಧಾಕೃಷ್ಣ ಕೃಷ್ಣ ಎಂ., ಸಿ.ಟಿ. ವರಮಹಾಲಕ್ಷ್ಮಿ, ರಾಜೇಶ್ ನಾಯಕ್, ರವಿಚಂದ್ರ, ಅರವಿಂದ ದೀಕ್ಷಿತ್ ಮತ್ತಿತರರು, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸುವುದಾ...!



ನಮಗೆ ಅದು ಉಪಯೋಗಕ್ಕೆ ಬಾರದಿದ್ದರೆ, ಅದು ಇದ್ದರೆಷ್ಟು? ಬಿಟ್ಟರೆಷ್ಟು? ಎಂಬ ಮನೋಭಾವ ನಮ್ಮಲ್ಲಿ ಇತ್ತೀಚೆಗೆ ಹೆಚ್ಚಾಗಿ ಕಂಡುಬರುತ್ತಿದೆ. ಇದು ನಿಜವಾಗಲೂ ಸ್ವಾರ್ಥ ಮನೋಭಾವದ ದ್ಯೋತಕ. ನಮಗೆ ನಮ್ಮ ಸುಖವಷ್ಟೇ ಮುಖ್ಯ, ಇತರರ ಬಗ್ಗೆ ನಾನೇಕೆ ತಲೆಕೆಡಿಸಿಕೊಳ್ಳಬೇಕು?

ನನಗೆ ಅದು ಸರಿ ಇಲ್ಲದಿದ್ದ ಮೇಲೆ ಇತರರಿಗೂ ಅದು ದಕ್ಕಬಾರದು ಎಂದು ಯೋಚಿಸುವ ಜಾಯಮಾನ ಇತ್ತೀಚೆಗೆ ಹೆಚ್ಚಾಗುತ್ತಿದೆ. ಆದರೆ ಈಗ ನಾನು ಹಾಳು ಮಾಡಿದ್ದರ ಪರಿಣಾಮ ಮುಂದೆ ನನಗೂ ಆಗಬಹುದು ಎಂಬುದನ್ನೂ ಯೋಚಿಸದಷ್ಟು ನಾವು ಸಂಕುಚಿತ ಮನೋಭಾವದವರಾಗಿ ಹೋಗಿದ್ದೇವೆ. ಇತ್ತೀಚೆಗೆ ರಾಜ್ಯದಲ್ಲಿ ಸುರಿಯುತ್ತಿರುವ ಕಂಡೂ ಕಾಣಲರಿಯಲಾರದಂತಹ ಮಳೆ ನಮ್ಮ ಹುಳುಕುಗಳನ್ನು ಎತ್ತಿ ತೋರಿಸುತ್ತಿದೆ. ಮಳೆ ನೀರು ಸರಾಗವಾಗಿ ಹರಿದುಹೋಗಲಾರದಂತಹ ಸ್ಥಿತಿಯನ್ನು ನಾವು ನಿರ್ಮಿಸಿಬಿಟ್ಟಿದ್ದೇವೆ. ಇದು ಕೇವಲ ನಗರಗಳಿಗೆ ಸೇರಿದ್ದು ಎಂದೇನೂ ಅಲ್ಲ, ಇದು ತಾಲೂಕು ಮಟ್ಟದಲ್ಲಿ, ಗ್ರಾಮಮಟ್ಟದಲ್ಲೂ ಕಂಡುಬರುತ್ತಿದೆ. ಮಳೆ ನೀರು ನಮಗೆ ಜೀವ ನೀಡುವ ಶಕ್ತಿ. ಆದರೆ ಅದು ಹರಿಯುತ್ತದೆ ಎಂಬ ಬಗ್ಗೆ ನಾವು ಗಮನವನ್ನೇ ಕೊಡಲಿಲ್ಲ.

ಬೆಂಗಳೂರಿನಂತಹ ನಗರಗಳಲ್ಲಿ ಇದರ ಪರಿಣಾಮ ಹೆಚ್ಚಾಗಿ ಕಂಡುಬರುತ್ತಿದೆ. ಹೆಚ್ಚು ಮಳೆ ಬಂದಾಗ ಇಡೀ ನಗರವೇ ಸಂಕಟಗಳಲ್ಲಿ ತೊಳಲಾಡುವಂತಾಗಿದೆ. ನೀರಿನ ಗುಣವೇ ಹರಿಯುವಿಕೆ. ಹರಿಯದಿದ್ದರೆ ನೀರು ಕೆಡುತ್ತದೆ. ತಾನು ಕೆಡುವುದಲ್ಲದೇ ಸುತ್ತಲಿನ ವಾತಾವರಣವನ್ನೂ ಕೆಡಿಸುತ್ತದೆ. ನೀರು ಒಂದೆಡೆ ನಿಂತಲ್ಲಿ ಅದು ಕೊಳೆಯುತ್ತದೆ. ಹರಿವು ಇಲ್ಲದಿದ್ದಾಗ ಇದು ಸಹಜ. ಆ ನೀರು ಹಾಳಾದರೆ ಪರಿಸರವೂ ಹಾಳಾಗುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಲು ವಿಜ್ಞಾನಿಯೇ ಆಗಬೇಕೆಂದಿಲ್ಲ. ನಮ್ಮ ಹಳ್ಳಿಯ ಅನಕ್ಷರಸ್ಥರೂ ಈ ಬಗ್ಗೆ ಮಾಹಿತಿ ಹೊಂದಿದ್ದಾರೆ. ಈ ಕಾರಣದಿಂದ ಕೆರೆ ಕಟ್ಟೆಗಳಲ್ಲಿನ ನೀರು ಹಾಳಾಗಬಾರದೆಂದು ಮಳೆಗಾಲದಲ್ಲಿ ಕೆರೆಗೆ ಹೆಚ್ಚಿನ ನೀರು ಹರಿದು ಬರುವಂತಾಗಲು ದಾರಿ ಮಾಡಿರುತ್ತಾರೆ.

ಮಳೆಗಾಲದಲ್ಲಿ ನೀರು ಹರಿದುಬಂದಾಗ, ಹಳೆಯ ಹಾಗೂ ಕೊಳಕಾದ ನೀರು ಹೊರಗೆ ಹರಿಯುತ್ತದೆ, ಅಥವಾ ಅದು ಶುದ್ಧ ನೀರಿನೊಡನೆ ಸೇರಿ ತಾನೂ ಶುದ್ಧವಾಗುತ್ತದೆ. ಅದಕ್ಕೇ ಪ್ರತಿಯೊಂದು ಕೆರೆಗೂ ಕೋಡಿ ಹರಿಯುವ ವ್ಯವಸ್ಥೆ ಇರುತ್ತದೆ. ನೀರು ಹೆಚ್ಚಾದಾಗ ಅದು ಕೋಡಿಬಿದ್ದು ಹೊರಹರಿಯುತ್ತದೆ. ನಮ್ಮ ಹಿಂದಿನವರು ಎಷ್ಟೊಂದು ವೈಜ್ಞಾನಿಕವಾಗಿ ಯೋಚಿಸಿದ್ದರೆಂದರೆ, ಒಂದು ಕೆರೆಯ ನೀರು ಕೋಡಿಬಿದ್ದರೆ ಅದು ಹರಿಯುವುದು ಮತ್ತೊಂದು ಕೆರೆಯೆಡೆಗೆ. ಅದೂ ತುಂಬಿದಾಗ ಮತ್ತೊಂದು ಕೆರೆಗೆ ನೀರು ಹರಿಯುತ್ತದೆ. ನೀರಿನ ಹರಿವಿಗೆ ಅಡಚಣೆ ಮಾಡಬಾರದು. ಇದು ಈಗಲೂ ಗ್ರಾಮಾಂತರದವರಿಗೆ ಗೊತ್ತಿರುವುದರಿಂದ ಅಲ್ಲಿ ಇದು ದೊಡ್ಡ ಸಮಸ್ಯೆಯಾಗಿ ಕಾಣುತ್ತಿಲ್ಲ.

ನಗರಪ್ರದೇಶಗಳಲ್ಲಿ ಈ ರೀತಿಯ ಸಾಮೂಹಿಕ ಪ್ರಜ್ಞೆಯೇ ಕಾಣುತ್ತಿಲ್ಲ. ಮಳೆ ಬಂದಾಗ, ಮಳೆ ಬರುತ್ತದೆ–ಹೋಗುತ್ತದೆ ಎಂಬ ನೀರಸ ಮನೋವೃತ್ತಿ ಕಂಡುಬರುತ್ತದೆ. ಅದೃಷ್ಟಕ್ಕೆ ಕಳೆದೆರಡು ವರ್ಷಗಳವರೆಗೆ ರಾಜ್ಯದಲ್ಲಿ ಅಂತಹ ತೊಂದರೆ ಕೊಡುವ ಮಳೆ ಬರಲಿಲ್ಲ. ಹಾಗೆಂದು ಯಾವಾಗಲೂ ಬರುವುದಿಲ್ಲ ಎಂದಲ್ಲ. ಅದೀಗ ಬಂದಿದೆ. ನಮ್ಮ ಮನೋಭಾವವನ್ನು ಅಣಕಿಸುವಂತೆ ತೊಂದರೆ ಕೊಡುತ್ತಿದೆ, ಆದರೆ ಅದು ತೊಂದರೆಯಲ್ಲ ಎಚ್ಚರಿಕೆ!! ತನ್ನ ಗುಣವನ್ನು ಅಡಗಿಸಿಟ್ಟರೆ ತಾನು ಸುಮ್ಮನಿರುವುದಿಲ್ಲ ಎಂದು ನೀಡಿದ ಎಚ್ಚರಿಕೆ. ಹಾಗೆಂದು ಈ ಸಮಸ್ಯೆ ಒಂದೇ ಸಲ ಉದ್ಭವವಾದುದಲ್ಲ, ಕ್ರಮೇಣ ತನ್ನ ಮೇಲೆ ಆಗುತ್ತಿದ್ದ ಪ್ರತಿಕ್ರಮಣವನ್ನು ಸಹಿಸಿ, ಸಹಿಸಿ ಸಾಕಾದುದರ ಫಲವಿದು.

ಬೆಂಗಳೂರು ಹಾಗೂ ಇತರೆ ನಗರ–ಪಟ್ಟಣಗಳಲ್ಲಿ ಮನೆ ನಿವೇಶನ ಮಾಡುವವರಿಂದ ಇಂತಹ ತೊಂದರೆಯಾಗುತ್ತದೆ. ಬಡಾವಣೆ ಅಭಿವೃದ್ಧಿ ಪಡಿಸುವಾಗ ಮಳೆ ನೀರು ಹಾದು ಹೋಗಲು ಜಾಗ ಬಿಡಬೇಕು ಎಂಬ ಪರಿಜ್ಞಾನವಿಲ್ಲದೆ, ಆ ಜಾಗದಲ್ಲೂ ನಿವೇಶನ ಮಾಡಿದರೆ ಮತ್ತಷ್ಟು ಹಣ ಬರುತ್ತದೆ ಎಂಬ ದುರಾಸೆಯಿಂದ, ಮಳೆ ನೀರು ಹರಿದುಹೋಗಲು ಜಾಗವನ್ನೇ ಬಿಡದೆ ನಿವೇಶನ ರಚಿಸಿದ್ದರಿಂದ ಹಾಗೂ ನಿವೇಶನ ಕೊಂಡವರೂ ಯಾವುದನ್ನೂ ಪರಿಶೀಲಿಸದೆ ಮನೆಗಳನ್ನು ನಿರ್ಮಿಸಿದ್ದ ರಿಂದಾಗಿ ಇಂದು ಬೆಂಗಳೂರು ಹಾಗೂ ಇತರ ನಗರ–ಪಟ್ಟಣಗಳಲ್ಲಿ ಮಳೆ ಬಂದಾಗ ಅದನ್ನು 'ಜಲಕಂಟಕ' ಎಂದು ಭಾವಿಸುವಂತೆ ಆಗಿದೆ. ಇದು ನಮಗೆ ನಾವೇ ಮಾಡಿಕೊಂಡ ಮೋಸ. ಆದರೆ ಈ ಮೋಸದ ಭಾಗವಾಗದವರೂ ತೊಂದರೆಗೆ ಸಿಲುಕಿಕೊಳ್ಳುತ್ತಿದ್ದಾರೆ. ಇವರು ಯಾರನ್ನು ದೂಷಿಸಬೇಕು. ಹಣ ಮಾಡುವ ಧಾವಂತದಲ್ಲಿ

> ನಗರಪ್ರದೇಶಗಳಲ್ಲಿ ಈ ರೀತಿಯ ಸಾಮೂಹಿಕ ಪ್ರಜ್ಞೆಯೇ ಕಾಣುತ್ತಿಲ್ಲ. ಮಳೆ ಬಂದಾಗ, ಮಳೆ ಬರುತ್ತದೆ-ಹೋಗುತ್ತದೆ ಎಂಬ ನೀರಸ ಮನೋವೃತ್ತಿ ಕಂಡುಬರುತ್ತದೆ. ಅದೃಷ್ಟಕ್ಕೆ ಕಳೆದೆರಡು ವರ್ಷಗಳವರೆಗೆ ರಾಜ್ಯದಲ್ಲಿ ಅಂತಹ ತೊಂದರೆ ಕೊಡುವ ಮಳೆ ಬರಲಿಲ್ಲ. ಹಾಗೆಂದು ಯಾವಾಗಲೂ ಬರುವುದಿಲ್ಲ ಎಂದಲ್ಲ. ಅದೀಗ ಬಂದಿದೆ. ನಮ್ಮ ಮನೋಭಾವವನ್ನು ಅಣಕಿಸುವಂತೆ ತೊಂದರೆ ಕೊಡುತ್ತದೆ, ಆದರೆ ಅದು ತೊಂದರೆಯಲ್ಲ ಎಚ್ಚರಿಕೆ!! ತನ್ನ ಗುಣವನ್ನು ಅಡಗಿಸಿಟ್ಟರೆ ತಾನು ಸುಮ್ಮನಿರುವುದಿಲ್ಲ ಎಂದು ನೀಡಿದ ಎಚ್ಚರಿಕೆ.

ತಮ್ಮನ್ನು ನಂಬಿದವರಿಗೆ ಮೋಸ ಮಾಡಿದವರು ತನ್ಮೂಲಕ ಇತರರಿಗೂ ಮೋಸ ಮಾಡಿರುತ್ತಾರೆ. ಹೀಗೆ ಮಾಡುವವರಿಗೆ ಹಾಗೆ ಮಾಡಬಹುದಾದ ಪರವಾನಗಿ ಯಾರು ನೀಡುತ್ತಾರೆ? ಇಂತಹ ಸಮಯದಲ್ಲಿ ಸಾತ್ವಿಕರಲ್ಲಿ ಕೆಲವರಿಗಾದರೂ ಮುಂದೆ ತೊಂದರೆಯಾಗಬಹುದು ಎಂಬ ಅಳುಕು ಕಾಣಿಸಿರುತ್ತದೆ. ಆದರೆ ನಾನೊಬ್ಬ ಏಕಾಂಗಿ ಏನು ಮಾಡಲಾಗುತ್ತದೆ? ಎಂದು ಭಾವಿಸಿ ಸುಮ್ಮನಾಗಿರುತ್ತಾರೆ. ಇದೂ ಅಪರಾಧವೇ. ಕೊನೆಗೆ ಅವರೂ ನಷ್ಟ ಅನುಭವಿಸುತ್ತಾರೆ.

ಬೆಂಗಳೂರಿನ ಮಳೆ ಸಂದರ್ಭದಲ್ಲಿ ಹಲವು ವಿಚಾರಗಳು ಬೆಳಕಿಗೆ ಬಂದಿವೆ. ಅದರಲ್ಲಿ ಅತ್ಯಂತ ಶ್ರೀಮಂತರು ಎನಿಸಿಕೊಂಡವರೂ ತಾವು ಖರೀದಿಸಿದ್ದ ಪ್ರತಿಷ್ಠಿತ ಭಾಗದಲ್ಲಿ, ಐಷಾರಾಮಿ ಮನೆ ನಿರ್ಮಿಸಿ, ಐಷಾರಾಮಿ ಕಾರುಕೊಂಡವರ ಮನೆಗಳೂ ಮೂರ್‍ನಾಲ್ಕು ಅಡಿ ನೀರಿನಲ್ಲಿ ತೇಲುವಂತಾಯಿತು. ಮನೆಯೊಳಗಿದ್ದ ದುಬಾರಿ ವಸ್ತುಗಳೆಲ್ಲವೂ ಮಳೆ ನೀರಿನ ಪಾಲಾದವು. ಮಳೆನೀರಿಗೆ ಜಾತಿ, ಹಣದ ಗೊಡವೆ ಇಲ್ಲ. ಅದು ಎಲ್ಲರಿಗೂ ಸಮಾನವಾಗಿ ತೊಂದರೆ ನೀಡಿತು. ಹೀಗೆ ತೊಂದರೆಯಾಗಲು ಕಾರಣರಾದವರನ್ನು ಹುಡುಕಿ ಶಿಕ್ಷಿಸಬೇಕಲ್ಲವೇ? ಜೀವಮಾನ ಪೂರ್ತಿ ದುಡಿದು ಉಳಿಸಿದ ಹಾಗೂ ಸಾಲಮಾಡಿ ಮನೆ ನಿರ್ಮಿಸಿದವರ ತೊಂದರೆಗೆ ಬಡಾವಣೆ ನಿರ್ಮಿಸಿದವರು ಕಾರಣರಾಗಬೇಕು. ಆದರೆ ನಿವೇಶನ ಮಾರಿದ ನಂತರ ಅವರು ಯಾರು? ಎಲ್ಲಿದ್ದಾರೆ? ಎಂಬುದು ತಿಳಿಯುವುದೇ ಇಲ್ಲ. ಇಲ್ಲಿ ಜನರು ಕಣ್ಣುಮುಚ್ಚಿ ನಿವೇಶನ ಅಥವಾ ಮನೆ ಪಡೆದಿದ್ದು ಅವರ ತಪ್ಪಾಗಿರಬಹುದಾದರೂ ಮೂಲ ತಪ್ಪು ಬಡಾವಣೆ ನಿರ್ಮಿಸಿದವರದ್ದೇ ಆಗಿರುತ್ತದೆ. ಆದರೆ ಅಂತಹವರು ಬೆಳಕಿಗೇ ಬರುವುದಿಲ್ಲ. ಇಂತಹ ಬಡಾವಣೆ ನಿರ್ಮಾಣಕ್ಕೆ ಅನುಮತಿ ನೀಡಿದವರೂ ಕಣ್ಣಿಗೆ ಕಾಣಿಸುವುದಿಲ್ಲ. ಹೀಗೆ ಅವರು ಬಚಾವಾಗಿಬಿಡುತ್ತಾರೆ? ಅವರನ್ನು ಹುಡುಕಿ ಶಿಕ್ಷಿಸಿದಲ್ಲಿ ಮುಂದೆ ಅಂತಹ ತಪ್ಪುಗಳನ್ನು ಇತರರು ಮಾಡುವುದಿಲ್ಲ. ಆದರೆ ಹಾಗಾಗುವುದಿಲ್ಲ. ಸರ್ಕಾರವೂ ತೊಂದರೆಯಾದ ಸಮಯದಲ್ಲಿ ಶೂರತ್ವದ ಮಾತುಗಳಾಡಿ ನಂತರ ಮರೆತುಬಿಡುತ್ತದೆ. ಮಳೆ ನಿಂತು ನೀರು ಹರಿದುಹೋದ ನಂತರ ಅಲ್ಲಿನ ಜನರೂ ಮರೆತುಬಿಡುತ್ತಾರೆ. ಮತ್ತೆ ಅವರಿಗೆ ಜಾಗೃತಿ ಮೂಡುವುದು ಮುಂದಿನ ಮಳೆಗಾಲದಲ್ಲಿ. ಇದಕ್ಕೆ ನಮ್ಮ ಮರೆಗುಳಿತನದ ಪ್ರಭಾವ ಕಾರಣ.

ಇದು ಕೇವಲ ಮಳೆ ನೀರಿಗೆ ಸಂಬಂಧಿಸಿದ ಸಮಸ್ಯೆ ಮಾತ್ರವಲ್ಲ. ಮರಗಳನ್ನು ಕಡಿದು ರಸ್ತೆ ನಿರ್ಮಿಸುವುದು, ಅದಕ್ಕೆ ಬದಲಿಯಾಗಿ ಮತ್ತೆ ಮರಗಿಡ ನಡೆದಿರುವುದು ಮತ್ತೊಂದು ಸಮಸ್ಯೆ. ನನ್ನ ಸ್ನೇಹಿತರೊಬ್ಬರು ಹೇಳುತ್ತಿದ್ದರು. ಈ ಹಿಂದೆ ಮೈಸೂರಿನಿಂದ ಮಂಡ್ಯಕ್ಕೆ ಎಷ್ಟೇ ಬಿಸಿಲಿರುವಾಗ ಹೋದರೂ ರಸ್ತೆ ತಂಪಾಗಿಯೇ ಇರುತ್ತಿತ್ತು ಎಂದು. ಕಾರಣ, ಎರಡೂ ಬದಿ ಹೇರಳವಾದ ಮರಗಳಿದ್ದುವು. ಹಿಂದೆ ರಾಜರುಗಳಿಗೆ ಹೆಸರು ತರುತ್ತಿದ್ದುದೇ ಸಾಲು ಮರಗಳನ್ನು ನೆಡಿಸುವುದು ಹಾಗೂ ಅವುಗಳನ್ನು ಬೆಳೆಸುತ್ತಿದ್ದುದರಿಂದ. ಹಾಗೆ ಈ ರಸ್ತೆಯಲ್ಲಿ ಸೊಂಪಾದ ಮರಗಿಡಗಳಿದ್ದವು. ಯಾವಾಗ ಬೇಕಾದರೂ ದ್ವಿಚಕ್ರವಾಹನದಲ್ಲಿ, ಎತ್ತಿನ ಗಾಡಿಗಳಲ್ಲಿ ಆರಾಮವಾಗಿ ಪ್ರಯಾಣ ಮಾಡಬಹುದಾಗಿತ್ತು. ಆದರೆ ಇಂದು ಆ ವಾತಾವರಣವೇ ಇಲ್ಲ. ರಸ್ತೆಯಲ್ಲಿ ವಾಹನ ಪಂಕ್ಚರ್ ಆದರೆ ಅಥವಾ ಯಾವುದೋ ಕಾರಣಕ್ಕೆ ವಾಹನ ಚಲಿಸಲಾಗದ ಸ್ಥಿತಿಗೆ ಬಂದರೆ ವಾಹನದಲ್ಲಿರುವವರ ಬವಣೆ ಹೇಳಲಸದಳ. ನೆರಳು ಹುಡುಕಿದರೂ ಸಿಗುವುದಿಲ್ಲ. ಹಾಗೆಂದು ರಸ್ತೆಗಳ ವಿಸ್ತರಣೆ ಬೇಡವೆಂದಲ್ಲ. ಅದಕ್ಕೆ ಬದಲಿ ಪರಿಹಾರ ಹುಡುಕಬೇಡವೇ? ಇಂತಹ ರಸ್ತೆ ನಿರ್ಮಾಣದ ಸಮಯದಲ್ಲಿ ಮರಗಳನ್ನು ಕಡಿಯುವಾಗ ಊರವರು ಪ್ರತಿಭಟನೆ ಮಾಡಿದರೆ, ಒಂದರ ಜಾಗದಲ್ಲಿ ಹತ್ತು ಮರ ನೆಡುವುದಾಗಿ ಹೇಳಿ ಬಾಯಿ ಮುಚ್ಚಿಸಲಾಗುತ್ತದೆ. ಒಂದೆರಡು ಗಿಡ ನೆಡುವ ಶಾಸ್ತ್ರವೂ ಆಗುತ್ತದೆ. ಇಲ್ಲಿ ಬುದ್ಧಿವಂತಿಕೆ ಎಂದರೆ ಗಿಡ ನೆಟ್ಟರೆ ಅದಾಗೇ ಬೆಳೆದು ಮರವಾಗುತ್ತದೆ ಎಂಬ ಹುಂಬತನ ಅಥವಾ ಗೊತ್ತಿದ್ದೂ ಆಡುವ ನಾಟಕ. ಹಾಕಿದ ಗಿಡಕ್ಕೆ ನೀರು ಹಾಗೂ ಪೋಷಣೆ ಇಲ್ಲದಿದ್ದಾಗ ಅದು ಹೇಗೆ ಬೆಳೆದು ಮರವಾಗಲು ಸಾಧ್ಯ? ಇದರಿಂದಾಗಿ ಇಂದು ಊರಿಂ ದೂರಿಗೆ ಹೋಗುವಾಗ ಮರದ ನೆರಳು ಕಾಣುವುದಿಲ್ಲ. ದುಡ್ಡಿನ ಆಸೆಗಾಗಿ ತೊಂದರೆ ನೀಡದಂತಹ ಮರಗಳ ಹನನವೂ ಆಗಿ ಹೋಗುತ್ತದೆ.


ನಮ್ಮಲ್ಲಿ ಮಾನವ ಹಕ್ಕುಗಳು ಎಂಬ ಪದ ಆಗಾಗ್ಗೆ ಬಳಕೆಯಾಗುತ್ತದೆ. ನೆಮ್ಮದಿಯಾಗಿ ಜೀವಿಸುವುದೂ ಸಹ ಮಾನವ ಹಕ್ಕಾಗುತ್ತದೆ. ನಾನು ತಪ್ಪು ಮಾಡಿದಾಗ ನಾನು ಶಿಕ್ಷೆ ಅನುಭವಿಸುವುದು ಸರಿ. ಆದರೆ ತಪ್ಪು ನನ್ನಿಂದಾಗದಿದ್ದರೂ ನಾನು ಶಿಕ್ಷೆ ಅನುಭವಿಸುವಂತಾದರೆ ಅದನ್ನು ಮಾನವ ಹಕ್ಕಿನ ಉಲ್ಲಂಘನೆ ಎಂದು ಪರಿಗಣಿಸಬೇಕು. ನಮ್ಮ ಎಲ್ಲಾ ಸಮಸ್ಯೆಗಳೂ ಕೊನೆಗೆ ರಾಜಕಾರಣದೊಂದಿಗೆ ತಳಕು ಹಾಕಿಕೊಳ್ಳುತ್ತಿರುವುದು ಸರಿಯಲ್ಲ. ರಾಜಕಾರಿಣಿ ಸಾಮಾನ್ಯವಾಗಿ ತನಗೆ ಅನುಕೂಲವಾದದ್ದನ್ನು ಗಮನಿಸುವನೇ ವಿನಃ ಸಮಾಜದ ಹಿತ ಅವರಿಗೆ ಗೌಣ. ಹಾಗಾಗಿ ಇಂತಹ ಸಮಸ್ಯೆಗಳು ಸಮಸ್ಯೆಗಳಾಗೇ ಉಳಿದುಬಿಡುತ್ತವೆ.

ಮತ್ತೊಂದು ಸಮಸ್ಯೆ ನಿರುದ್ಯೋಗದ್ದು. ನಮ್ಮ ವಿಶ್ವವಿದ್ಯಾಲಯಗಳು ಪದವಿಗಳ ಪ್ರದಾನ ಮಾಡುತ್ತವೆ. ಪ್ರತಿವರ್ಷ ಲಕ್ಷಾಂತರ ಪದವೀಧರರು ಹೊರಗೆ ಬರುತ್ತಾರೆ. ಆದರೆ ವಿಶ್ವವಿದ್ಯಾಲಯಗಳ ಜವಾಬ್ದಾರಿ ಪದವಿ ಪ್ರಮಾಣಪತ್ರ ನೀಡುವುದರಲ್ಲಿ ಮುಕ್ತಾಯವಾಗುತ್ತದೆ. ಹಾಗಾದರೆ ಅದನ್ನೇ ಅದರ ಜವಾಬ್ದಾರಿ ಎಂದು ಕರೆಯಬಹುದೇ? ಪದವೀಧರರಿಗೆ ಮುಂದೆ ಉದ್ಯೋಗಾವಕಾಶ ಇಲ್ಲದಿದ್ದರೆ, ಅದು ಯಾರ ಜವಾಬ್ದಾರಿ? ಈ ರೀತಿ ಯಾರೂ ಜವಾಬ್ದಾರಿ ವಹಿಸಿಕೊಳ್ಳದ ಕಾರಣ ಪದವೀಧರರು ಖಾಸಗಿ ಸಂಸ್ಥೆಗಳಲ್ಲಿ ದುಡಿಯಬೇಕಾಗುತ್ತದೆ. ಆ ಸಂಸ್ಥೆಗಳೇನೂ ಇವರು ಪದವಿ ಪಡೆಯಲು ಯಾವುದೇ ಸಹಾಯ ಮಾಡಿರುವುದಿಲ್ಲ. ಆದರೆ ಅದರ ಫಲವನ್ನು ಅವು ಅನುಭವಿಸುತ್ತವೆ. ಹಾಗೆಯೇ ಪದವೀಧರರಲ್ಲಿ ಸ್ವಲ್ಪ ಸಾಮರ್ಥ್ಯ, ಅವಕಾಶ ಇದ್ದವರು ವಿದೇಶಗಳಿಗೆ ಹೋಗುತ್ತಾರೆ. ವಿಶ್ವವಿದ್ಯಾಲಯಗಳ ಜವಾಬ್ದಾರಿ ಸರ್ಟಿಫಿಕೇಟ್ ಕೊಡುವುದಕ್ಕೆ ಮಾತ್ರ ಸೀಮಿತವಾಗುತ್ತಿದೆ. ಇದು ಬದಲಾಗಬೇಕು. ನಮ್ಮಲ್ಲಿ ಪದವಿ ಪಡೆದವರಿಗೆ ದಾರಿ ತೋರಿಸುವಂತಹ ಕೆಲಸವನ್ನು ವಿಶ್ವವಿದ್ಯಾಲಯಗಳೇ ಮಾಡಬೇಕು. ಹಿಂದೆ ಎಂಪ್ಲಾಯ್‌ಮೆಂಟ್ ಆಫೀಸುಗಳಿತ್ತು (ಈಗಲೂ ಇದೆ). ಯಾರಿಗಾದರೂ ಕೆಲಸಕ್ಕೆ ಅರ್ಹರು ಬೇಕಾದರೆ ಈ ಸಂಸ್ಥೆಯನ್ನು ಸಂಪರ್ಕಿಸಿ ತಮಗೆ ಬೇಕಾದವರನ್ನು ಅಲ್ಲಿಂದ ಪಡೆಯುತ್ತಿದ್ದರು. ಅಂತಹ ವ್ಯವಸ್ಥೆ ಯಾಕೆ ವಿಶ್ವವಿದ್ಯಾಲಯಗಳ ಹಂತಕ್ಕೆ ಬರಬಾರದು? ಪದವಿ ನೀಡಿದ ನಂತರ ಕೆಲಸ ಕೊಡಿಸುವ ಜವಾಬ್ದಾರಿಯನ್ನೂ ಅದು ಹೊರುವಂತಾಗಬೇಕು. ಖಾಸಗಿ ಸಂಸ್ಥೆಗಳೂ ವಿಶ್ವವಿದ್ಯಾಲಯಗಳ ಮೂಲಕ ಪದವೀಧರರನ್ನು ಕೆಲಸಕ್ಕೆ ತೆಗೆದುಕೊಳ್ಳುವಂತಾಗಬೇಕು. ಇಲ್ಲದಿದ್ದರೆ ದೊಡ್ಡ ಕನಸು ಕಂಡು ಓದಿ, ಪದವಿ ಪಡೆದವರು ನಿರಾಶರಾಗಿಬಿಡುತ್ತಾರೆ. ಇದೂ ಸಹ ಅವರು ಮಾಡದ ತಪ್ಪಿಗೆ ನೀಡಿದ ಶಿಕ್ಷೆಯಂತಾಗುತ್ತದೆ. ಈ ಶಿಕ್ಷೆ ಕೇವಲ ವಿದ್ಯಾರ್ಥಿಗೆ ಮಾತ್ರವಲ್ಲ. ಅವನ ಕುಟುಂಬಕ್ಕೆ ಹಾಗೂ ಅವನನ್ನು ಪದವೀಧರನನ್ನಾಗಿಸಲು ಹಣ ಹೂಡಿದ ಸರ್ಕಾರಕ್ಕೂ ಆಗುತ್ತದೆ. ತಪ್ಪಿಗೆ ಶಿಕ್ಷೆ ಸರಿ. ಆದರೆ ಮಾಡದ ತಪ್ಪಿಗೆ ಶಿಕ್ಷೆ ಒಪ್ಪುವ ಮಾತಲ್ಲ.

ಅದ್ಧೂರಿ ಪುನೀತ ಪರ್ವದಲ್ಲಿ ಪುನೀತ್ ರಾಜ್‌ಕುಮಾರ್ ಮಹದಾಸೆಯ

'ಗಂಧದ ಗುಡಿ' ಪ್ರಿ ರಿಲೀಸ್

- ದಕ್ಷಿಣದ ತಾರಾಗಣದ ಸಮಾಗಮ; ಗಾಯನ, ನೃತ್ಯದೊಂದಿಗೆ ಪುನೀತ್‌ಗೆ ನಮನ, ಗುಣಗಾನ
- ಗಂಧದ ಗುಡಿಗೆ ತೆರಿಗೆ ವಿನಾಯ್ತಿ ಘೋಷಿಸಿದ ಮುಖ್ಯಮಂತ್ರಿ ಬೊಮ್ಮಾಯಿ





ಬೆಂಗಳೂರು, ಅ.21– ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಕನಸಿನ ಕೂಸಾದ 'ಗಂಧದ ಗುಡಿ' ಚಿತ್ರದ ಪ್ರಿ ರಿಲೀಸ್ ಇವೆಂಟ್ 'ಪುನೀತ ಪರ್ವ' ಇಂದು ಬೆಂಗಳೂರು ಅರಮನೆ ಆವರಣದಲ್ಲಿರುವ ಕೃಷ್ಣವಿಹಾರದಲ್ಲಿ ಮನರಂಜನಾ ಕಾರ್ಯಕ್ರಮಗಳೊಂದಿಗೆ ಅದ್ಧೂರಿಯಾಗಿ ನಡೆಯಿತು.

ಪುನೀತ್ ಅವರ ಪತ್ನಿ ಅಶ್ವಿನಿ ಪುನೀತ್ ಕುಮಾರ್ ನೇತೃತ್ವದಲ್ಲಿ ಬೃಹತ್ ವೇದಿಕೆಯಲ್ಲಿ ನಡೆದ ವರ್ಣರಂಜಿತ ಕಾರ್ಯಕ್ರಮ ವೀಕ್ಷಿಸಲು 500ಕ್ಕೂ ಹೆಚ್ಚು ಅತಿಗಣ್ಯರು ಹಾಗೂ ಸಾವಿರಾರು ಅಭಿಮಾನಿಗಳು ನೆರೆದಿದ್ದರು. ಕನ್ನಡ, ತಮಿಳು, ತೆಲುಗು, ಹಿಂದಿ ಚಿತ್ರರಂಗದ ಹಲವಾರು ನಟರು ಹಾಗೂ ನಿರ್ದೇಶಕರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಪುನೀತ್ ರಾಜ್‌ಕುಮಾರ್ ಗುಣಗಾನ ಮಾಡಿದರು.

ಈ ಕಾರ್ಯಕ್ರಮದಲ್ಲಿ ಭಾಗಿಯಾದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅ.28ಕ್ಕೆ ಬಿಡುಗಡೆಯಾಗಲಿರುವ 'ಗಂಧದ ಗುಡಿ' ಚಿತ್ರಕ್ಕೆ ಕರ್ನಾಟಕದಲ್ಲಿ ತೆರಿಗೆ ವಿನಾಯಿತಿ ಘೋಷಿಸಿದ್ದಾರೆ. ನಿಸರ್ಗ, ಕಾಡು, ಪ್ರಾಣಿಗಳೊಂದಿಗೆ ಚಿತ್ರೀಕರಿಸಿರುವ ಸಿನೆಮಾ ಇದಾಗಿದ್ದು, ಇದು ಕರ್ನಾಟಕದ ಸಸ್ಯ ಸಂಪತ್ತನ್ನು ಜನರಿಗೆ ತೋರಿಸುವ ಚಿತ್ರವಾಗಿದೆ. ಈ ಚಿತ್ರಕ್ಕೆ ಖಂಡಿತವಾಗಿಯೂ ಸರ್ಕಾರ ತೆರಿಗೆ ವಿನಾಯಿತಿ ಘೋಷಿಸುತ್ತದೆ ಎಂದರು. ಅಪ್ಪು ಅವರಿಂದ ಸ್ಫೂರ್ತಿ ಪಡೆದ ಯುವ ಸಮುದಾಯವನ್ನು ನೋಡಿದಾಗ ಸಂತೋಷವಾಗುತ್ತದೆ. ಅಪ್ಪು ಬಹಳ ವರ್ಷ ಬದುಕಿ, ಬಾಳಬೇಕಾಗಿತ್ತು. ಅವರ ಅಗಲಿಕೆಯ ನೋವು ಈಗಲೂ ಕಾಡುತ್ತಿದೆ ಎಂದು ಅವರು ಹೇಳಿದರು.

ಪ್ರಭುದೇವ, ರಮ್ಯಾ, ಶಿವರಾಜ್ ಕುಮಾರ್ ಸೇರಿದಂತೆ ಅನೇಕ ನಟ–ನಟಿಯರು ಪುನೀತ್ ಅವರ ಹಾಡುಗಳಿಗೆ ನೃತ್ಯ ಮಾಡಿ ರಂಜಿಸಿದರು. ಇನ್ಫೋಸಿಸ್ ಫೌಂಡೇಶನ್‌ನ ಡಾ. ಸುಧಾಮೂರ್ತಿ, ರಮೇಶ್ ಅರವಿಂದ, ಪ್ರಕಾಶ್ ರಾಜ್, ರಾಣಾ ದಗ್ಗುಬಾಟಿ, ಅಖಿಲ್ ಅಕ್ಕಿನೇನಿ, ಸಿದ್ದಾ, ಡಾಲಿ ಧನಂಜಯ್, ರಕ್ಷಿತ್ ಶೆಟ್ಟಿ, ದುನಿಯಾ ವಿಜಯ್ ಸೇರಿದಂತೆ ಅನೇಕ ಕಲಾವಿದರು ಅಪ್ಪು ಗುಣಗಾನ ಮಾಡಿದರು. ಬಿಗ್–ಬಿ ಅಮಿತಾಭ್ ಬಚ್ಚನ್ ಮತ್ತು ತಮಿಳಿನ ಹಿರಿಯ ನಟ ಕಮಲಹಾಸನ್ ಈ ಕಾರ್ಯಕ್ರಮಕ್ಕೆ ರವಾನಿಸಿದ್ದ ವೀಡಿಯೋ ಸಂದೇಶವನ್ನು ಪ್ರದರ್ಶಿಸಲಾಯಿತು. ರಾಘವೇಂದ್ರ ರಾಜ್‌ಕುಮಾರ್ ಅವರು ಅಪ್ಪುವಿನ ಗುಣಗಾನ ಮಾಡುತ್ತಾ ಭಾವುಕರಾದರು. ಅಪ್ಪು ತನ್ನ 5ನೇ ವಯಸ್ಸಿನಲ್ಲಿ 'ಭಾಗ್ಯವಂತ' ಚಿತ್ರಕ್ಕಾಗಿ ಹಾಡಿದ 'ಬಾನ ದಾರಿಯಲ್ಲಿ ಸೂರ್ಯ ಜಾರಿ ಹೋದ...' ಹಾಡಿನ ಧ್ವನಿಮುದ್ರಣದ ಬಗ್ಗೆ ನೆನಪಿಸಿಕೊಂಡ ಅವರು, ನಾನಿರುವವರೆಗೂ ಈ ಹಾಡು ನನ್ನ ಜತೆ ಇರುತ್ತದೆ ಎಂದು ಭಾವುಕರಾಗಿ ಹೇಳಿದರು.


ಗಂಧದ ಗುಡಿ ಎಂದಾಗ ನೆನಪಾಗುವುದು ಅಪ್ಪಾಜಿ ಸಿನೆಮಾ. ವಿಷ್ಣುವರ್ಧನ್ ಮತ್ತು ಅಪ್ಪಾಜಿಯವರು ಜೊತೆಯಾಗಿ ಮಾಡಿದ ಮೊದಲ ಸಿನೆಮಾ ಅದು. ಗಂಧದ ಗುಡಿ ಭಾಗ–2 ಮಾಡುವ ಭಾಗ್ಯ ನನಗೆ ಸಿಕ್ಕಿತು. ಈಗ ಅಪ್ಪು ಗಂಧದ ಗುಡಿ ಮಾಡಿದ್ದಾನೆ. ಕಾಡು ತುಂಬಾ ಮುಖ್ಯ. ನಾವು ಪರಿಸರಕ್ಕೆ ಎಷ್ಟು ದ್ರೋಹ ಮಾಡ್ತೀವೋ ಪ್ರಕೃತಿ ಅಷ್ಟೇ ಸೇಡು ತೀರಿಸಿಕೊಳ್ಳುತ್ತದೆ. ಪ್ರಾಣಿಗಳನ್ನು ಉಳಿಸಿ, ಮರ ಬೆಳೆಸಿ ಎಂದು ಮನವಿ ಮಾಡಿದ ಅವರು, ಅಪ್ಪು ಅಗಲಿ ಒಂದು ವರ್ಷ ಹಾಗೆ ಕಳೆದು ಹೋಯಿತು ಎಂದು ನೆನಪಿಸಿ ಕೊಂಡರೆ ಸಂಕಟವಾಗುತ್ತದೆ. ಈ ನೋವು ಎಲ್ಲರಿಗೂ ಇದೆ. ಬೇರೆ ಭಾಷೆಯವರಿಗೂ ಅಪ್ಪು ಬಗ್ಗೆ ಪ್ರೀತಿ ಇದೆ. ಹೀಗಾಗಿ ಅವರೆಲ್ಲಾ ಇಲ್ಲಿಗೆ ಬಂದಿದ್ದಾರೆ. ದುಃಖದಲ್ಲೇ ನಮ್ಮ ಜೊತೆ ನೀವೆಲ್ಲಾ ಇದ್ದದ್ದು ನಮಗೆ ನೈತಿಕ ಬಲ ಆಯಿತು. ಇಲ್ಲದಿದ್ದರೆ ನಾವೆಲ್ಲಾ ಕುಗ್ಗಿ ಹೋಗುತ್ತಿದ್ದೆವು. ಅಪ್ಪು ನಮ್ಮ ಜೊತೆ ಇಲ್ಲ ಎಂದು ನಾನು ಯಾವಾಗಲೂ ಹೇಳಲ್ಲ, ಅವನು ನಮ್ಮ ಜೊತೆಯೇ ಇದ್ದಾನೆ. ನಾನ್ಯಾಕೆ ಅವನನ್ನು ಮಿಸ್ ಮಾಡಿಕೊಳ್ಳಲಿ, ಗಂಧದ ಗುಡಿಗೆ ಒಳ್ಳೆಯದಾಗಲಿ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದೂರದೃಷ್ಟಿ, ವ್ಯವಸ್ಥಿತ ಆಡಳಿತದಿಂದ ನಾಡಪ್ರಭು ಕೆಂಪೇಗೌಡರು ಅಜರಾಮರ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣನೆ ● ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡರ ಪ್ರತಿಮೆ ಸ್ಥಾಪನೆ ಹಿನ್ನೆಲೆಯಲ್ಲಿ ಮೃತ್ತಿಕಾ ಸಂಗ್ರಹಣಾ ಅಭಿಯಾನಕ್ಕೆ ಚಾಲನೆ ● ಯಾರೇ ಇತಿಹಾಸ ಮರೆತರೆ ಭವಿಷ್ಯ ಮಂಕಾಗುತ್ತದೆ

ಬೆಂಗಳೂರು, ಅ.21(ಕೆಎಂಶಿ)– ದೂರದೃಷ್ಟಿ ಮತ್ತು




ವ್ಯವಸ್ಥಿತ ಯೋಜನೆಗಳಿರುವ ಆಡಳಿತಗಾರರು ಶತಶತಮಾನಗಳು ಉರುಳಿದರೂ ಅಜರಾಮರರಾಗಿ ಇರುತ್ತಾರೆ ಎನ್ನುವುದಕ್ಕೆ ಬೆಂಗಳೂರಿನ ಸಂಸ್ಥಾಪಕರಾದ ನಾಡಪ್ರಭು ಕೆಂಪೇಗೌಡರೇ ಸಾಕ್ಷಿಯಾಗಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಬಣ್ಣಿಸಿದ್ದಾರೆ. ಇತಿಹಾಸ ಪುರುಷರಿಗೆ 108 ಅಡಿ ಎತ್ತರದ ಭವ್ಯ ಪ್ರತಿಮೆ ಸ್ಥಾಪಿಸುವ ಮೂಲಕ ರಾಜ್ಯ ಸರಕಾರವು ಸೂಕ್ತ ಗೌರವ ನೀಡುತ್ತಿದೆ ಎಂದರು.

ನ.11ರಂದು ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ಕೆಂಪೇಗೌಡರ ಪ್ರತಿಮೆ ಲೋಕಾರ್ಪಣೆ ಆಗುತ್ತಿದೆ. ಈ ಹಿನ್ನೆಲೆಯಲ್ಲಿ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಪವಿತ್ರ ಮೃತ್ತಿಕಾ ಸಂಗ್ರಹಣಾ ಅಭಿಯಾನದ 20 ವಿಶೇಷ ನಾಡಪ್ರಭು ಕೆಂಪೇಗೌಡ ರಥಗಳಿಗೆ ಅವರು ಶುಕ್ರವಾರ ವಿಧಾನಸೌಧದ ಮುಂಭಾಗದಲ್ಲಿ ಚಾಲನೆ ನೀಡಿ ಮಾತನಾಡಿದರು. ಕೆಂಪೇಗೌಡರು ಜನರ ನಡುವೆಯೇ ಬದುಕಿ, ಇಲ್ಲಿನ ಜನರ ನೆಮ್ಮದಿಗೆ ಇಂಥದೊಂದು ನಗರವನ್ನು ನಿರ್ಮಿಸಿ ಹೋಗಿದ್ದಾರೆ. ಇತಿಹಾಸವನ್ನು ಮರೆತರೆ ನಮ್ಮ ಭವಿಷ್ಯ ಮಂಕಾಗುತ್ತದೆ. ಕೆಂಪೇಗೌಡರಿಗೆ ಸೂಕ್ತ ಗೌರವ ಸಲ್ಲಬೇಕೆಂಬ ಸಂಕಲ್ಪ ಸರಕಾರದ್ದಾಗಿತ್ತು. ಅನೇಕ ದಶಕಗಳ ಈ ಕನಸು ಈಗ ನನಸಾಗುತ್ತಿದೆ ಎಂದು ಅವರು ನುಡಿದರು.

ಅಮೆರಿಕದ ಸ್ವಾತಂತ್ರ್ಯ ಪ್ರತಿಮೆ, ಗುಜರಾತಿನ ಏಕತಾ ಪ್ರತಿಮೆಗಳಂತೆ ನಮ್ಮಲ್ಲಿ ಕೆಂಪೇಗೌಡರ ಪ್ರತಿಮೆಗೆ 'ಪ್ರಗತಿ ಪ್ರತಿಮೆ' ಎಂದು ಹೆಸರಿಸಲಾಗಿದೆ. ಅವರ 108 ಅಡಿ ಎತ್ತರದ ಪ್ರತಿಮೆಗೆ ತಕ್ಕಂತೆ ಕರ್ನಾಟಕವು ಇಡೀ ದೇಶದಲ್ಲಿ ನಂ.1 ಸ್ಥಾನಕ್ಕೆ ಏರಬೇಕು. ಈ ಪ್ರತಿಮೆ ಸ್ಥಾಪನೆಯು ರಾಜ್ಯದ ಉಜ್ವಲ ಭವಿಷ್ಯದ ಸಂಕೇತವಾಗಿದೆ ಎಂದು ಅವರು ಹೇಳಿದರು.

ಬೆಂಗಳೂರಿಗೆ ಬರುವ ಸಾವಿರಾರು ವಿದೇಶೀಯರು ವಿಮಾನ ನಿಲ್ದಾಣಕ್ಕೆ ಬಂದಿಳಿಯುತ್ತಿದ್ದಂತೆ ಕೆಂಪೇಗೌಡರಿಗೆ ನಮಸ್ಕರಿಸುವಂತೆ ಆಗಬೇಕು. ನ.11ರಂದು ನಡೆಯಲಿರುವ ಸಮಾರಂಭವು ರಾಜ್ಯದ ಪಾಲಿಗೆ ಅಮೃತ ಘಳಿಗೆಯಾಗಿದೆ. ಕೆಂಪೇಗೌಡರ ಆಡಳಿತವು 21ನೇ ಶತಮಾನದಲ್ಲೂ ಮಾದರಿಯಾಗಿ ಉಳಿದುಕೊಂಡಿದೆ. ಅವರ ರಚನಾತ್ಮಕತೆ ಈಗಲೂ ಅನುಕರಣೆ ಯೋಗ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಬೆಂಗಳೂರು ಜಾಗತಿಕ ಹೆಗ್ಗಳಿಕೆ: ಪ್ರಾಸ್ತಾವಿಕವಾಗಿ ಮಾತನಾಡಿದ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷ ಡಾ. ಸಿ.ಎನ್.ಅಶ್ವತ್ಥನಾರಾಯಣ, ವಿಜಯನಗರದ ಅರಸು ಕೃಷ್ಣದೇವರಾಯರಿಂದ ಸ್ಫೂರ್ತಿ–ಪ್ರೇರಣೆ ಪಡೆದು ನಾಡಪ್ರಭು ಕೆಂಪೇಗೌಡರು ಕಟ್ಟಿದ ನಗರವಾದ ಬೆಂಗಳೂರು ಇಂದು ಜಾಗತಿಕ ಸ್ತರದಲ್ಲಿ ವಿರಾಜಮಾನವಾಗಿದೆ. ಇಂತಹ



ಕೆಂಪೇಗೌಡರು ಇಡೀ ಕರ್ನಾಟಕದ ನಾಯಕರಾಗಿದ್ದಾರೆ ಎಂದರು. ಮಣ್ಣು ಪಂಚಭೂತಗಳಲ್ಲಿ ಒಂದಾಗಿದೆ. ರಾಜ್ಯದ ಪ್ರತಿಯೊಂದು ಹಳ್ಳಿಯ ಕೆರೆಕಟ್ಟೆ, ಕಲ್ಯಾಣಿ, ನದಿ, ಪುಷ್ಕರಿಣಿ, ತೊರೆಗಳಿಂದ ಇದನ್ನು ಕೆಂಪೇಗೌಡರ ಗೌರವಾರ್ಥ ಸಂಗ್ರಹಿಸಲಾಗುತ್ತಿದೆ. ಇದರ ಹಿಂದೆ ಇಡೀ ಕರ್ನಾಟಕವೇ ಒಂದು ಎನ್ನುವ ಉದಾತ್ತ ಸಂದೇಶವಿದೆ ಎಂದು ಅವರು ಬಣ್ಣಿಸಿದರು. ಅಭಿಯಾನವು ನ.7ರವರೆಗೆ ನಡೆಯಲಿದ್ದು, ಇದನ್ನು ಕೆಂಪೇಗೌಡ ಥೀಮ್ ಪಾರ್ಕ್ ಮತ್ತು ಪ್ರತಿಮೆಯ ನಾಲ್ಕು ಗೋಪುರಗಳಿಗೆ ಬಳಸಿಕೊಳ್ಳಲಾಗುವುದು. ಬೆಂಗಳೂರು ಆ ಕಾಲದಿಂದಲೂ ರಚನಾತ್ಮಕ ಚಟುವಟಿಕೆಗಳಿಗೆ ಮತ್ತು ವಾಣಿಜ್ಯೋದ್ಯಮಕ್ಕೆ ಹೆಸರಾಗಿದೆ. ಯಶವಂತಪುರ, ರಾಜಾಜಿನಗರ ಮುಂತಾದ ಉತ್ತರದ ಭಾಗಗಳಲ್ಲಿ ಉದ್ಯಮ ಸಂಸ್ಕೃತಿ ಮೊದಲಿನಿಂದಲೂ ಬೇರೂರಿದೆ. ಇದಕ್ಕೆ ಕಾರಣಕರ್ತರಾದ ಕೆಂಪೇಗೌಡರಿಗೆ ಇಷ್ಟು ತಡವಾಗಿಯಾದರೂ ಗೌರವ ಸಲ್ಲುತ್ತಿರುವುದು ಸಮಾಧಾನದ ಸಂಗತಿಯಾಗಿದ್ದು, ಇದನ್ನು ಬಿಜೆಪಿ ಸರಕಾರ ಆಗು ಮಾಡಿದೆ ಎಂದು ಅವರು ವಿವರಿಸಿದರು. ಪ್ರತೀ ಜಿಲ್ಲೆಗೂ ಈ ವಿಶೇಷ ರಥಗಳು ಬಂದಾಗ ಪೂರ್ಣಕುಂಭ ಸ್ವಾಗತ ನೀಡಲಾಗುವುದು. ಇದರಲ್ಲಿ ಜನಪ್ರತಿನಿಧಿಗಳು, ಸಾಹಿತಿಗಳು, ಪ್ರಗತಿಪರ ರೈತರು, ಸ್ವಸಹಾಯ ಸಂಘಗಳ ಸದಸ್ಯರು, ಹಾಲು ಒಕ್ಕೂಟಗಳ ಸದಸ್ಯರು ಪಾಲ್ಗೊಳ್ಳಲಿದ್ದಾರೆ. ಜತೆಗೆ ವೃತ್ತಿನಿರತ ಕುಂಬಾರರು, ಅಗಸರು, ತರಕಾರಿ, ಹೂ ವ್ಯಾಪಾರಿಗಳು, ಗಾಣಿಗರು, ನೀರುಗಂಟಿಗಳು ಮತ್ತು ನಾನಾ ಸಮುದಾಯಗಳ ಪ್ರಮುಖರು ಕೂಡ ಈ ಸಂಭ್ರಮದ ಭಾಗವಾಗಲಿದ್ದಾರೆ. ಈ ರಥಗಳಲ್ಲಿ ಎಲ್‌ಇಡಿ ಸ್ಕ್ರೀನ್‌ಪ್ಲೇ ಕೂಡ ಇರುತ್ತದೆ. ಈಗಾಗಲೇ ರಾಜ್ಯಾದ್ಯಂತ ಕೆರೆಕಟ್ಟೆ, ಕಲ್ಯಾಣಿ, ಪುಷ್ಕರಿಣಿ, ನದಿ, ಝರಿ ಇತ್ಯಾದಿಗಳಿಂದ ಸಂಗ್ರಹಿಸಿರುವ ಪವಿತ್ರವಾದ ಮಣ್ಣನ್ನು ನೋಡಲ್ ಅಧಿಕಾರಿಗಳು ಈ ರಥಗಳಿಗೆ ಹಿರಿಯರೊಬ್ಬರ ಮೂಲಕ ಸಮರ್ಪಿಸಲಿದ್ದಾರೆ ಎಂದು ವಿವರಿಸಿದರು. ಯಡಿಯೂರಪ್ಪನವರು ಮಾತನಾಡಿ, ನಾನು ಮೂರು ವರ್ಷಗಳ ಹಿಂದೆ ಮುಖ್ಯಮಂತ್ರಿಯಾದ ಕೂಡಲೇ ಅಶ್ವತ್ಥನಾರಾಯಣ ಅವರು ಕೆಂಪೇಗೌಡರಿಗೆ ಸೂಕ್ತ ಗೌರವ ಸಲ್ಲಿಸುವ ಇಂಥದ್ದೊಂದು ಯೋಜನೆಯನ್ನು (ಪ್ರತಿಮೆ ಸ್ಥಾಪನೆ) ಪ್ರಸ್ತಾಪಿಸಿದರು. ಅವರ ಈ ಉತ್ಸಾಹ, ಕಲ್ಪನೆಗಳು ಮತ್ತು ಪರಿಶ್ರಮಗಳು ಮೇಲ್ಪಂಕ್ತಿ ಹಾಕಿಕೊಟ್ಟಿವೆ ಎಂದರು. ವಿಮಾನ ನಿಲ್ದಾಣದಲ್ಲಿ ನ.11ರಂದು ಲೋಕಾರ್ಪಣೆ ಆಗಲಿರುವ ಕೆಂಪೇಗೌಡರ 108 ಅಡಿ ಪ್ರತಿಮೆಯನ್ನು ಸೃಷ್ಟಿಸಿರುವವರು ವಿಖ್ಯಾತ ಶಿಲ್ಪಿಗಳಾದ ನೋಯಿಡಾದ ರಾಮ್ ಸುತರ್. ಗುಜರಾತಿನಲ್ಲಿರುವ ಪಟೇಲ್ ಪ್ರತಿಮೆಯೂ ಸೇರಿದಂತೆ ವಿಖ್ಯಾತ ಪ್ರತಿಮೆಗಳನ್ನು ಅರಳಿಸಿರುವ ಸಾಧಕರಿವರು. ಕೆಂಪೇಗೌಡರ ಪ್ರತಿಮೆ ಸ್ಥಾಪನೆಗೆ ಉತ್ಕೃಷ್ಟ ದರ್ಜೆಯ ಕಬ್ಬಿಣ ಮತ್ತು ಉಕ್ಕನ್ನು ಬಳಸಿದ್ದು, ಇದಕ್ಕಾಗಿ 84 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇದಲ್ಲದೆ, ಪ್ರತಿಮೆಯ ಪರಿಸರದಲ್ಲಿ 23 ಎಕರೆ ವಿಶಾಲವಾದ 'ಕೆಂಪೇಗೌಡ ಥೀಮ್ ಪಾರ್ಕ್' ಕೂಡ ಅಭಿವೃದ್ಧಿಪಡಿಸಲಾಗುತ್ತದೆ. ರಾಜ್ಯದೆಲ್ಲೆಡೆಯಿಂದ ಸಂಗ್ರಹಿಸಲಾಗುವ ಪವಿತ್ರ ಮೃತ್ತಿಕೆಯನ್ನು ಈ ಥೀಮ್ ಪಾರ್ಕ್ ಮತ್ತು ಕೆಂಪೇಗೌಡರ ಪ್ರತಿಮೆಯ ನಾಲ್ಕು ಗೋಪುರಗಳಿಗೆ ಬಳಸಿಕೊಳ್ಳಲಾಗುತ್ತಿದೆ.

ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ತಾತ್ಕಾಲಿಕ ವೇಳಾಪಟ್ಟಿ ಪ್ರಕಟ

ಬೆಂಗಳೂರು: 2023 ಸಾಲಿನ ದ್ವಿತೀಯ ಪಿಯು ಪರೀಕ್ಷೆಯ ವಾರ್ಷಿಕ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು ಪದವಿ ಪೂರ್ವ ಪರೀಕ್ಷಾ ಮಂಡಳಿ ಪ್ರಕಟಿಸಿದೆ. ಮಾ. 10ರಿಂದ 29ರವರೆಗೆ ನಡೆಸಲು ಪಿಯು ಬೋರ್ಡ್ ತೀರ್ಮಾನಿಸಿದ್ದು, ಇಂದು (ಅಕ್ಟೋಬರ್ 21) ತಾತ್ಕಾಲಿಕ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಈ ಬಗ್ಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅಧಿಕೃತವಾಗಿ ಟ್ವೀಟ್ ಮಾಡಿ ಮಾಹಿತಿ ನೀಡಿದ್ದಾರೆ. ಇನ್ನೂ ಈ ವೇಳಾಪಟ್ಟಿಗೆ ಆಕ್ಷೇಪಣೆಗಳಿದ್ದರೆ ವಿದ್ಯಾರ್ಥಿಗಳು ನ. 21ರೊಳಗೆ jdexam.dpue@gmail.comಗೆ ಸಲ್ಲಿಸುವಂತೆ ಪಿಯು ಬೋರ್ಡ್ ತಿಳಿಸಿದ್ದಾರೆ.

ಪರೀಕ್ಷಾ ದಿನಾಂಕ	ವಿಷಯ
10-03-2023	ಕನ್ನಡ, ಅರೇಬಿಕ್
11-03-2023	ಗಣಿತ ಶಾಸ್ತ್ರ, ಶಿಕ್ಷಣ ಶಾಸ್ತ್ರ
13-03-2023	ಅರ್ಥಶಾಸ್ತ್ರ
14-03-2023	ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಮನಶಾಸ್ತ್ರ, ರಸಾಯನಶಾಸ್ತ್ರ, ಮೂಲಗಣಿತ
15-03-2023	ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್
16-03-2023	ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ
17-03-2023	ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೋಮೊಬೈಲ್, ಹೆಲ್ತ್ ಕೇರ್, ಬ್ಯೂಟಿ ಅಂಡ್ ವೆಲ್ ನೆಸ್
18-03-2023	ಭೂಗೋಳಶಾಸ್ತ್ರ, ಜೀವಶಾಸ್ತ್ರ
20-03-2023	ಇತಿಹಾಸ, ಭೌತಶಾಸ್ತ್ರ
21-03-2023	ಹಿಂದಿ
23-03-2023	ಇಂಗ್ಲೀಷ್
25-03-2023	ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ
27-03-2023	ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹ ವಿಜ್ಞಾನ
29-03-2023	ಸಮಾಜ ಶಾಸ್ತ್ರ ವಿದ್ಯುನ್ಮಾನಶಾಸ್ತ್ರ ಗಣಕ ವಿಜ್ಞಾನ

ಸೀಟ್ ಬೆಲ್ಟ್ ಧರಿಸದಿದ್ದರೆ 1,000 ರೂ. ದಂಡ

ಮೈಸೂರು, ಅ.21(ಆರ್‌ಕೆ)–ಸೀಟ್ ಬೆಲ್ಟ್ ಧರಿಸದೇ ವಾಹನ ಚಲಾಯಿಸಿದರೆ 1,000 ರೂ. ದಂಡ ವಿಧಿಸುವಂತೆ ನವದೆಹಲಿಯ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ನಿರ್ದೇಶನ ನೀಡಿದೆ. ಕಾರಿನ ಚಾಲಕ ಹಾಗೂ ಹಿಂದೆ ಪ್ರಯಾಣಿ ಸುವವರು ಸೀಟ್ ಬೆಲ್ಟ್ ಧರಿಸಬೇಕು. ಅಪಘಾತ, ಸಾವು ನಿಯಂತ್ರಿಸಲು ಈ ನಿಯಮವನ್ನು ಕಟ್ಟುನಿಟ್ಟಾಗಿ ಹೇರಬೇಕೆಂದು ಸಚಿವಾಲಯವು ದೇಶದ ಎಲ್ಲಾ ರಾಜ್ಯಗಳ ಪೊಲೀಸ್ ಇಲಾಖೆ ಮುಖ್ಯಸ್ಥರಿಗೆ ಪತ್ರ ಮುಖೇನ ಸೂಚನೆ ನೀಡಿದೆ.

ಈ ಹಿನ್ನೆಲೆಯಲ್ಲಿ ಮೈಸೂರು, ಹುಬ್ಬಳ್ಳಿ, ಧಾರವಾಡ, ಮಂಗಳೂರು, ಬೆಳಗಾವಿ ನಗರಗಳ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಜಂಟಿ ಪೊಲೀಸ್ ಆಯುಕ್ತರು, ಎಲ್ಲಾ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಅಕ್ಟೋಬರ್ 18ರಂದು ಪತ್ರ ಬರೆದಿರುವ ಪೊಲೀಸ್ ಮಹಾ ನಿರ್ದೇಶಕರ ಕಚೇರಿ ಹಿರಿಯ ಐಪಿಎಸ್ ಅಧಿಕಾರಿ ಆರ್.ಹಿತೇಂದ್ರ ಅವರು, ಸೀಟ್ ಬೆಲ್ಟ್ ಧರಿಸುವುದನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವಂತೆ ಸೂಚನೆ ನೀಡಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮೈಸೂರು ನಗರ ಸಂಚಾರ ಎಸಿಪಿ ಪರಶುರಾಮಪ್ಪ, ಕೇಂದ್ರ ಸಾರಿಗೆ ಸಚಿವಾಲಯದ ನಿರ್ದೇಶನದಂತೆ ಕರ್ನಾಟಕ ರಾಜ್ಯ ಸರ್ಕಾರವು ಅಧಿಸೂಚನೆ ಹೊರಡಿಸಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ನಂತರ ಸೀಟ್ ಬೆಲ್ಟ್ ಧರಿಸದಿದ್ದವರಿಗೆ 1,000 ರೂ. ದಂಡ ವಿಧಿಸಬೇಕಾಗುತ್ತದೆ ಎಂದರು. ಪ್ರಸ್ತುತ ಸೀಟ್ ಬೆಲ್ಟ್ ಧರಿಸದಿದ್ದರೆ 500 ರೂ. ದಂಡ ವಿಧಿಸಲಾಗುತ್ತಿದೆ. ತಮ್ಮ ಸುರಕ್ಷತೆಗಾಗಿ ಜನರು ತಪ್ಪದೇ ಸಂಚಾರ ನಿಯಮಗಳನ್ನು ಪಾಲಿಸಬೇಕೆಂದು ಅವರು ತಿಳಿಸಿದರು.

ಆಯತಪ್ಪಿ ಸ್ಕೂಟರ್‌ನಿಂದ ಬಿದ್ದು ಮಹಿಳೆ ಸಾವು

ಅಡ್ಡ ಬಂದ ಹಸು ಪಾರು ಮಾಡಲು ಹೋದಾಗ ದುರಂತ

ಮೈಸೂರು, ಅ.21– ಹಸುವಿಗೆ ಡಿಕ್ಕಿ ಹೊಡೆದು ಆಯತಪ್ಪಿ ಸ್ಕೂಟರ್‌ನಿಂದ ಬಿದ್ದು ಮಹಿಳೆ ಸಾವನ್ನಪ್ಪಿದ ಘಟನೆ ಮೈಸೂರು–ನಂಜನಗೂಡು ರಸ್ತೆಯ ಆರ್.ಎಂ.ಪಿ. ಬಳಿ ನಡೆದಿದೆ. ಕ್ಯಾತಮಾರನಹಳ್ಳಿಯ ಮಹದೇವಮ್ಮ(55) ಮೃತಪಟ್ಟವರು. ಪುತ್ರನ ಜೊತೆ ಸ್ಕೂಟರ್‌ನಲ್ಲಿ ನಂಜನಗೂಡಿನಿಂದ ಮೈಸೂರಿಗೆ ಹಿಂದಿರುಗುವಾಗ ದುರ್ಘಟನೆ ನಡೆದಿದ್ದು, ಪುತ್ರ ಚಿರಂತನ್‌ಗೆ ಸಣ್ಣಪುಟ್ಟ ಗಾಯಗಳಾಗಿದೆ. ಹೆಲ್ಮೆಟ್ ಧರಿಸದ ಹಿನ್ನಲೆ ತಲೆಗೆ ಗಂಭೀರ ಪೆಟ್ಟು ಬಿದ್ದ ಪರಿಣಾಮ ಮಹದೇವಮ್ಮ ಮೃತಪಟ್ಟಿದ್ದಾರೆ.

ನಂಜನಗೂಡು ದೇವಸ್ಥಾನಕ್ಕೆ ತೆರಳಿ ಮೈಸೂರಿಗೆ ತಾಯಿ ಮಗ ಹಿಂದಿರುಗುತ್ತಿದ್ದಾಗ ಆರ್.ಎಂ.ಪಿ ಬಳಿ ಹಸು ಅಡ್ಡಬಂದಿದೆ ಡಿಕ್ಕಿ ಹೊಡೆಯುವುದನ್ನ ತಪ್ಪಿಸಲು ಯತ್ನಿಸಿದರೂ ಸಾಧ್ಯವಾಗಿಲ್ಲ. ಈ ವೇಳೆ ಹಿಂಬದಿ ಕುಳಿತಿದ್ದ ಮಹದೇವಮ್ಮ ಸ್ಕೂಟರ್‌ನಿಂದ ಆಯತಪ್ಪಿ ಬಿದ್ದಿದ್ದಾರೆ. ತಲೆಗೆ ಗಂಭೀರವಾಗಿ ಪೆಟ್ಟು ಬಿದ್ದವರನ್ನು ಕೆ.ಆರ್.ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮಹದೇವಮ್ಮ ಮೃತಪಟ್ಟಿದ್ದಾರೆ. ಈ ಸಂಬಂಧ ಕೆಆರ್.ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೇಮಕ



ಮೈಸೂರು, ಅ.21–ಮೈಸೂರು ನಗರ ನರಸಿಂಹ ವಿಧಾನಸಭಾ ಕ್ಷೇತ್ರದ ಅಬ್ದುಲ್ ನಜೀರ್ ಸಾಬ್ ಬ್ಲಾಕ್‌ನ ಅಧ್ಯಕ್ಷರನ್ನಾಗಿ ರಿಜ್ವಾನ್ ಅಹಮ್ಮದ್ ಅವರನ್ನು ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ ನೇಮಕ ಮಾಡಿದ್ದಾರೆ.

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ–571404 ದೂ: 222026 (ಕ) ಫ್ಯಾಕ್ಸ್: 08232–222026, ಮೊ: 8762960325. E-Mail : mandya@mysurumithra.com

ಎಐಸಿಸಿ ಅಧ್ಯಕ್ಷರಾಗಿ ಖರ್ಗೆ ಆಯ್ಕೆಯಿಂದ ಕರ್ನಾಟಕ ಕಾಂಗ್ರೆಸ್‌ಗೆ ಬೂಸ್ಟರ್ ಡೋಸ್

ಕೆ.ಆರ್.ಪೇಟೆ ಕಾಂಗ್ರೆಸ್ ಮುಖಂಡ ವಿಜಯರಾಮೇಗೌಡ

ಮಂಡ್ಯ,ಅ.21– ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ನೂತನ ಅಧ್ಯಕ್ಷರಾಗಿ ಹಿರಿಯ ಕಾಂಗ್ರೆಸ್ಸಿಗ ಮಲ್ಲಿಕಾರ್ಜುನ ಖರ್ಗೆ ಆಯ್ಕೆಯಾಗಿರುವುದು ವಿಧಾನಸಭಾ ಚುನಾವಣೆಯ ಹೊಸ್ತಿಲಿನಲ್ಲಿರುವ ಕರ್ನಾಟಕ ಕಾಂಗ್ರೆಸ್‌ಗೆ ಬೂಸ್ಟರ್ ಡೋಸ್ ಸಿಕ್ಕಂತೆ ಎಂದು ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಬೂಕನಕೆರೆ ವಿಜಯ ರಾಮೇಗೌಡ ವಿಶ್ಲೇಷಿಸಿದ್ದಾರೆ.



ಮಲ್ಲಿಕಾರ್ಜುನ ಖರ್ಗೆ ವಿಜಯರಾಮೇಗೌಡ

ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ ಅಧ್ಯಕ್ಷರಾದ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿರುವ ಅವರು, ಖರ್ಗೆಯಂತಹ ಮುತ್ಸದ್ದಿ ನಾಯಕರಿಗೆ ಎಐಸಿಸಿ ಅಧ್ಯಕ್ಷರಂತಹ ಮಹತ್ವದ ಚುಕ್ಕಾಣಿ ಸಿಕ್ಕಿರುವುದು ನಿಜಕ್ಕೂ ಸಂತಸವಾಗಿದೆ. ಇದರಿಂದ ಇನ್ನು ಕೇವಲ ಆರು ತಿಂಗಳಲ್ಲಿ ವಿಧಾನಸಭಾ ಚುನಾವಣೆ ಎದುರಿಸಲಿರುವ ರಾಜ್ಯ ಕಾಂಗ್ರೆಸ್‌ಗೆ ಆನೆಬಲದ ಜೊತೆಗೆ ಬೂಸ್ಟರ್ ಡೋಸ್ ಸಿಕ್ಕಿದೆ. ಈ ಮೂಲಕ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರ ಹಿಡಿಯಲು ಸುಲಭವಾಗಲಿದೆ ಎಂದು ಹೇಳಿದರು.

ಕಾಂಗ್ರೆಸ್ ಅಧಿನಾಯಕರಾದ ಸೋನಿಯಾ ಗಾಂಧಿ, ಅವರ ಆಶೀರ್ವಾದದಿಂದ ಖರ್ಗೆ ಕಾಂಗ್ರೆಸ್‌ನಲ್ಲಿ ದೊಡ್ಡ ಮಟ್ಟಕ್ಕೆ ಬೆಳೆದಿದ್ದಾರೆ. ಅವರು ಎಐಸಿಸಿ ಅಧ್ಯಕ್ಷಗಾದಿಗೆ ಸ್ಪರ್ಧಿಸಿದಾಗ ಅವರನ್ನು ಭಾರೀ ಅಂತರದಿಂದ ದೇಶಾದ್ಯಂತ ಕಾಂಗ್ರೆಸ್ಸಿಗರು ಗೆಲ್ಲಿಸಿದ್ದಾರೆ. ಇವರ ಗೆಲುವಿನಿಂದ ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ ಇಡೀ ದಕ್ಷಿಣ ಭಾರತದ ಕಾಂಗ್ರೆಸ್‌ಗೆ ಹೊಸ ಚೈತನ್ಯ ಸಿಕ್ಕಂತಾಗಿದೆ. ರಾಜ್ಯದ ಪ್ರತಿಯೊಬ್ಬ ಕಾಂಗ್ರೆಸ್ಸಿಗರು ಸಹ ಖರ್ಗೆ ಅವರ ಗೆಲುವನ್ನು ಸಂಭ್ರಮಿಸಿದ್ದಾರೆ ಎಂದರು.

ಮುಂದಿನ ಚುನಾವಣೆಯಲ್ಲಿ ಖರ್ಗೆ ಅವರ ಮಾರ್ಗದರ್ಶನದಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದೆ. ಅಲ್ಲದೆ ಮುಂದಿನ ಲೋಕಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷ ಹೆಚ್ಚಿನ ಸೀಟು ಗೆಲ್ಲಲು ಖರ್ಗೆ ಅವರ ಹೊಸ ನಾಯಕತ್ವ ಕಾರಣೀಭೂತವಾಗಲಿದೆ ಎಂದು ಭವಿಷ್ಯ ನುಡಿದರು.

ಕಾಂಗ್ರೆಸ್ ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ, ಶಾಸಕರಾಗಿ, ಸಚಿವರಾಗಿ, ಕೆಪಿಸಿಸಿ ಅಧ್ಯಕ್ಷರಾಗಿ, ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿ, ಲೋಕಸಭಾ ಸದಸ್ಯರಾಗಿ, ಕೇಂದ್ರ ಸಚಿವರಾಗಿ, ರಾಜ್ಯ ಸಭೆಯ ವಿಪಕ್ಷ ನಾಯಕರಾಗಿ ದೇಶದ ಸಮಗ್ರ ಅಭಿವೃದ್ಧಿಗಾಗಿ ಅಹರ್ನಿಶಿ ಚಿಂತಿಸುತ್ತಾ ಶ್ರಮಿಸುತ್ತಿರುವ ಖರ್ಗೆ ನಮ್ಮ ಹೆಮ್ಮೆಯ ಕನ್ನಡಿಗ. ಹಲವು ದಶಕಗಳ ಅನಂತರ ಕನ್ನಡಿಗರೊಬ್ಬರಿಗೆ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸುವ ಅಧ್ಯಕ್ಷ ಪೀಠ ದೊರಕಿರುವುದು ಸಮಸ್ತ ಕನ್ನಡಿಗರೂ ಪಕ್ಷಾತೀತವಾಗಿ ಸಂತಸ ಪಡುವ ವಿಚಾರ ಎಂದು ತಿಳಿಸಿದರು.

ಪಕ್ಷ ನಿಷ್ಠೆಗೆ ಮತ್ತೊಂದು ಹೆಸರಾದ ಖರ್ಗೆ ಅವರ ಜೀವನ ಪಥ ಎಲ್ಲಾ ಕಾಂಗ್ರೆಸ್ಸಿಗರಿಗೂ ದಾರಿದೀಪ. ಖರ್ಗೆ ನೇತೃತ್ವದಲ್ಲಿ ಕಾಂಗ್ರೆಸ್ ದೇಶದಲ್ಲಿ ಮತ್ತೆ ವಿಜೃಂಭಿಸಲಿದೆ. ನಾವೆಲ್ಲರೂ ಖರ್ಗೆ ತೋರಿಸಿದ ಮಾರ್ಗದಲ್ಲಿ ಪಕ್ಷಕ್ಕಾಗಿ ದುಡಿಯುತ್ತೇವೆ ಎಂದು ಹೇಳಿದರು.

ಖರ್ಗೆಯವರನ್ನು ಎಐಸಿಸಿ ಅಧ್ಯಕ್ಷರನ್ನಾಗಿ ಆಯ್ಕೆಮಾಡಿರುವುದು ದೇಶಕ್ಕೆ ಮತ್ತು ರಾಜ್ಯಕ್ಕೆ ಸಂದ ಜಯವಾಗಿದೆ. ದಲಿತ ಹಾಗೂ ಹಿಂದುಳಿದ ಸಮುದಾಯಕ್ಕೆ ಬಲ ತುಂಬಿದಂತಾಗಿದೆ. 135 ವರ್ಷ ಇತಿಹಾಸವುಳ್ಳ ರಾಷ್ಟ್ರೀಯ ಪಕ್ಷಕ್ಕೆ ಖರ್ಗೆಯಂತಹ ನಾಯಕರ ಅನುಭವ ಅವಶ್ಯಕತೆ ಇತ್ತು. ಮುಂದಿನ ದಿನಗಳಲ್ಲಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯುವುದರಲ್ಲಿ ಯಾವುದೇ ಸಂಶಯವಿಲ್ಲ. ಬಿಜೆಪಿ ದುರಾಡಳಿತ ಜನರಿಗೆ ಬೇಸರತಂದಿದೆ ಎಂದರು.

ಅಕ್ಕಿಹೆಬ್ಬಾಳು ಬಳಿ ಹೇಮಾವತಿ ದ್ವೀಪದಲ್ಲಿ 900 ಕುರಿಗಳೊಂದಿಗೆ ಸಿಲುಕಿರುವ 10 ಕುರಿಗಾಹಿಗಳು

ತಾಲೂಕು ಆಡಳಿತದಿಂದ ಸದ್ಯಕ್ಕೆ ಆಹಾರ ಪೂರೈಕೆ; ಆರೋಗ್ಯದ ಬಗ್ಗೆ ನಿಗಾ

ಕೆ.ಆರ್.ಪೇಟೆ, ಅ.21–ಹೇಮಾವತಿ ನದಿ ಉಕ್ಕಿ ಹರಿಯುತ್ತಿರುವ ಪರಿಣಾಮ ಕೆ.ಆರ್.ಪೇಟೆ ತಾಲೂಕಿನ ಅಕ್ಕಿಹೆಬ್ಬಾಳು ಸಮೀಪದ ಹಳೇಕೋಟೆ ದ್ವೀಪದಲ್ಲಿ 900 ಕುರಿಗಳೊಂದಿಗೆ 10 ಕುರಿಗಾಹಿಗಳು ಸಿಲುಕಿಕೊಂಡಿರುವ ಬಗ್ಗೆ ವರದಿಯಾಗಿದೆ.

ದ್ವೀಪದಿಂದ ಹೊರಬರಲಾಗದೆ ಸಿಲುಕಿರುವ ಕುರಿಗಾಹಿಗಳು ಆಹಾರವಿಲ್ಲದೆ ಬಳಲುತ್ತಿರುವ ಮಾಹಿತಿ ಪಡೆದ ತಹಸೀಲ್ದಾರ್ ಎಂ.ವಿ.ರೂಪಾ, ಅಕ್ಕಿಹೆಬ್ಬಾಳು ಗ್ರಾಪಂ ಪಿಡಿಓ ರವಿಕುಮಾರ್, ರಾಜಸ್ವ ನಿರೀಕ್ಷಕ ನರೇಂದ್ರ, ಗ್ರಾಮ ಲೆಕ್ಕಾಧಿಕಾರಿ ಮಧು, ಗ್ರಾಪಂ ಕಾರ್ಯದರ್ಶಿ ರಾಮು, ಕೆ.ಆರ್.ಪೇಟೆ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ನಿರಂಜನ್, ಅಗ್ನಿಶಾಮಕ ಮತ್ತು ವಿಪತ್ತು ದಳದ ಮುಖ್ಯಸ್ಥ ಹರೀಶ್, ಅಗ್ನಿಶಾಮಕ ಅಧಿಕಾರಿ ಶಿವಣ್ಣ ಅವರನ್ನೊಳಗೊಂಡ ತಂಡ ದ್ವೀಪಕ್ಕೆ ತೆರಳಿ ಕುರಿಗಾಹಿಗಳಿಗೆ ಆಹಾರ ಪೂರೈಸಿದೆ.


ದ್ವೀಪದಲ್ಲಿ ಸಿಲುಕಿರುವ ಕುರಿಗಾಹಿಗಳು ತಮ್ಮ 900 ಕುರಿಗಳನ್ನು ಬಿಟ್ಟು ಬರಲು ಒಪ್ಪದ ಕಾರಣ ಹಾಗೂ ಈ ಭಾರೀ ಪ್ರಮಾಣದ ಕುರಿಗಳನ್ನು ರಕ್ಷಿಸಿ ಹೊರ ತರುವುದೂ ಕೂಡ ಅಸಾಧ್ಯವಾದುದ್ದರಿಂದ ಕುರಿಗಾಹಿಗಳಿಗೆ ಆಹಾರ ಪದಾರ್ಥಗಳನ್ನು ಪೂರೈಸಿದ್ದು, ಅವರ ಆರೋಗ್ಯದ ಬಗ್ಗೆ ಅಧಿಕಾರಿಗಳು ನಿಗಾ ವಹಿಸಿದ್ದಾರೆ.

ವಿವರ: ಅಕ್ಕಿಹೆಬ್ಬಾಳು ಬಳಿಯ ಹಳೇಕೋಟೆ ದ್ವೀಪದಲ್ಲಿ ಕುರಿಗಳಿಗೆ ಯಥೇಚ್ಛವಾಗಿ ಮೇವು ದೊರೆಯುತ್ತದೆ. ಹೇಮಾವತಿ ನದಿ ದ್ವೀಪದ ಸುತ್ತ ಹರಿಯುತ್ತಿದ್ದರೂ, ದ್ವೀಪವನ್ನು ಪ್ರವೇಶಿಸಲು ಒಂದು ಕಡೆ ಚೆಕ್‌ಡ್ಯಾಂನಂತಹ ಸ್ಥಳವಿದ್ದು, ಈ ಚೆಕ್‌ಡ್ಯಾಂ ಮೂಲಕ ಕುರಿಗಾಹಿಗಳು, ತಮ್ಮ ಕುರಿಗಳನ್ನು ಮೇಯಿಸಲು ದ್ವೀಪಕ್ಕೆ ತೆರಳುತ್ತಾರೆ. ಹೀಗೆ ದ್ವೀಪಕ್ಕೆ ಬರುವ ಕುರಿಗಾಹಿಗಳು 10–15 ದಿನಕ್ಕೆ ಆಗುವಷ್ಟು ಆಹಾರ ಪದಾರ್ಥಗಳನ್ನು ತಮ್ಮೊಂದಿಗೆ ತಂದು ಅಲ್ಲಿಯೇ ಅಡಿಗೆ ಮಾಡಿ, ಕುರಿ ಮೇಯಿಸುತ್ತಾರೆ.



ಹೀಗೆ ಚಿಕ್ಕನಾಯಕನಹಳ್ಳಿ ತಾಲೂಕು ಹುಳಿಯಾರು ಹೋಬಳಿ ಕರೆಬಲಾಯ್ಯನ ಕಟ್ಟೆ ನಿವಾಸಿಗಳಾದ ತಿಮ್ಮಯ್ಯ ಮತ್ತು ಚಿತ್ರದೇವರ ಹಟ್ಟಿ ನಿವಾಸಿ ಗಂಗಣ್ಣ ಅವರ ಕುಟುಂಬಕ್ಕೆ ಸೇರಿದ 10 ಮಂದಿ ಕುರಿಗಾಹಿಗಳು 15 ದಿನದ ಹಿಂದೆ 900 ಕುರಿಗಳೊಂದಿಗೆ ದ್ವೀಪವನ್ನು ಪ್ರವೇಶಿಸಿದ್ದಾರೆ. ಭಾರೀ ಮಳೆ ಕಾರಣದಿಂದಾಗಿ ಹೇಮಾವತಿ ನದಿ ಉಕ್ಕಿ ಹರಿಯುತ್ತಿದ್ದು, ಚೆಕ್‌ಡ್ಯಾಂ ಮೇಲೂ ಐದಾರು ಅಡಿಗಳಷ್ಟು ನೀರು ರಭಸವಾಗಿ ಹರಿಯುತ್ತಿರುವುದರಿಂದ ಕುರಿಗಾಹಿಗಳಿಗೆ ತಮ್ಮ ಕುರಿಗಳೊಂದಿಗೆ ದ್ವೀಪದಿಂದ ಹೊರಬರಲು ಸಾಧ್ಯವಾಗಿಲ್ಲ. ತಾವು ತಂದಿದ್ದ ಆಹಾರ ಪದಾರ್ಥಗಳು ಖಾಲಿಯಾಗಿ ಹಸಿವಿನಿಂದ ಬಳಲುತ್ತಿದ್ದ ಇವರು, ಗದ್ದಿಗೆರೆಹಟ್ಟಿಯ ಕರವೇ ಮುಖಂಡ ಕೊಟ್ರೇಶಿ ಮೊಬೈಲ್ ಮೂಲಕ ಸಂಪರ್ಕಿಸಿದ್ದರು ಎಂದು ಹೇಳಲಾಗಿದ್ದು, ಅವರು ಕೆ.ಆರ್.ಪೇಟೆ ಕರವೇ ತಾಲೂಕು ಅಧ್ಯಕ್ಷ ಡಿ.ಎಸ್.ವೇಣು ಅವರಿಗೆ ವಿಷಯ ತಿಳಿಸಲಾಗಿ, ಅವರು ನೀಡಿದ ಮಾಹಿತಿ ಮೇರೆಗೆ ತಹಸೀಲ್ದಾರ್ ಮತ್ತವರ ತಂಡ ಕುರಿಗಾಹಿಗಳಿಗೆ ಆಹಾರ ಪೂರೈಸುವ ಕಾರ್ಯಕ್ಕೆ ಮುಂದಾಯಿತು.

ಮಂಡ್ಯದ ಬೆಣ್ಣೆ ಇಡ್ಲಿ ಖ್ಯಾತಿಯ ಇಡ್ಲಿ ಶಿವಪ್ಪ ಅಪಘಾತದಲ್ಲಿ ಸಾವು



ಮಂಡ್ಯ, ಅ.21– ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ಬೆಣ್ಣೆ ಇಡ್ಲಿ ಎಂದೇ ಪ್ರಸಿದ್ಧಿ ಪಡೆದಿದ್ದ ಶ್ರೀರಂಗಪಟ್ಟಣ ತಾಲೂಕಿನ ದರಸಗುಪ್ಪೆ ಗ್ರಾಮದ ಇಡ್ಲಿ ಶಿವಪ್ಪ ಶುಕ್ರವಾರ ಮುಂಜಾನೆ ಸಾವಿಗೀಡಾಗಿದ್ದಾರೆ.

ಸ್ಕೂಟರ್‌ನಲ್ಲಿ ರಾಮನಗರಕ್ಕೆ ಹೋಗುತ್ತಿದ್ದಾಗ ರಸ್ತೆ ಮಧ್ಯೆ ನಾಯಿ ಅಡ್ಡ ಬಂದು ಸ್ಕೂಟರ್‌ನಿಂದ ಕೆಳಕ್ಕೆ ಬಿದ್ದು ಅವರು ಗಾಯಗೊಂಡಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಕೊಡಿಸಿ ನಂತರ ಮನೆಗೆ ಕರೆತರಲಾಗಿತ್ತು.

ಗುರುವಾರ ಮಧ್ಯರಾತ್ರಿ ತೀವ್ರ ನೋವಿನಿಂದ ನರಳುತ್ತಿದ್ದ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಅವರು ಮೃತಪಟ್ಟಿದ್ದಾರೆ. ಮೃತರು ಪತ್ನಿ, ಪುತ್ರ ಸೇರಿದಂತೆ ಸಾವಿರಾರು ಮಂದಿ ಇಡ್ಲಿ ಪ್ರಿಯರನ್ನು ಅಗಲಿದ್ದಾರೆ.

ರಾಮನಗರ ಮೂಲದವರಾದ ಶಿವಪ್ಪ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕು ದರಸಗುಪ್ಪೆ ಗ್ರಾಮದಲ್ಲಿ ನೆಲೆಸಿದ್ದರು. ಚಾಮರಾಜನಗರ–ಬೀದರ್ ರಾಷ್ಟ್ರೀಯ ಹೆದ್ದಾರಿ ಸಮೀಪವಿದ್ದ ತಮ್ಮ ಮನೆಯಲ್ಲಿಯೇ ಜೀವನೋಪಾಯಕ್ಕೆ ಸಣ್ಣ ಟೀ ಅಂಗಡಿ ಪ್ರಾರಂಭಿಸಿದರು. ಶುಚಿ ಮತ್ತು ರುಚಿಗೆ ಖ್ಯಾತರಾಗಿದ್ದ ಶಿವಪ್ಪ ಅವರ ಹೋಟೆಲ್‌ನಲ್ಲಿ ಟೀ ಕುಡಿಯಲು ಜನ ತಂಡ ತಂಡವಾಗಿ ಆಗಮಿಸುತ್ತಿದ್ದರು. ನಂತರ ಸಣ್ಣದಾಗಿ ಬೆಳಗಿನ ಉಪಾಹಾರ ಇಡ್ಲಿ ಮಾರಲು ಪ್ರಾರಂಭಿಸಿದರು. ನೋಡ ನೋಡುತ್ತಿದ್ದಂತೆಯೇ ಅವರ ಇಡ್ಲಿ ಬೆಣ್ಣೆ ಇಡ್ಲಿ ಎಂದೇ ಜನಪ್ರಿಯವಾಯಿತು. ಇವರು ಮಾಡುವ ಇಡ್ಲಿಗೆ ಜನರು ಗಂಟೆ ಗಟ್ಟಲೇ ಕಾಯುವಂತಾಯಿತು.

ಶ್ರೀರಂಗಪಟ್ಟಣ–ಬೀದರ್ ರಾಜ್ಯ ಹೆದ್ದಾರಿಯ ಪಕ್ಕದಲ್ಲಿರುವ ಈ ಪುಟ್ಟ ಹೋಟೆಲ್‌ಗೆ ಮೈಸೂರು, ಮಂಡ್ಯ, ಬೆಂಗಳೂರು ಸೇರಿದಂತೆ ಹೊರ ಜಿಲ್ಲೆಯ ಪ್ರವಾಸಿಗರು ಇಡ್ಲಿ ತಿನ್ನಲು ಆಗಮಿಸುತ್ತಿದ್ದರು. ನಟರಾದ ಪ್ರಕಾಶ್ ರೈ ಹಾಗೂ ಸಿಹಿಕಹಿ ಚಂದ್ರು ಅವರು ತಮ್ಮ ಕಾರ್ಯಕ್ರಮಕ್ಕಾಗಿ ಆಗಮಿಸಿ ಇವರ ಇಡ್ಲಿ ಸವಿದು ಮೆಚ್ಚುಗೆ ವ್ಯಕ್ತಪಡಿಸಿದ್ದರು.

ವೈದ್ಯ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಪಾಲ್ಗೊಳ್ಳುವಿಕೆ ಅವಶ್ಯ



ಮಂಡ್ಯ,ಅ.21– ವೈದ್ಯ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಪಾಲ್ಗೊಳ್ಳುವಿಕೆ ಅವಶ್ಯ ಎಂದು ಮಿಮ್ಸ್ ಪ್ರಾಂಶುಪಾಲ ಡಾ.ತಮ್ಮಣ್ಣ ಹೇಳಿದರು.

ನಗರದಲ್ಲಿರುವ ಮಿಮ್ಸ್‌ನ ಜಿಲ್ಲಾಸ್ಪತ್ರೆಯ ಕ್ರೀಡಾಂಗಣದಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಅವ್ಯಕ್ತನ್ಸ್ ಸಹಯೋಗದಲ್ಲಿ ನಡೆದ ವಿರಾಟ–2022ರ ಅಥ್ಲೆಟಿಕ್ ಮೀಟ್ ಕ್ರೀಡಾ ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜು ಜೀವನದಲ್ಲಿ ಕ್ರೀಡೆ–ಸಾಂಸ್ಕೃತಿಕ ಚಟುವಟಿಕೆಗಳು ಇದ್ದೇ ಇರುತ್ತವೆ, ವೈದ್ಯವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಪಾಲ್ಗೊಳ್ಳುವಿಕೆ ಅವಶ್ಯಕ, ಸೋಲು–ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಮೈಗೂಡಿಸಿಕೊಳ್ಳಬೇಕಿದೆ ಎಂದು ಸಲಹೆ ನೀಡಿದರು. ಕೋವಿಡ್–19ರ ದಿನಗಳಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಗಳು ಒಂದೇ ಆಗಿಬಿಟ್ಟಿವೆ, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಗಳನ್ನು ವಿಂಗಡಣೆ ಮಾಡಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಅಥ್ಲೆಟಿಕ್ ಕ್ರೀಡೆಗಳಲ್ಲಿ ವಿಜೇತರಿಗೆ ಮತ್ತು ವಿಜೇತ ತಂಡಗಳಿಗೆ ಗಣ್ಯರು ಬಹುಮಾನ ನೀಡಿದರು. ಕ್ರೀಡಾಸಮಿತಿ ಸದಸ್ಯರನ್ನು ಗಣ್ಯರು ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಶ್ರೀಧರ್, ಕ್ರೀಡಾ ಸಮಿತಿ ಸದಸ್ಯರಾದ ಡಾ.ಹರೀಶ್, ಡಾ.ಸಿದ್ದೇಗೌಡ, ಡಾ ನಾಗರಾಜೇಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸುರೇಶ್, ಡಾ.ಅಶ್ವಿನ್, ಡಾ.ಅನೀನಾ, ಚೇತನಾ ಮತ್ತಿತರರಿದ್ದರು.

ಅ.28, ಕೋಟಿ ಕಂಠ ಗಾಯನ ಕಾರ್ಯಕ್ರಮ

ಮಂಡ್ಯ,ಅ.21– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 67ನೇ ಕನ್ನಡ ರಾಜ್ಯೋತ್ಸವ ಹಿನ್ನೆಲೆಯಲ್ಲಿ ಅ.28 ರಂದು ಕೋಟಿ ಕಂಠ ಗಾಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಆಸಕ್ತ ಸ್ವಸಹಾಯ ಗುಂಪುಗಳು, ಕಾಲೇಜು ವಿದ್ಯಾರ್ಥಿಗಳು, ಏಕ ವ್ಯಕ್ತಿ, ಸಂಘ–ಸಂಸ್ಥೆಗಳು, ಪ್ರೌಢ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಪ್ರೌಢಶಾಲೆಗಳು ಭಾಗವಹಿಸಬಹುದು.

ಕಾರ್ಯಕ್ರಮದಲ್ಲಿ ನಾಡಗೀತೆ, ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು, ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ಹಚ್ಚೇವು ಕನ್ನಡದ ದೀಪ, ಕನ್ನಡ ಡಿಂಡಿಮ, ವಿಶ್ವ ವಿನೂತನ ಗಾಯನಗಳು ಕಡ್ಡಾಯವಾಗಿರುತ್ತದೆ. ಅಭ್ಯರ್ಥಿಗಳು ಅ.20 ರೊಳಗಾಗಿ ನೋಂದಾವಣೆ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವೆಬ್‌ಸೈಟ್‌ನಲ್ಲಿರುವ ಕ್ಯೂ ಆರ್ ಕೋಡ್ ಅಥವಾ Kannadasiri.co.in ಅಥವಾ ದೂ.ಸಂ.08232–223197 ಸಂಪರ್ಕಿಸಬಹುದೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಬಾಲಕ ನಾಪತ್ತೆ



ಮಂಡ್ಯ, ಅ. 21–ಬಾಲಕನೋರ್ವ ಕಾಣೆಯಾಗಿರುವ ಬಗ್ಗೆ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮಂಡ್ಯ ತಾಲೂಕು ಕೊತ್ತತ್ತಿ ಹೋಬಳಿ ಹನಿಯಂಬಡಿ ಗ್ರಾಮದ ನಿವಾಸಿ ಕೆಂಚೇಗೌಡರ ಪುತ್ರ ತನು ನಾಗೇಶ್ (14) ನಾಪತ್ತೆಯಾದ ಬಾಲಕ. ತನುನಾಗೇಶ್ ಮೈಸೂರಿನ ಸದ್ವಿದ್ಯಾ ಶಾಲೆಯಲ್ಲಿ 9ನೇ ತರಗತಿ ವ್ಯಾಸಂಗ ಮಾಡುತ್ತಿದ್ದು, ಸೆ.28ರಂದು ಸಂಜೆ 6 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವನು ಇದುವರೆಗೂ ಮನೆಗೆ ಬಂದಿಲ್ಲ ಎಂದು ಅವರ ತಂದೆ ದೂರು ದಾಖಲಿಸಿದ್ದಾರೆ. ಈತನ ಬಗ್ಗೆ ಮಾಹಿತಿ ತಿಳಿದಲ್ಲಿ ಮೊ. 9739466204, 9844588777 ಸಂಪರ್ಕಿಸಲು ಕೋರಲಾಗಿದೆ.

ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ವರ್ಗಾವಣೆ

● ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮೈಸೂರು ನೂತನ ಡಿಸಿ ● ಮಂಡ್ಯ ಜಿಲ್ಲಾಧಿಕಾರಿ ಎಸ್.ಅಶ್ವತಿ, ಚಾಮರಾಜನಗರ ಡಿಸಿ ಚಾರುಲತಾ ಸೋಮಲ್ ವರ್ಗ; ಡಾ. ಹೆಚ್.ಎನ್. ಗೋಪಾಲ ಕೃಷ್ಣ ಮಂಡ್ಯ, ಡಿ.ಎಸ್.ರಮೇಶ್ ಚಾ.ನಗರ ನೂತನ ಜಿಲ್ಲಾಧಿಕಾರಿಗಳು


ಬಗಾದಿ ಗೌತಮ್


ಕೆ.ವಿ.ರಾಜೇಂದ್ರ


ಹೆಚ್.ಎನ್. ಗೋಪಾಲ ಕೃಷ್ಣ


ಡಿ.ಎಸ್.ರಮೇಶ್

ಮೈಸೂರು, ಅ.21(ಎಸ್‌ಪಿಎನ್)– ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಮೈಸೂರು ಜಿಲ್ಲಾಧಿಕಾರಿಯನ್ನಾಗಿ ದಕ್ಷಿಣ ಕನ್ನಡ ಡಿಸಿ ಡಾ.ಕೆ.ವಿ.ರಾಜೇಂದ್ರ ಅವರನ್ನು ನಿಯೋಜಿಸಲಾಗಿದೆ. ಮಂಡ್ಯ ಜಿಲ್ಲಾಧಿಕಾರಿ ಎಸ್.ಅಶ್ವತಿ ಹಾಗೂ ಚಾಮರಾಜನಗರ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೇರಿದಂತೆ ಒಟ್ಟು 21 ಮಂದಿ ಐಎಎಸ್ ಅಧಿಕಾರಿಗಳನ್ನು ಆಡಳಿತಾತ್ಮಕ ದೃಷ್ಟಿಯಿಂದ ರಾಜ್ಯ ಸರ್ಕಾರ ವರ್ಗಾವಣೆ ಮಾಡಿದೆ.

ಇದರ ಜೊತೆಗೆ ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರನ್ನು ಬೆಂಗಳೂರಿನ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕರಾಗಿ, ಮಂಡ್ಯ ಜಿಲ್ಲಾಧಿಕಾರಿ ಎಸ್.ಅಶ್ವತಿ ಅವರನ್ನು ಬೆಂಗಳೂರಿನ ಪಶುಸಂಗೋಪನೆ ಪಶು ವೈದ್ಯಕೀಯ ಸೇವಾ ಇಲಾಖೆಯ ಆಯುಕ್ತರನ್ನಾಗಿ ನಿಯೋಜಿಸಲಾಗಿದೆ.

ಮೂರು ಜಿಲ್ಲೆಗೆ ನೂತನ ಡಿಸಿ: ದಕ್ಷಿಣ ಕನ್ನಡ (ಮಂಗಳೂರು) ಜಿಲ್ಲಾಧಿಕಾರಿಯಾಗಿದ್ದ ಡಾ.ಕೆ.ವಿ.ರಾಜೇಂದ್ರ ಅವರನ್ನು ಡಾ.ಬಗಾದಿ ಗೌತಮ್ ಅವರ ಜಾಗಕ್ಕೆ ಹಾಗೂ ಬೆಂಗಳೂರಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರಾಗಿದ್ದ ಡಾ.ಹೆಚ್.ಎನ್.ಗೋಪಾಲ ಕೃಷ್ಣ ಅವರನ್ನು ಎಸ್.ಅಶ್ವತಿ ಅವರ ಜಾಗಕ್ಕೆ ವರ್ಗಾವಣೆ ಮಾಡಲಾಗಿದೆ. ಅಂತೆಯೇ ಬೆಂಗಳೂರಿನ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕರಾಗಿದ್ದ ಡಿ.ಎಸ್.ರಮೇಶ್ ಅವರನ್ನು ಚಾಮರಾಜನಗರ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರ ಜಾಗಕ್ಕೆ ನಿಯೋಜಿಸಿ ರಾಜ್ಯ ಸರ್ಕಾರ ಆದೇಶಿಸಿದೆ. ಆದರೆ, ಡಿಸಿ ಚಾರುಲತಾ ಸೋಮಲ್ ಅವರಿಗೆ ಯಾವುದೇ ಸ್ಥಾನ ತೋರಿಸಿಲ್ಲ.

ಕೊಡಗು ಜಿಪಂಗೆ ನೂತನ ಸಿಇಓ: ಅಲ್ಲದೆ ಕೊಡಗು ಜಿಲ್ಲಾ ಪಂಚಾಯತ್ ಸಿಇಓ ಭನ್ವರ್ ಸಿಂಗ್ ಮೀನಾ ಅವರನ್ನು ಬೆಂಗಳೂರಿನ ಕೆಪಿಎಸ್‌ಸಿ ಪರೀಕ್ಷೆಗಳ ನಿಯಂತ್ರಕರಾಗಿ ವರ್ಗಾಯಿಸಿದ್ದು, ಇವರ ಜಾಗಕ್ಕೆ ಬಳ್ಳಾರಿ ಸಬ್ ಡಿವಿಜನ್ ಎಸಿ ಡಾ.ಎಸ್.ಆಕಾಶ್ ಅವರನ್ನು ನೇಮಿಸಿ, ರಾಜ್ಯ ಸರ್ಕಾರ ಆದೇಶಿಸಿದೆ.

ಮೈಸೂರು ಡಿಸಿ ವರ್ಗಾವಣೆಗೆ ರಘು ಬೇಸರ



ಮೈಸೂರು, ಅ.21– ಮೈಸೂರು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರನ್ನು ವರ್ಗಾವಣೆ ಮಾಡಿರುವುದಕ್ಕೆ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ ಬೇಸರ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ದಕ್ಷ ಹಾಗೂ ಪ್ರಾಮಾಣಿಕ ಜಿಲ್ಲಾಧಿಕಾರಿಗಳ ವರ್ಗಾವಣೆ ನೋವು ತಂದಿದೆ. ಅತ್ಯಂತ ಕ್ರಿಯಾಶೀಲ ಜಿಲ್ಲಾಧಿಕಾರಿಗಳಾಗಿದ್ದ ಡಾ. ಬಗಾದಿ ಗೌತಮ್ ಅವರು, ಮೈಸೂರಿಗೆ ಬಂದಂದಿನಿಂದ ಉತ್ತಮ ಕಾರ್ಯ ಮಾಡಿದ್ದಾರೆ. ಇಂತಹವರು ಹೆಚ್ಚು ಕಾಲ ಮುಂದುವರೆಯುವ ಅಗತ್ಯವಿತ್ತು. ಆದರೆ ಈಗ ಅವರನ್ನು ವರ್ಗಾವಣೆ ಮಾಡಿರುವುದು ವೈಯಕ್ತಿಕವಾಗಿ ಬೇಸರ ತರಿಸಿದೆ ಎಂದು ತಿಳಿಸಿದ್ದಾರೆ.

ಪಾರಂಪರಿಕ ಕಟ್ಟಡಗಳ ಕಾಪಾಡದೇ ಇದ್ದ ಮೇಲೆ ಕುಸಿಯದೇ ಇರುತ್ತವೆಯೇ...!

● ಅಮಾಯಕ ಜೀವದ ಜೊತೆ ಆಡಳಿತ ವ್ಯವಸ್ಥೆ ಚೆಲ್ಲಾಟ ● ತಜ್ಞರು ವರದಿ ನೀಡಿದರೂ ಎಚ್ಚೆತ್ತುಕೊಳ್ಳದ ಅಧಿಕಾರಿವರ್ಗ ● ಲ್ಯಾನ್ಸ್‌ಡೌನ್ ಕಟ್ಟಡ, ದೇವರಾಜ ಮಾರುಕಟ್ಟೆ, ಅಗ್ನಿಶಾಮಕ ಕಚೇರಿ, ಮೆಡಿಕಲ್ ಕಾಲೇಜ್ ಹಾಸ್ಟೆಲ್, ಜಯಲಕ್ಷ್ಮಿ ಮ್ಯಾನ್‌ಷನ್, ಈಗ ಮಹಾರಾಣಿ ಕಾಲೇಜು ಮುಂದೆ...



ಮೈಸೂರು, ಅ.21(ಎಸ್‌ಬಿಡಿ)– ಮೈಸೂರಿನ ಪಾರಂಪರಿಕ ಕಟ್ಟಡಗಳು ಒಂದರ ಹಿಂದೊಂದರಂತೆ ಕುಸಿಯುತ್ತಿದ್ದು ಸಾರ್ವಜನಿಕರ ಆತಂಕ ಹೆಚ್ಚಿಸಿದೆ. ಸರ್ಕಾರಿ ಹಾಗೂ ಖಾಸಗಿ ಕಟ್ಟಡ ಸೇರಿ ಮೈಸೂರಿನಲ್ಲಿ 130ಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳಿವೆ ಎಂದು ಪಟ್ಟಿ ಮಾಡಲಾಗಿದೆ. ಇದರಲ್ಲಿ 25 ಕಟ್ಟಡಗಳಿಗೆ ತುರ್ತು ದುರಸ್ತಿ ಅಗತ್ಯವಿದೆ ಎಂದು ಪಾರಂಪರಿಕ ತಜ್ಞರ ಸಮಿತಿ ಎಚ್ಚರಿಕೆ ನೀಡಿದೆ. ಜಿಲ್ಲಾಧಿಕಾರಿ ಕಚೇರಿ, ನಗರಪಾಲಿಕೆ, ಕಾಡಾ, ಮೈಸೂರು ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ ಸೇರಿದಂತೆ ಹಲವು ಸರ್ಕಾರಿ ಕಟ್ಟಡಗಳ ದುಃಸ್ಥಿತಿ ಬಗ್ಗೆಯೂ ತಿಳಿಸಲಾಗಿದೆ. ಆದರೆ ಈ ಬಗ್ಗೆ ಗಂಭೀರ ಚಿಂತನೆ ನಡೆಸಿ, ಸೂಕ್ತ ಕ್ರಮ ಕೈಗೊಂಡಿಲ್ಲ. ಕಾಲೇಜು, ಹಾಸ್ಟೆಲ್ ವಿದ್ಯಾರ್ಥಿಗಳು, ಸರ್ಕಾರಿ ಕಚೇರಿಗಳಿಗೆ ಬರುವ ಸಾರ್ವಜನಿಕರು, ಅಲ್ಲಿ ಕಾರ್ಯನಿರ್ವಹಿಸುವವರ ಜೀವದ ಜೊತೆ ಚೆಲ್ಲಾಟವಾಡಲಾಗುತ್ತಿದೆ.

ಪಾರಂಪರಿಕ ತಜ್ಞರ ಸಮಿತಿ, ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡವನ್ನು 2 ವರ್ಷದ ಹಿಂದೆಯೇ ಪರಿಶೀಲನೆ ನಡೆಸಿ, ಶಿಥಿಲಾವಸ್ಥೆ ತಲುಪಿರುವುದಾಗಿ ಸಂಬಂಧಪಟ್ಟ ಇಲಾಖೆಗೆ ವರದಿ ನೀಡಲಾಗಿತ್ತು. ನಂತರದಲ್ಲಿ ಹೊಸ ಕಟ್ಟಡ ನಿರ್ಮಾಣವಾಯಿತೇ ಹೊರತು ಹಳೇ ಕಟ್ಟಡದ ದುರಸ್ತಿಗೆ ಮುಂದಾಗಲಿಲ್ಲ. ಇಂತಹ 25 ಕಟ್ಟಡಗಳಿಗೆ ತುರ್ತು ದುರಸ್ತಿ ಅಗತ್ಯವಿದೆ ಎಂದು ವರದಿ ಸಲ್ಲಿಸಲಾಗಿದೆ. ಪಾರಂಪರಿಕ ಕಟ್ಟಡಗಳ ನಿರ್ವಹಣೆಗೆಂದೇ ಪಾಲಿಕೆ ಬಜೆಟ್‌ನಲ್ಲಿ ಪ್ರತ್ಯೇಕವಾಗಿ ಹಣ ಮೀಸಲಿಡಬೇಕೆಂದು ಸಲಹೆ ನೀಡಲಾಗಿದೆ. ಆದರೆ ಇದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಂಡಿಲ್ಲ ಎಂದು ಪಾರಂಪರಿಕ ತಜ್ಞ ಪ್ರೊ.ರಂಗರಾಜು ತಿಳಿಸಿದರು.



ಕಳಚುತ್ತಿವೆ ಕೊಂಡಿಗಳು: ಪಾರಂಪರಿಕ ನಗರ ಮೈಸೂರಿನಲ್ಲಿ ಪಾರಂಪರಿಕ ಕಟ್ಟಡಗಳಿಗೇ ಅಪಾಯ ಬಂದೊದಗಿದೆ. ದಶಕದಿಂದ ಹಲವು ಕಟ್ಟಡಗಳು ಕುಸಿದು ಬಿದ್ದು, ಹಾಳು ಕೊಂಪೆಯಂತಾಗಿವೆ. 2012ರಲ್ಲಿ ನಗರದ ಹೃದಯಭಾಗದಲ್ಲಿರುವ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಕುಸಿದು, ಪ್ರಾಣಹಾನಿಯಾಗಿತ್ತು. ನವೀಕರಣ ಅಥವಾ ಪುನರ್ ನಿರ್ಮಾಣದ ಗೊಂದಲದಲ್ಲಿ ಆ ಕಟ್ಟಡ ಪಾಳು ಬಿದ್ದಿದೆ. 2016ರಲ್ಲಿ ಧನ್ವಂತ್ರಿ ರಸ್ತೆಯ ಭಾಗದಲ್ಲಿ ದೇವರಾಜ ಮಾರುಕಟ್ಟೆಯ ಕಮಾನು ಮಾದರಿ ದ್ವಾರ ಕುಸಿಯಿತು. ನವೀಕರಣ ಸಂದರ್ಭದಲ್ಲೇ ಆ ಘಟನೆ ನಡೆಯಿತು. ಕಟ್ಟಡ ತ್ಯಾಜ್ಯ ತೆರವು ಮಾಡಿದ್ದನ್ನು ಬಿಟ್ಟರೆ ಮತ್ತೇನು ಬದಲಾವಣೆಯಾಗಿಲ್ಲ. 2019ರಲ್ಲಿ ಸರಸ್ವತಿಪುರಂ ಅಗ್ನಿಶಾಮಕ ಠಾಣೆಯ ಕಟ್ಟಡದ ಸ್ವಾಗತ ಕಮಾನು ಕುಸಿತ ಕಮಾನು ನೆಲಕ್ಕುರುಳಿತು. 2020ರಲ್ಲಿ ಜೆಎಲ್‌ಬಿ ರಸ್ತೆಯ ಮೆಡಿಕಲ್ ಹಾಸ್ಟೆಲ್ ಛಾವಣಿ ಕಳಚಿ ಬಿದ್ದಿತು. 2021ರಲ್ಲಿ ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸ ಅರಮನೆ ಛಾವಣಿ ಕುಸಿಯಿತು. 2022ರಲ್ಲಿ ಅಗ್ರಹಾರದ ವಾಣಿವಿಲಾಸ ಮಾರುಕಟ್ಟೆ ಕಟ್ಟಡದ ಸಜ್ಜಾ ಅರಮನೆ ತಡೆಗೋಡೆ ಕುಸಿದಿವೆ. ಇದೀಗ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಕುಸಿದಿದ್ದು ಇದು ಪ್ರಸಕ್ತ ವರ್ಷದ ಮೂರನೇ ದುರ್ಘಟನೆಯಾಗಿದೆ.



> ಮೈಸೂರಿನಲ್ಲಿರುವ ಎಲ್ಲಾ ಪಾರಂಪರಿಕ ಕಟ್ಟಡಗಳ ವಾಸ್ತವ ಸ್ಥಿತಿ ತಿಳಿಯುವ ನಿಟ್ಟಿನಲ್ಲಿ ಶೀಘ್ರವೇ ಜಿಲ್ಲಾಧಿಕಾರಿಗಳು ಹಾಗೂ ಪಾರಂಪರಿಕ ತಜ್ಞರ ಜೊತೆ ಸಭೆ ನಡೆಸಿ ಚರ್ಚಿಸುತ್ತೇವೆ. ಪಾರಂಪರಿಕ ಕಟ್ಟಡಗಳನ್ನು ಉಳಿಸಿಕೊಳ್ಳದಿದ್ದರೆ ಪಾರಂಪರಿಕ ನಗರ ಎನ್ನುವುದಕ್ಕೆ ಅರ್ಥವೇ ಇರುವುದಿಲ್ಲ. ಇದಕ್ಕಾಗಿ ಪಾಲಿಕೆ ವತಿಯಿಂದ ಏನೆಲ್ಲಾ ಕೆಲಸಗಳಾಗಬೇಕು ಎನ್ನುವುದನ್ನು ತಿಳಿದುಕೊಳ್ಳುತ್ತೇನೆ. ಕೆಲ ದಿನಗಳಲ್ಲೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು. –ಮೇಯರ್ ಶಿವಕುಮಾರ್





ನಿರ್ವಹಣೆ ಗೊಂದಲ: ಲ್ಯಾನ್ಸ್‌ಡೌನ್ ಕಟ್ಟಡದಿಂದ ಹಿಡಿದು ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಕುಸಿದಿರುವ ಪ್ರತಿಯೊಂದು ಪ್ರಕರಣಕ್ಕೂ ನಿರ್ವಹಣೆ ವೈಫಲ್ಯವನ್ನೇ ಹೊಣೆ ಮಾಡಲಾಗಿದೆ. ಲ್ಯಾನ್ಸ್‌ಡೌನ್ ಕಟ್ಟಡ ಕುಸಿದಾಗಲೇ ಎಚ್ಚೆತ್ತುಕೊಂಡು ಪಾರಂಪರಿಕ ಕಟ್ಟಡಗಳನ್ನು ಸಮರ್ಪಕ ರೀತಿಯಲ್ಲಿ ನಿರ್ವಹಣೆ ಮಾಡಿದ್ದರೆ ಅವಘಡಗಳಿಗೆ ಬ್ರೇಕ್ ಹಾಕಬಹುದಿತ್ತು. ಆದರೆ ಕಟ್ಟಡ ಕುಸಿದಾಗಲೆಲ್ಲಾ ನಿರ್ವಹಣೆ ಕೊರತೆ ಕಾರಣವೆಂದು ಹೇಳಿ ಮತ್ತೆ ಅದೇ ತಪ್ಪು ಮುಂದುವರೆದಿದೆ. ಸರ್ಕಾರಿ ಕಟ್ಟಡಗಳ ನಿರ್ವಹಣೆ ಲೋಕೋಪಯೋಗಿ ಇಲಾಖೆಯ ಹೊಣೆ ಎಂದು ಹೇಳುತ್ತಾರೆ. ಆದರೆ ಇತ್ತೀಚೆಗೆ ಆಯಾಯ ಇಲಾಖೆಯವರೇ ಕಟ್ಟಡ ನಿರ್ವಹಣೆ ನೋಡಿಕೊಳ್ಳಲಾಗುತ್ತದೆ. ಯಾವುದಾದರೂ ನಿರ್ಮಾಣ ಕಾರ್ಯಗಳಿದ್ದು ಪ್ರಸ್ತಾವನೆ ಸಲ್ಲಿಸಿದರೆ ಲೋಕೋಪಯೋಗಿ ಇಲಾಖೆ ಅದನ್ನು ನಿರ್ವಹಿಸಲಿದೆ ಎಂಬುದು ಇಲಾಖೆ ಅಧಿಕಾರಿಗಳ ಪ್ರತಿಕ್ರಿಯೆ. ಒಟ್ಟಾರೆ ಸರ್ಕಾರಿ ಕಟ್ಟಡಗಳ ನಿರ್ವಹಣೆ ಹೊಣೆ ಸಂಬಂಧ ಗೊಂದಲವಿರುವುದರಿಂದ ಪಾರಂಪರಿಕ ಕಟ್ಟಡಗಳ ಮೇಲ್ಛಾವಣಿ ಸೋರುತ್ತಿದ್ದರೂ ತುರ್ತು ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ದಿನ ಕಳೆದಂತೆ ಕಟ್ಟಡಗಳ ಸ್ಥಿತಿ ಶೋಚನೀಯ ಹಂತ ತಲುಪುತ್ತಿವೆ.



ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ ರಸಾಯನಶಾಸ್ತ್ರ ಲ್ಯಾಬ್ ಭಾಗ ಕುಸಿತ



ಕೆಲ ದಿನಗಳಲ್ಲಿ ಕಾಮಗಾರಿಗೆ ಚಾಲನೆ

> ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ದುರಸ್ತಿ ಹಾಗೂ ನವೀಕರಣ ಕಾರ್ಯಕ್ಕೆ ಸರ್ಕಾರದಿಂದ 2.50 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ನಾಳೆ(ಅ.22) ಬೆಳಗ್ಗೆ 9ಕ್ಕೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲು ಸಮಯ ನಿಗದಿಯಾಗಿತ್ತು. ಕಟ್ಟಡ ಕುಸಿದ ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದೇನೆ. ಈ ಘಟನೆಯನ್ನು ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ ನಾರಾಯಣ ಅವರ ಗಮನಕ್ಕೆ ತಂದಿದ್ದೇನೆ. ಹೆಚ್ಚಿನ ಅನುದಾನ ಕೋರಿದ್ದು ಕಾಮಗಾರಿ ಸಂಬಂಧಿತ ಸಂಪೂರ್ಣ ಮಾಹಿತಿ ಕಳುಹಿಸುವಂತೆ ತಿಳಿಸಿದ್ದಲ್ಲದೆ ಅನುದಾನ ನೀಡುವ ಭರವಸೆ ನೀಡಿದ್ದಾರೆ. ಇನ್ನು 2–3 ದಿನಗಳಲ್ಲಿ ಕಾಮಗಾರಿಗೆ ಚಾಲನೆ ದೊರಕಲಿದೆ.
> –ಎಲ್.ನಾಗೇಂದ್ರ, ಶಾಸಕ

ಮೂರನೇ ಪುಟದಿಂದ

ಅದೃಷ್ಟವಶಾತ್ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಪಾರಾಗಿದ್ದಾರೆ. ಐದಾರು ನಿಮಿಷ ತಡವಾಗಿ ಈ ಘಟನೆ ಸಂಭವಿಸಿದ್ದರೆ ಭಾರೀ ಅನಾಹುತವೇ ಸಂಭವಿಸುತ್ತಿತ್ತು. ಇದ್ದಕ್ಕಿದ್ದಂತೆ ಕಟ್ಟಡ ಕುಸಿದಿದ್ದರಿಂದ ವಿದ್ಯಾರ್ಥಿನಿಯರು, ಬೋಧಕ ವರ್ಗ ಹಾಗೂ ಸಿಬ್ಬಂದಿ ತೀವ್ರ ಆತಂಕಕ್ಕೀಡಾಗಿದ್ದಾರೆ. ಸಹಜವಾಗಿ ಹಲವು ಬ್ಯಾಚ್‌ಗಳಲ್ಲಿ 40 ವಿದ್ಯಾರ್ಥಿನಿಯರು ಪ್ರಾಯೋಗಿಕ ತರಗತಿಗೆ ಹಾಜರಾಗುತ್ತಿದ್ದರು. ಐವರು ಅಧ್ಯಾಪಕರು, ಅಟೆಂಡರ್ ಸೇರಿದಂತೆ 8ರಿಂದ 10 ಮಂದಿ ನಿತ್ಯ ಕಾರ್ಯ ನಿರ್ವಹಿಸುತ್ತಿದ್ದರು. ಸದ್ಯ ಇವರೆಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕುಸಿದ ಕಟ್ಟಡದಲ್ಲಿರುವ ಉಳಿದ ಕೊಠಡಿಗಳಿಗೂ ಬೀಗ ಹಾಕಿ ವಿದ್ಯಾರ್ಥಿನಿಯರನ್ನು ಪಕ್ಕದ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ಶತಮಾನದ ಇತಿಹಾಸವಿರುವ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡವನ್ನು ಸುಣ್ಣದ ಗಾರೆಯಿಂದ ನಿರ್ಮಿಸಲಾಗಿದ್ದು, ಇದು ಪಾರಂಪರಿಕ ಕಟ್ಟಡಗಳ ಪಟ್ಟಿಯಲ್ಲಿದೆ. ಸೂಕ್ತ ನಿರ್ವಹಣೆ ಕೊರತೆಯಿಂದ ಪ್ರಯೋಗಾಲಯ ಭಾಗದ ಮೇಲ್ಛಾವಣಿ ಹಾಗೂ ಗೋಡೆಗಳು ಶಿಥಿಲಾವಸ್ಥೆ ತಲುಪಿದ್ದವು. ಕೆಲ ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಇಂದು ಕಟ್ಟಡ ಕುಸಿದಿದೆ. ದಸರಾ ರಜೆ ಬಳಿಕ ಕಾಲೇಜು ಪುನಾರಂಭಗೊಂಡಾಗಿನಿಂದ ಈವರೆಗೆ ವಿದ್ಯಾರ್ಥಿನಿಯರ ಹಾಜರಾತಿ ಕಡಿಮೆಯಿದ್ದ ಪರಿಣಾಮ ಇಂದಿನಿಂದ ಪ್ರಯೋಗಾಲಯ ತರಗತಿ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಅದೃಷ್ಟವಶಾತ್ ತರಗತಿ ಆರಂಭವಾಗುವ ಹೊತ್ತಿನಲ್ಲಿ ಈ ಅವಘಡ ಸಂಭವಿಸಿದೆ. ತರಗತಿ ವೇಳೆ ಕಟ್ಟಡ ಕುಸಿಯುವ ಸೂಚನೆ ತಿಳಿದಿದ್ದರೂ ಎಲ್ಲಾ ವಿದ್ಯಾರ್ಥಿನಿಯರು ತಕ್ಷಣಕ್ಕೆ ಹೊರಬರಲಾಗುತ್ತಿರಲಿಲ್ಲ.

ಎರಡು ದಿನ ರಜೆ: ಘಟನೆ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕಾಲೇಜಿಗೆ ಎರಡು ದಿನಗಳ ಕಾಲ ರಜೆ ಘೋಷಿಸಲಾಗಿದೆ. ಮೇಲ್ಛಾವಣಿ ಕುಸಿತದ ಕಂಪನದಿಂದ ಇತರೆ ಕೊಠಡಿಗಳ ಗೋಡೆಗಳೂ ಸಡಿಲಗೊಂಡಿರುವ ಸಾಧ್ಯತೆ ಇದೆ ಎನ್ನಲಾಗಿದೆ. ಪ್ರಯೋಗಾಲಯದ ಕೆಳ ಮಹಡಿಯಲ್ಲಿರುವ ಕೊಠಡಿಗಳನ್ನು ಬಂದ್ ಮಾಡಲಾಗಿದೆ. ವಿದ್ಯಾರ್ಥಿನಿಯರು ಶಿಥಿಲಾವಸ್ಥೆ ತಲುಪಿರುವ ಕಟ್ಟಡದತ್ತ ಸುಳಿಯದಂತೆ ಸೂಚನೆ ನೀಡಲಾಗಿದೆ.

ತುರ್ತು ಕಾರ್ಯಾಚರಣೆ: ಪ್ರಯೋಗಾಲಯ ಕಟ್ಟಡದ ಒಂದು ಪಾರ್ಶ್ವ ಕುಸಿದ ಹಿನ್ನೆಲೆಯಲ್ಲಿ 3 ಅಗ್ನಿಶಾಮಕ ವಾಹನಗಳೊಂದಿಗೆ ಆಗಮಿಸಿದ 15ಕ್ಕೂ ಹೆಚ್ಚು ಸಿಬ್ಬಂದಿ ಕಟ್ಟಡದ ಅವಶೇಷದಡಿ ಯಾರಾದರೂ ಸಿಲುಕಿರಬಹುದೆಂದು ಅರ್ಧ ಗಂಟೆಗೂ ಹೆಚ್ಚು ಕಾಲ ಶೋಧನಾ ಕಾರ್ಯ ನಡೆಸಿದರು. ಕಟ್ಟಡ ಕುಸಿದ ಸಂದರ್ಭದಲ್ಲಿ ಯಾರೂ ಇರಲಿಲ್ಲ ಎಂದು ಕಾಲೇಜು ಸಿಬ್ಬಂದಿ ತಿಳಿಸಿದರಾದರೂ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿಯೇ ಅದನ್ನು ಖಚಿತಪಡಿಸಿಕೊಂಡರು. ಮುಂಜಾಗ್ರತಾ ಕ್ರಮವಾಗಿ ಸ್ಥಳಕ್ಕೆ ಎರಡು ಆಂಬುಲೆನ್ಸ್‌ಗಳನ್ನು ಕರೆಸಿಕೊಳ್ಳಲಾಗಿತ್ತು, ಆರೋಗ್ಯ ಸಿಬ್ಬಂದಿಯೂ ಸ್ಥಳದಲ್ಲಿದ್ದರು.

ಶಾಸಕ ಎಲ್.ನಾಗೇಂದ್ರ ಪರಿಶೀಲನೆ: ವಿಷಯ ತಿಳಿದು ಸ್ಥಳಕ್ಕೆ ದೌಡಾಯಿಸಿದ ಶಾಸಕ ಎಲ್.ನಾಗೇಂದ್ರ ಅವರು, ಕುಸಿದ ಕಟ್ಟಡವನ್ನು ಪರಿಶೀಲಿಸಿ ಕಾಲೇಜು ಪ್ರಾಂಶುಪಾಲರು, ಉಪನ್ಯಾಸಕರಿಂದ ಮಾಹಿತಿ ಪಡೆದರಲ್ಲದೆ, ಅಲ್ಲಿಂದಲೇ ಉನ್ನತ ಶಿಕ್ಷಣ ಸಚಿವರಿಗೆ ಮಾಹಿತಿ ನೀಡಿದರಲ್ಲದೆ, ಕಟ್ಟಡ ದುರಸ್ತಿಗೆ ಬೇಕಾದ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಹಾರಾಣಿ ವಿಜ್ಞಾನ ಕಾಲೇಜಿನ ಶಿಥಿಲಾವಸ್ಥೆ ತಲುಪಿದ್ದ ಕಟ್ಟಡದ ದುರಸ್ತಿ ಹಾಗೂ ನವೀಕರಣಕ್ಕೆ ಕ್ರಮ ಕೈಗೊಳ್ಳಲಾಗಿತ್ತು. ಅದಕ್ಕಾಗಿ ಅಗತ್ಯ ಅನುದಾನವನ್ನೂ ಬಿಡುಗಡೆ ಮಾಡಿಸಿದ್ದೆ. ಈ ಕಾಮಗಾರಿಯ ಗುತ್ತಿಗೆಯನ್ನು ಅಶ್ವಿನ್ ಪಾಳೇಗಾರ್ ಎಂಬುವರಿಗೆ ನೀಡಲಾಗಿತ್ತು ಕಾಮಗಾರಿಗೆ ಗುದ್ದಲಿ ಪೂಜೆ ನಡೆಸುವ ಹೊತ್ತಿಗೆ ಈ ಘಟನೆ ನಡೆದಿದೆ. 107 ವರ್ಷದ ಪಾರಂಪರಿಕ ಕಟ್ಟಡ ಕುಸಿದಿರುವುದಕ್ಕೆ ಬೇಸರವಾಗಿದೆ. ಆದರೆ ಘಟನೆಯಲ್ಲಿ ಜೀವಹಾನಿಯಾಗದಿರುವುದು ಸಮಾಧಾನ ತಂದಿದೆ ಎಂದರು.

ನಿರ್ವಹಣೆ ವೈಫಲ್ಯ ಕಾರಣ: ಮೈಸೂರಲ್ಲಿ ಹಲವು ಪಾರಂಪರಿಕ ಕಟ್ಟಡಗಳು ಕುಸಿಯಲು ನಿರ್ವಹಣೆಯ ಕೊರತೆಯೇ ಕಾರಣ. ಮಹಾರಾಣಿ ಕಾಲೇಜಿನ ಕಟ್ಟಡ, ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಅಗ್ನಿಶಾಮಕ ಠಾಣೆಯ ಕಟ್ಟಡಗಳು ನಿರ್ವಹಣೆ ಇಲ್ಲದೆಯೇ ಕುಸಿದಿದ್ದು, ಪಾರಂಪರಿಕ ಕಟ್ಟಡವಾದ್ದರಿಂದ ಸುಲಭವಾಗಿ ರಿಪೇರಿ ಕೆಲಸ ಮಾಡಲು ಅವಕಾಶವಿಲ್ಲ. ಇದಕ್ಕಾಗಿ ಅನುಸರಿಸಬೇಕಾದ ಕ್ರಮಗಳು ಕಠಿಣವಾಗಿದೆ. ತುರ್ತು ದುರಸ್ತಿಗೆ ಅನುಮತಿಯೇ ಸಿಗುವುದಿಲ್ಲ. ಪಾರಂಪರಿಕ ಇಲಾಖೆಯೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಜ್ಞರೊಂದಿಗೆ ಚರ್ಚೆ: ಕಳೆದ ತಿಂಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೈಸೂರಿಗೆ ಬಂದಿದ್ದಾಗ ಮಹಾರಾಣಿ ವಿಜ್ಞಾನ ಕಾಲೇಜಿನ ಕಟ್ಟಡದ ದುರಸ್ತಿ ಸೇರಿದಂತೆ ವಿವಿಧ ಕಾಮಗಾರಿಗೆ ಅನುದಾನ ನೀಡುವಂತೆ ಮನವಿ ಮಾಡಿದ್ದೆ. ಅದಕ್ಕೆ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಆದರೆ, ಇಂದು ಕಟ್ಟಡ ಕುಸಿದಿದೆ. ಇದಕ್ಕೆ ಬೇಕಾದ ಆರ್ಥಿಕ ನೆರವನ್ನು ನೀಡುವಂತೆ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ ನಾರಾಯಣ್ ಅವರಲ್ಲಿ ಮನವಿ ಮಾಡುತ್ತೇನೆ. ಈಗ ಕುಸಿದಿರುವ ಕಟ್ಟಡವನ್ನು ದುರಸ್ತಿ ಮಾಡಬೇಕೋ? ಅಥವಾ ಪುನರ್ ನಿರ್ಮಾಣ ಮಾಡಬೇಕೋ? ಎನ್ನುವುದನ್ನು ತಜ್ಞರೊಂದಿಗೆ ಚರ್ಚಿಸಿ ಅಭಿಪ್ರಾಯ ಪಡೆಯುತ್ತೇನೆ. ಕುಸಿತವಾಗಿರುವ ಕಟ್ಟಡಕ್ಕೆ ಹೊಂದಿ ಕೊಂಡಂತಿರುವ ಇನ್ನಿತರ ಕೊಠಡಿಗಳ ಸ್ಥಿತಿಗತಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಹಾಸ್ಟೆಲ್ ಕಟ್ಟಡವೂ ಭಿನ್ನವಾಗಿಲ್ಲ: ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು ವಿದ್ಯಾರ್ಥಿನಿಗಳ ಹಾಸ್ಟೆಲ್ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಕಲಾ ಮತ್ತು ವಿಜ್ಞಾನ ವಿಭಾಗದ 600ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಹಾಸ್ಟೆಲ್‌ನಲ್ಲಿದ್ದಾರೆ. ಮೂರು ಹಂತದ ಕಟ್ಟಡ ಮಳೆ ಬಂದಾಗಲೆಲ್ಲಾ ಮೇಲ್ಛಾವಣಿಯಿಂದ ಸೋರುತ್ತದೆ. ಹಲವೆಡೆ ವಸ್ತಿ ಹಿಡಿದಿದೆ. ಇಂತಹ ಅಪಾಯಕಾರಿ ಸ್ಥಿತಿಯಲ್ಲಿ ವಿದ್ಯಾರ್ಥಿನಿಯರಿದ್ದಾರೆ. ಕಾಲೇಜು ಪ್ರಯೋಗಾಲಯದ ಕಟ್ಟಡ ಕುಸಿದ ಮೇಲಂತೂ ಅವರ ಆತಂಕ, ದುಗುಡ ಹೆಚ್ಚಾಗಿದೆ. ಯಾವ ಸಂದರ್ಭದಲ್ಲಿ ಏನಾಗುತ್ತದೋ? ಎಂದು ಭಯಪಡುತ್ತಿದ್ದಾರೆ. ಜೋರು ಮಳೆಯಾದಾಗ ಭಯ ಇನ್ನೂ ಹೆಚ್ಚಾಗುತ್ತದೆ ಎಂದು ಕಾಲೇಜಿನವರೇ ತಿಳಿಸಿದ್ದಾರೆ.

ಪ್ರಾಂಶುಪಾಲ ಡಾ. ರವಿ, ವಿಭಾಗದ ಮುಖ್ಯಸ್ಥರಾದ ಡಾ.ಪದ್ಮನಾಭರ ಸಮಯಪ್ರಜ್ಞೆ, ಎಚ್ಚರಿಕಾ ಕ್ರಮದಿಂದ ತಪ್ಪಿದ ಭಾರೀ ಅನಾಹುತ

● ಪ್ರತಿನಿತ್ಯ ಒಂದು ಪಾಳಿಗೆ 40 ವಿದ್ಯಾರ್ಥಿನಿಯರು ಪ್ರಯೋಗ ನಡೆಸುತ್ತಿದ್ದರು; ನೂರಾರು ಮಂದಿ ಪಾಠ ಕೇಳುತ್ತಿದ್ದರು. ● ಗಾರೆ ಉದುರುವುದು, ನೀರು ಜಿನುಗುವುದು ಕಂಡು ಎಚ್ಚೆತ್ತ ಪ್ರಿನ್ಸಿಪಾಲ್, ವಿಭಾಗ ಮುಖ್ಯಸ್ಥರು ● ಲ್ಯಾಬ್‌ಗೆ ಬೀಗ ಜಡಿದ ಏಳೇ ನಿಮಿಷದಲ್ಲಿ ಕಟ್ಟಡ ಕುಸಿತ



ಮೈಸೂರು, ಅ.21(ಎಂಟಿವೈ)– ಪ್ರಾಂಶುಪಾಲರ ಎಚ್ಚರಿಕಾ ಕ್ರಮ ಹಾಗೂ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರ ಸಮಯ ಪ್ರಜ್ಞೆಯಿಂದ ಮಹಾರಾಣಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಯರು ದೊಡ್ಡ ಗಂಡಾಂತರದಿಂದ ಪಾರಾಗಿದ್ದಾರೆ.

ಗುರುವಾರದವರೆಗೂ ಈಗ ಕುಸಿದಿರುವ ಭಾಗದಲ್ಲಿನ ಕಟ್ಟಡದಲ್ಲಿ ಪ್ರಯೋಗಾಲಯ ಹಾಗೂ ತರಗತಿಗಳಲ್ಲಿ ವಿದ್ಯಾರ್ಥಿನಿಯರು ಪಾಠ ಆಲಿಸಿದ್ದರು. ಇಂದು ಎಂದಿನಂತೆ ಪ್ರಯೋಗಾಲಯದಲ್ಲಿ ಶೈಕ್ಷಣಿಕ ಚಟುವಟಿಕೆಗೆ ಬಾಗಿಲು ತೆರೆಯಲಾಗಿತ್ತು.

ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ.ಪದ್ಮನಾಭ ಅವರು ಸಿಬ್ಬಂದಿಗಳೊಂದಿಗೆ ಬೆಳಗ್ಗೆ 10.15ಕ್ಕೆ ಬಂದು, ಪ್ರಯೋಗಾಲಯ ಒಂದು ಸುತ್ತು ಹಾಕಿದ್ದಾರೆ. ಈ ವೇಳೆ ಕೊಠಡಿಯ ಮೇಲ್ಛಾವಣಿಯಿಂದ ಗಾರೆ ಉದುರುತ್ತಿದ್ದು, ಪ್ರಯೋಗಾಲಯದ ಗೋಡೆಯಲ್ಲಿ ನೀರು ಜಿನುಗುತ್ತಿದ್ದದ್ದನ್ನು ಗಮನಿಸಿದ್ದಾರೆ. ಕೂಡಲೇ ಪ್ರಾಂಶುಪಾಲ ಡಾ.ಡಿ.ರವಿ ಅವರನ್ನು ಕರೆದುಕೊಂಡು ಬಂದು ಪ್ರಯೋಗಾಲಯದ ದುಸ್ಥಿತಿಯನ್ನು ತೋರಿಸಿದ್ದಾರೆ. ಪರಿಸ್ಥಿತಿಯ ಗಂಭೀರತೆ ಅರಿತ ಪ್ರಾಂಶುಪಾಲರು ಬೆಳಗ್ಗೆ 10.28ರಿಂದ 10.30ರೊಳಗೆ ಪ್ರಯೋಗಾಲಯದ ಮೇಲ್ಛಾವಣಿಯ ಫೋಟೋ ತೆಗೆದುಕೊಂಡಿದ್ದಾರೆ. ಅಲ್ಲದೆ, ತತ್‌ಕ್ಷಣದಿಂದಲೇ ಪ್ರಯೋಗಾಲಯಕ್ಕೆ ಯಾರೂ ಪ್ರವೇಶಿಸದಂತೆ ಸೂಚನೆ ನೀಡಿದ್ದಾರೆ. ಈ ವೇಳೆ ಪ್ರಯೋಗಾಲಯದಲ್ಲಿ ಸೋರಿದ್ದ ನೀರು ಒರೆಸಲು ಅಟೆಂಡರ್ ಬಂದಿದ್ದಾರೆ. ಕೂಡಲೇ ಅವರನ್ನು ಹೊರಗೆ ಕಳುಹಿಸಿ, 10.35ರ ವೇಳೆಗೆ ಪ್ರಯೋಗಾಲಯದ ಕೊಠಡಿ ಬಾಗಿಲಿಗೆ ಬೀಗ ಹಾಕಿ, ತಮ್ಮ ಕೊಠಡಿಗೆ ಬಂದು, ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರೂ ಆದ ಶಾಸಕ ಎಲ್.ನಾಗೇಂದ್ರ ಅವರಿಗೆ ಕರೆ ಮಾಡಿ ಪರಿಸ್ಥಿತಿಯ ಗಂಭೀರತೆ ಬಗ್ಗೆ ಮಾಹಿತಿ ನೀಡಿದ್ದಾರೆ.


ಪ್ರಾಂಶುಪಾಲ ಡಾ.ಡಿ.ರವಿ


ಡಾ.ಕೆ.ಕೆ.ಪದ್ಮನಾಭ ವಿಭಾಗದ ಮುಖ್ಯಸ್ಥ

7 ನಿಮಿಷದಲ್ಲಿ ಕುಸಿತ: ಪ್ರಯೋಗಾಲಯ ಕೊಠಡಿ ಬಾಗಿಲಿಗೆ ಬೀಗ ಹಾಕಿದ 7 ನಿಮಿಷದಲ್ಲಿ ಕಟ್ಟಡ ಭಾಗಶಃ ಕುಸಿದಿದೆ ಪ್ರಾಂಶುಪಾಲರು ಹಾಗೂ ವಿಭಾಗದ ಮುಖ್ಯಸ್ಥರು ಸಮಯಪ್ರಜ್ಞೆ ವಹಿಸಿ ಎಚ್ಚರ ವಹಿಸದಿದ್ದರೆ ಪ್ರಯೋಗಾಲಯದಲ್ಲಿ ಸಾಮಾನ್ಯವಾಗಿ 40 ವಿದ್ಯಾರ್ಥಿನಿಯರು ಇರುತ್ತಿದ್ದರು. ಈ ವೇಳೆ ಕಟ್ಟಡ ಕುಸಿದಿದ್ದರೆ ದೊಡ್ಡ ಅನಾಹುತವೇ ಆಗುತ್ತಿತ್ತು.

ಕೊಠಡಿಗೆ ಬೀಗ ಹಾಕಿಸಿದೆ: ಪ್ರಾಂಶುಪಾಲ ಡಾ.ಡಿ.ರವಿ ಮಾತನಾಡಿ, ಪ್ರಯೋಗಾಲಯದ ಕಟ್ಟಡವನ್ನು ಬೆಳಗ್ಗೆ ವೀಕ್ಷಣೆ ಮಾಡಿದಾಗ ಅಪಾಯ ಸ್ಥಿತಿ ಕಂಡು ಬಂದಿತು. ಕೂಡಲೇ ಕಟ್ಟಡದ ಸ್ಥಿತಿಯನ್ನು ಮೊಬೈಲ್‌ನಲ್ಲಿ ಫೋಟೋ ತೆಗೆದುಕೊಂಡು, ಕೂಡಲೇ ರಸಾಯನಶಾಸ್ತ್ರದ ಪ್ರಯೋಗಾಲಯಕ್ಕೆ ಬೀಗ ಹಾಕುವಂತೆ ಸೂಚನೆ ನೀಡಿದೆ. ಬಳಿಕ ಶಾಸಕರಿಗೆ ಕರೆ ಮಾಡಿ ವಸ್ತುಸ್ಥಿತಿ ತಿಳಿಸುತ್ತಿದ್ದ ವೇಳೆಯೇ ಕಟ್ಟಡ ಕುಸಿದಿದೆ. ಬೀಗ ಹಾಕಿದ 7 ನಿಮಿಷದಲ್ಲಿ ಕಟ್ಟಡ ಕುಸಿದಿದೆ. ಒಂದು ವೇಳೆ ಪ್ರಯೋಗಾಲಯ ಕಾರ್ಯ ನಿರ್ವಹಿಸುತ್ತಿದ್ದ ವೇಳೆ ಕುಸಿತವಾಗಿದ್ದರೆ, ದೊಡ್ಡ ಪ್ರಮಾಣದ ಅನಾಹುತ ಸಂಭವಿಸುತ್ತಿತ್ತು ಅದೃಷ್ಟವಶಾತ್ ಯಾರಿಗೂ ತೊಂದರೆಯಾಗಿಲ್ಲ ಎಂದು ನಿಟ್ಟುಸಿರು ಬಿಟ್ಟರು.


ಅಂದಾಜು 15 ಲಕ್ಷ ನಷ್ಟ: ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ. ಪದ್ಮನಾಭ ಮಾತನಾಡಿ, ಬೆಳಗ್ಗೆ ಪ್ರಯೋಗಾಲಯದ ಬಾಗಿಲು ತೆರೆದಾಗ ನೀರು ಹಾಗೂ ಮಣ್ಣು ಉದುರಿತ್ತು. ಮೇಲ್ಛಾವಣಿಯಿಂದ ಇನ್ನು ಗಾರೆ ಉದುರುತ್ತಿತ್ತು. ಅಪಾಯದ ಸ್ಥಿತಿ ಇದೆ ಎಂದು ಅರಿತು, ಪ್ರಾಂಶುಪಾಲರನ್ನು ಕರೆದುಕೊಂಡು ಬಂದು ತೋರಿಸಿದಾಗ ಪ್ರಯೋಗಾಲಯ ಬಂದ್ ಮಾಡುವಂತೆ ಸೂಚನೆ ನೀಡಿದರು. ಎಲ್ಲಾ ಸಿಬ್ಬಂದಿಗಳನ್ನು ಹೊರಗೆ ಕಳುಹಿಸಿ ಬೀಗ ಹಾಕಲಾಯಿತು. ಕೆಲವೇ ನಿಮಿಷದಲ್ಲಿ ಕಟ್ಟಡ ಕುಸಿಯಿತು. ಪ್ರಯೋಗಾಲಯದಲ್ಲಿ 15–20 ಲಕ್ಷ ರೂ. ಮೌಲ್ಯದ ಉಪಕರಣಗಳಿವೆ. ಅವುಗಳು ಯಾವ ಸ್ಥಿತಿಯಲ್ಲಿವೆ ಎಂದು ತಿಳಿದಿಲ್ಲ ಎಂದರು.

ಬೆಚ್ಚಿಬಿದ್ದು, ಚೀರಿದ ವಿದ್ಯಾರ್ಥಿನಿಯರು: ವಿಜ್ಞಾನ ಕಾಲೇಜಿನ ಭಾಗಶಃ ಕಟ್ಟಡ ಕುಸಿಯುತ್ತಿದ್ದಂತೆಯೇ ಸಮೀಪದಲ್ಲಿ ಗುಂಪುಗೂಡಿ ಮಾತನಾಡುತ್ತಿದ್ದ ಕಲಾ ಕಾಲೇಜಿನ ವಿದ್ಯಾರ್ಥಿನಿಯರು ಭಯದಿಂದ ಚೀರಿದರು. ಕಲಾ ಕಾಲೇಜಿನ ಪ್ರಾಂಗಣದಲ್ಲಿ ಸದಾ ನೂರಾರು ವಿದ್ಯಾರ್ಥಿನಿಯರು ಕುಳಿತುಕೊಂಡು ಮಾತನಾಡುವುದರಿಂದ ಕಟ್ಟಡ ಬಿದ್ದ ಶಬ್ದಕ್ಕೆ ಬೆಚ್ಚಿದ್ದಾರೆ. ವಿದ್ಯಾರ್ಥಿನಿಯರು ಚೀರಿದ ಶಬ್ದಕ್ಕೆ ಸಿಬ್ಬಂದಿ ಆತಂಕಕ್ಕೀಡಾಗಿದ್ದಾರೆ. ಅವಶೇಷಗಳಡಿ ವಿದ್ಯಾರ್ಥಿನಿಯರು ಸಿಲುಕಿರಬಹುದು ಎಂಬ ಶಂಕೆ ತಕ್ಷಣಕ್ಕೆ ವ್ಯಕ್ತವಾಗಿದೆ. ಪ್ರಾಂಶುಪಾಲರು ಪ್ರಯೋಗಾಲಯಕ್ಕೆ ಬೀಗ ಹಾಕಿದ ನಂತರ ಕಟ್ಟಡ ಕುಸಿದಿದೆ ಎಂದು ಹೇಳಿದರೂ ಕೆಲಕಾಲ ಆತಂಕ ಮನೆ ಮಾಡಿತ್ತು. ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆಯಿಂದ ಅವಶೇಷಗಳಡಿ ಯಾರೂ ಸಿಕ್ಕಿ ಹಾಕಿಕೊಂಡಿಲ್ಲ ಎಂಬುದು ದೃಢಪಟ್ಟ ನಂತರ ಆತಂಕ ನಿವಾರಣೆಯಾಯಿತು.

ಮೊಬೈಲ್‌ನಲ್ಲಿ ಚಿತ್ರೀಕರಣ: ಕಾಲೇಜಿನ ಉಪನ್ಯಾಸಕರೊಬ್ಬರು ಗೇಟ್ ಬಳಿ ಬರುತ್ತಿದ್ದಾಗ ಕಟ್ಟಡದಿಂದ ಮಣ್ಣು ಉದುರುತ್ತಿದ್ದುದ್ದನ್ನು ಗಮನಿಸಿದ್ದಾರೆ. ಕೂಡಲೇ ಅವರು ಸಹ ಮೊಬೈಲ್‌ನಲ್ಲಿ ಫೋಟೋ ಕ್ಲಿಕ್ಕಿಸಲು ಮುಂದಾಗುತ್ತಿದ್ದಂತೆ ಕಟ್ಟಡ ಕುಸಿಯಲಾರಂಭಿಸಿದೆ. 10 ಸೆಕೆಂಡ್‌ನಲ್ಲಿ ಕಟ್ಟಡ ಕುಸಿದಿದೆ. ಕಟ್ಟಡ ಕುಸಿತದ ಭಯಾನಕ ದೃಶ್ಯ ಮೊಬೈಲ್‌ನಲ್ಲಿ ಸೆರೆಯಾಗಿದ್ದು, ಇದೀಗ ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗಿದೆ.

ಕಾವೇರಿ ನದಿ ಉತ್ಸವಕ್ಕೆ ಚಾಲನೆ

ಕಾವೇರಿ ನದಿ ಪಾತ್ರದಲ್ಲಿ ಸ್ವಚ್ಛತೆಗೆ ಒತ್ತು ನೀಡಲು ಗಣ್ಯರ ಸಲಹೆ



ಮಡಿಕೇರಿ, ಅ.21– ಜಲಸಮೃದ್ಧಿಗಾಗಿ ಇಲಾಖೆ ಹಾಗೂ ಕಾವೇರಿ ನೀರಾವರಿ ನಿಗಮ ವತಿಯಿಂದ ತಲಕಾವೇರಿಯ ಬ್ರಹ್ಮಕುಂಡಿಕೆಯಲ್ಲಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ ಕಾವೇರಿ ನದಿ ಉತ್ಸವಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ. ಅಪ್ಪಚ್ಚುರಂಜನ್, ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿಕಾಳಪ್ಪ, ಅರಮೇರಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ, ಶ್ರೀರಂಗಪಟ್ಟಣದ ಡಾ.ಭಾನುಪ್ರಕಾಶ್ ಶರ್ಮ, ಅಖಿಲ ಭಾರತ ಸ್ವಾಮೀಗಳ ಸಂಘದ ಸಸ್ಯಾಪಕರಾದ ರಮಾನಂದ ಸ್ವಾಮೀಜಿ ಇತರರು ಕಾವೇರಿ ನದಿ ಉತ್ಸವಕ್ಕೆ ಚಾಲನೆ ನೀಡಿದರು.

ಇದಕ್ಕೂ ಮೊದಲು ಶ್ರೀ ಮಹಾಗಣಪತಿ, ಶ್ರೀ ಅಗಸ್ತ್ಯೇಶ್ವರ ದೇವಾಲಯಗಳಿಗೆ ಪೂಜೆ ಸಲ್ಲಿಸಿ, ಬಳಿಕ ಬ್ರಹ್ಮಕುಂಡಿಕೆಯಲ್ಲಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ತಕ್ಕ ಮುಖ್ಯಸ್ಥರಾದ ಕೋಡಿ ಮೋಟಯ್ಯ ತಾಯಿ ಕಾವೇರಿ ಮಾತೆಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಕಾವೇರಿ ನದಿಯು ತಲಕಾವೇರಿಯಲ್ಲಿ ಹುಟ್ಟಿ ಕರ್ನಾಟಕ, ತಮಿಳುನಾಡು ಹಾಗೂ ಪಾಂಡಿಚೇರಿ ಮೂಲಕ ಸುಮಾರು 800 ಕಿ.ಮೀಗೂ ಹೆಚ್ಚು ಹರಿಯುತ್ತದೆ. ಆ ನಿಟ್ಟಿನಲ್ಲಿ ಕಾವೇರಿ ನದಿಯ ಪಾವಿತ್ರ್ಯತೆಯನ್ನು ಕಾಪಾಡುವಲ್ಲಿ ಕಾವೇರಿ ನದಿ ಸ್ವಚ್ಛತೆಗೆ ಜಾಗೃತಿ ಮೂಡಿಸಲಾಗುತ್ತದೆ ಎಂದರು.

ಉತ್ತರದಲ್ಲಿ ಗಂಗಾ ನದಿಯಂತೆ ದಕ್ಷಿಣದಲ್ಲಿ ಕಾವೇರಿ ನದಿಗೆ ಹೆಚ್ಚಿನ ಮಹತ್ವ ಇದೆ. ಕಾವೇರಿ ನದಿಯ ಪಾವಿತ್ರ್ಯತೆ ಎಲ್ಲರೂ ಕಾಪಾಡಬೇಕು. ಆ ನಿಟ್ಟಿನಲ್ಲಿ ಜನಾಂದೋಲನ ಆಗಬೇಕು ಎಂದು ಅವರು ಸಲಹೆ ಮಾಡಿದರು.

ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮಾತನಾಡಿ, ಕಾವೇರಿ ನದಿ ಪಾವಿತ್ರ್ಯತೆಯನ್ನು ಕಾಪಾಡುವಲ್ಲಿ ಎಲ್ಲರೂ ಕೈಜೋಡಿಸಬೇಕಿದೆ. ಕಾವೇರಿ ನದಿಯು ಕೊಡಗು ಜಿಲ್ಲೆಯ ಬ್ರಹ್ಮಗಿರಿಯಲ್ಲಿ ಹುಟ್ಟಿ ಇಡೀ ನಾಡಿಗೆ ಜೀವನದಿ ಆಗಿದೆ. ಆದ್ದರಿಂದ ಕಾವೇರಿ ನದಿಯ ಮಹತ್ವವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು ಎಂದರು.

ಅರಮೇರಿ ಕಳಂಚೇರಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಪ್ರಕೃತಿಯನ್ನು ಪೂಜಿಸುತ್ತೇವೆ. ಕಾವೇರಿ ನದಿ ಪಾತ್ರದಲ್ಲಿ ಸ್ವಚ್ಛತಾ ಕಾರ್ಯವು ನಮ್ಮಿಂದಲೇ ಆರಂಭವಾಗಬೇಕು. ಪವಿತ್ರ ನಾಡಿನಲ್ಲಿ ಬದುಕುತ್ತಿರುವ ನಾವೇ ಪುಣ್ಯವಂತರು. ಸ್ವಚ್ಛತೆ ಕಾಪಾಡುವಲ್ಲಿ ಮನಸ್ಥಿತಿ ಬದಲಿಸಿಕೊಳ್ಳಬೇಕು ಎಂದರು.

ಕಿರಿಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ಮಾತನಾಡಿ, ಕಾವೇರಿ ನದಿ ಜೀವ ಜಲವನ್ನು ಸಂರಕ್ಷಿಸಬೇಕು. ಆ ನಿಟ್ಟಿನಲ್ಲಿ ಜಾಗೃತಿ ಮೂಡಿಸುತ್ತಿರುವುದು ಕಾವೇರಿ ನದಿ ಮಹತ್ವವನ್ನು ಸಾರುತ್ತದೆ ಎಂದರು.

ಬಳಿಕ ಕಾವೇರಿ ನದಿ ಉತ್ಸವದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದ ಜಿ.ಸಾ. ಸೋಮೇಶ್, ಕಾವೇರಿ ನದಿಯ ಮಹತ್ವ ಸಂರಕ್ಷಣೆ ಮತ್ತು ನಿರ್ವಹಣೆ ಕುರಿತು ನಾಗರಿಕ ಸಮಾಜದ ಪಾತ್ರ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಕಳೆದ 12 ವರ್ಷಗಳಿಂದ ಕಾವೇರಿ ನದಿ ಸ್ವಚ್ಛತಾ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದರು.

ಕಾವೇರಿ ನದಿ ಸ್ವಚ್ಛತಾ ಆಂದೋಲನದ ಅಧ್ಯಕ್ಷ ಎಂ.ಎಂ.ಚಂದ್ರಮೋಹನ್ ಮಾತನಾಡಿ, ಜಿಲ್ಲಾಡಳಿತ ಸಹಕಾರದಲ್ಲಿ ಕಾವೇರಿ ನದಿಯ ಮಹತ್ವ ಬಗ್ಗೆ, ಕಾವೇರಿ ನದಿ ಸ್ವಚ್ಛತಾ ಆಂದೋಲನವನ್ನು ಅಖಿಲ ಭಾರತ ಸ್ವಾಮೀ ಸಂಘ, ಕಾವೇರಿ ನದಿ ಟ್ರಸ್ಟ್ ಆಶ್ರಯದಲ್ಲಿ ಕಾವೇರಿ ನದಿ ಪಾತ್ರದಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಕಾವೇರಿ ಜಾಗೃತಿ ರಥಯಾತ್ರೆಯನ್ನು ತಲಕಾವೇರಿಯಿಂದ ಪೂಂಪ್‌ಹಾರ್ ತನಕ ಹಮ್ಮಿಕೊಳ್ಳಲಾಗಿದೆ ಎಂದರು.

ಶ್ರದ್ಧಾಭಕ್ತಿಯಿಂದ ಜರುಗಿದ ಮಹಾ ಆರತಿ ಕಾರ್ಯಕ್ರಮ: ಕಾವೇರಿ ನದಿ ಉತ್ಸವ ಪ್ರಯುಕ್ತ ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆದವು.

ಕಾವೇರಿ ನದಿ ಸಂರಕ್ಷಣಾ ಅಭಿಯಾನದ ಸಂಯೋಜಕರಾದ ಬಾನುಪ್ರಕಾಶ್ ಶರ್ಮ ಅವರು ವಿಶೇಷ ಪೂಜೆ ಸಲ್ಲಿಸಿದರು. ಮಹಾ ಅಭಿಷೇಕ, ಮಹಾ ಆರತಿ ವಿಶೇಷ ಪೂಜೆ ಜೊತೆಗೆ ಬಾಗಿನವನ್ನು ತ್ರಿವೇಣಿ ಸಂಗಮದಲ್ಲಿ ಅರ್ಪಿಸಲಾಯಿತು.

ಜಯ ಜಯ ಕಾವೇರಿ, ಪ್ರೀತಿಯಿಂದಲೇ ಬೆಳಗು ಕಾವೇರಿ.. ಓಂ ಜಯ ಜಯ ಕಾವೇರಿ..., ಅಮ್ಮಾ ಕಾವೇರಿ... ಜಯ ಜಯ ಕಾವೇರಿ, ಭಕ್ತಿಯಿಂದಲೇ ಬೆಳಗು ಕಾವೇರಿ ಹಾಡಿನೊಂದಿಗೆ ಆರತಿ ಪೂಜಾ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು.

ಜನತೆಗೆ ಸರ್ಕಾರಿ ಸೌಲಭ್ಯ ತಲುಪಿಸುವಲ್ಲಿ ಅಂಗನವಾಡಿ ಕೇಂದ್ರಗಳು ಪ್ರಮುಖ ಪಾತ್ರ

ಶಾಸಕ ಕೆ.ಜಿ.ಬೋಪಯ್ಯ ಅಭಿಮತ



ವಿರಾಜಪೇಟೆ, ಅ.21– ಸರಕಾರದ ವಿವಿಧ ಸೌಲಭ್ಯಗಳನ್ನು ನಗರ ಮತ್ತು ಗ್ರಾಮೀಣ ಭಾಗದ ಜನತೆಗೆ ತಲುಪಿಸುವ ನಿಟ್ಟಿನಲ್ಲಿ ಅಂಗನವಾಡಿ ಕೇಂದ್ರಗಳು ಪ್ರಮುಖ ಪಾತ್ರ ವಹಿಸಿವೆ ಎಂದು ಶಾಸಕ ಕೆ.ಜಿ.ಬೋಪಯ್ಯ ಹೇಳಿದರು.


ವಿರಾಜಪೇಟೆ ನಗರದ ಗಾಂಧಿನಗರದಲ್ಲಿ 16 ಲಕ್ಷ ರೂ. ವೆಚ್ಚದ ನೂತನ ಹೈಟೆಕ್ ಅಂಗನವಾಡಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಾತೃವಂದನ, ಪೌಷ್ಟಿಕ ಆಹಾರ ಜೊತೆಗೆ ಬಾಣಂತಿಯರಿಗೆ ಕಿಟ್ ಇತ್ಯಾದಿ ಸೌಲಭ್ಯವನ್ನು ಸರಕಾರ ಅಂಗನವಾಡಿ ಮೂಲಕ ವಿತರಿಸಲಾಗುತ್ತಿದೆ. ಇತ್ತೀಚೆಗೆ ವಿಧಾನಸಭಾ ಕಲಾಪದಲ್ಲಿ ಪ್ರಸ್ತಾಪವಾದ ಬಳಿಕ ಮಲೆನಾಡು ಜಿಲ್ಲೆಗಳಲ್ಲಿ ವಿತರಣೆ ಕಾರ್ಯ ಆರಂಭವಾಗಿದೆ ಎಂದರು.

ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಅವರು ಮಾತನಾಡಿ, ಪ್ರಧಾನಿ ಮೋದಿ ಅವರ ಕನಸಿನಂತೆ ಬಡ ಜನರ ಅಭಿವೃದ್ಧಿಗೆ ವಸತಿ ಯೋಜನೆ, ಶುದ್ಧ ಕುಡಿಯುವ ನೀರು ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲು ಸರಕಾರ ಉತ್ತಮ ಯೋಜನೆಯನ್ನು ರೂಪಿಸಿ ಕಾರ್ಯಪ್ರವೃತ್ತವಾಗಿದೆ. ದೇಶ ಇಂದು ಅಭಿವೃದ್ಧಿಯ ಹಾದಿಯಲ್ಲಿ ವಿಶ್ವದಲ್ಲಿ ನಾಲ್ಕನೇ ಸ್ಥಾನ ಪಡೆದಿದೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ಪುರಸಭೆ ಅಧ್ಯಕ್ಷೆ ಸುಸ್ಮಿತಾ ವಹಿಸಿದ್ದರು. ತಾಲೂಕು ಶಿಶು ಅಭಿವೃದ್ಧಿ ಕಲ್ಯಾಣ ಇಲಾಖೆಯ ಅಧಿಕಾರಿ ರಾಜೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಶು ಅಭಿವೃದ್ಧಿ ಅಧಿಕಾರಿ ರೀಟಾ, ಪುರಸಭೆ ಉಪಾಧ್ಯಕ್ಷ ವಿನಾಂಕ್ ಕುಟ್ಟಪ್ಪ, ಸದಸ್ಯೆ ಸುನೀತಾ ಜೂನಾ, ಮುಖ್ಯಾಧಿಕಾರಿ ಚಂದ್ರಕುಮಾರ್, ಅಭಿಯಂತರ ಹೇಮ್ ಕುಮಾರ್ ಮತ್ತು ಪುರಸಭೆ ಸದಸ್ಯರು ಉಪಸ್ಥಿತರಿದ್ದರು. ಇದೇ ಸಭೆಯಲ್ಲಿ ಶಾಸಕ ಬೋಪಯ್ಯ ಸಾಂಕೇತಿಕವಾಗಿ ಬಾಣಂತಿಯರಿಗೆ ಕಿಟ್ ವಿತರಿಸಿದರು.

ಲೋಕಾಯುಕ್ತ ಪೊಲೀಸರ ದಾಳಿ

ಇಬ್ಬರು ಇಂಜಿನಿಯರ್ಸ್, ಇನ್ಸ್‌ಪೆಕ್ಟರ್ ಗಳಿಸಿರುವ ಆಸ್ತಿ–ಪಾಸ್ತಿ, ದಾಖಲೆಗಳ ಪರಿಶೀಲನೆ



ಇನ್ಸ್‌ಪೆಕ್ಟರ್ ಮಹೇಶ್ ಅವರ ಐಷಾರಾಮಿ ಮನೆ.



ಮಡಿಕೇರಿಯ ಸಣ್ಣ ನೀರಾವರಿ ಇಲಾಖೆ ಕಚೇರಿಯಲ್ಲಿ ಲೋಕಾಯುಕ್ತ ಪೊಲೀಸರು ಪರಿಶೀಲನೆ ನಡೆಸಿದರು.

ಮಡಿಕೇರಿ, ಅ.21–ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಪೊಲೀಸ್ ಅಧಿಕಾರಿಗಳು ಇಂದು ಮೈಸೂರು, ಕುಶಾಲನಗರ ಮತ್ತು ಮಡಿಕೇರಿಯಲ್ಲಿ ದಾಳಿ ನಡೆಸಿ, ಲೋಕೋಪಯೋಗಿ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆಯ ಇಬ್ಬರು ಇಂಜಿನಿಯರ್‌ಗಳು ಹಾಗೂ ಓರ್ವ ಪೊಲೀಸ್ ಇನ್ಸ್‌ಪೆಕ್ಟರ್ ಬಳಿ ಲಕ್ಷಾಂತರ ರೂ. ಮೌಲ್ಯದ ಆಸ್ತಿ–ಪಾಸ್ತಿ, ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳನ್ನು ಪತ್ತೆ ಹಚ್ಚಿದ್ದಾರೆ.

ಮಡಿಕೇರಿ ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ಡಿ.ನಾಗರಾಜು ಅವರ ಮೈಸೂರಿನ ಕೆ.ಸಿ.ಲೇಔಟ್ ನಿವಾಸದ ಮೇಲೆ ದಾಳಿ ನಡೆಸಿದ ಅಧಿಕಾರಿಗಳು ಎರಡು ಮನೆ, 1,086 ಗ್ರಾಂ ಚಿನ್ನ, 9,928 ಗ್ರಾಂ ಬೆಳ್ಳಿ ಪದಾರ್ಥ, 23.91 ಲಕ್ಷ ರೂ. ನಗದು, 1 ಕಿಯಾ ಕಾರು, ಸೆಲಾರಿಯೋ ಕಾರು ಹಾಗೂ ಸ್ಕೂಟರ್, ಅಲ್ಲದೇ ಕುಟುಂಬ ಸದಸ್ಯರ ಹೆಸರಿನಲ್ಲಿದ್ದ 11 ಬ್ಯಾಂಕ್ ಅಕೌಂಟ್‌ಗಳಲ್ಲಿ 56,36,399 ರೂ. ನಗದು ಪತ್ತೆಯಾಗಿದೆ.

ಕುಶಾಲನಗರದ ಸಣ್ಣ ನೀರಾವರಿ ಇಲಾಖೆ ಜೂನಿಯರ್ ಇಂಜಿನಿಯರ್ ರಫೀಕ್ ಎಂಬುವರ ನಿವಾಸದ ಮೇಲೆ ದಾಳಿ ನಡೆಸಿದ ಅಧಿಕಾರಿಗಳು, ಕುಶಾಲನಗರದ ಬಳಿಯ ಬೈಚೇನಹಳ್ಳಿಯಲ್ಲಿ ಮನೆ, 2 ಎಕರೆ ಕಾಫಿ ತೋಟ, 680 ಗ್ರಾಂ ಚಿನ್ನ, 250 ಗ್ರಾಂ ಬೆಳ್ಳಿ, 2.82 ಲಕ್ಷ ರೂ. ನಗದು, ಇನ್ನೋವಾ ಕಾರು, ಬೊಲೆರೋ ಜೀಪ್, ಸ್ಕೂಟರ್ ಹಾಗೂ ಹಲವಾರು ದಾಖಲೆಗಳನ್ನು ಪತ್ತೆ ಮಾಡಿದ್ದಾರೆ.

ರಾಜ್ಯ ಗುಪ್ತ ವಾರ್ತೆಗೆ ವರ್ಗಾವಣೆ ಆದೇಶದಲ್ಲಿರುವ ಕುಶಾಲನಗರ ಠಾಣೆ ಇನ್ಸ್‌ಪೆಕ್ಟರ್ ಎಂ.ಮಹೇಶ್ ಅವರ ಮನೆಯ ಮೇಲೆ ದಾಳಿ ನಡೆಸಿದ್ದಾರೆ. ಅಧಿಕಾರಿಗಳು, ಮನೆ, 200 ಗ್ರಾಂ ಚಿನ್ನ, 2.5 ಕೆ.ಜಿ. ಬೆಳ್ಳಿ, 5,500 ರೂ. ನಗದು, ಕಾರು, ಸ್ಕೂಟರ್, ಕುಟುಂಬ ಸದಸ್ಯರ ಹೆಸರಿನಲ್ಲಿರುವ ನಾಲ್ಕು ಬ್ಯಾಂಕ್ ಖಾತೆಗಳಲ್ಲಿ 4,99,774 ರೂ. ನಗದು ಹಾಗೂ ಕೆಲವು ದಾಖಲೆಗಳನ್ನು ಪತ್ತೆ ಮಾಡಿದ್ದಾರೆ.

ಲೋಕಾಯುಕ್ತ ಮೈಸೂರು ವಿಭಾಗದ ಎಸ್ಪಿ ಎಸ್.ಸುರೇಶ್ ಬಾಬು ನೇತೃತ್ವದಲ್ಲಿ ಡಿವೈಎಸ್‌ಪಿಗಳಾದ ಪವನ್ ಕುಮಾರ್, ಕೃಷ್ಣಯ್ಯ, ಮಾಲತೀಶ್, ಎಸ್.ಟಿ.ಒಡೆಯರ್, ಇನ್ಸ್‌ಪೆಕ್ಟರ್‌ಗಳಾದ ಲೋಕೇಶ್, ಉಮೇಶ್, ಶ್ರೀಮತಿ ಶಶಿಕಲಾ, ರವಿಕುಮಾರ್, ಶಶಿಕುಮಾರ್, ಪ್ರಕಾಶ್, ಶ್ರೀಮತಿ ಜಯರತ್ನ, ಶ್ರೀಮತಿ ರೂಪಾಶ್ರೀ ಹಾಗೂ ಸಿಬ್ಬಂದಿ ಈ ಕಾರ್ಯಾಚರಣೆಗಳಲ್ಲಿ ಭಾಗಿಯಾಗಿದ್ದರು.

ನಟ ಚೇತನ್ ವಿರುದ್ಧ ಪೊಲೀಸರಿಗೆ ದೂರು

ಮಡಿಕೇರಿ,ಅ.21– ದೈವಾರಾಧನೆ ಹಿಂದೂ ಸಂಪ್ರದಾಯವಲ್ಲವೆಂದು ಹೇಳಿಕೆ ನೀಡುವ ಮೂಲಕ ನಟ ಚೇತನ್ ಲಕ್ಷಾಂತರ ಭಕ್ತರ ಮನಸ್ಸಿಗೆ ನೋವುಂಟು ಮಾಡಿದ್ದಾರೆ.



ಸಮಾಜದಲ್ಲಿ ಗೊಂದಲ ಸೃಷ್ಟಿಸಿ ಶಾಂತಿ ಕದಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿ ಕೊಡಗು ಯುವಸೇನೆ ಮಡಿಕೇರಿಯಲ್ಲಿ ಚೇತನ್ ವಿರುದ್ಧ ದೂರು ದಾಖಲಿಸಿದೆ.

ಯುವಸೇನೆಯ ಜಿಲ್ಲಾ ಉಪಾಧ್ಯಕ್ಷ ನಡುಮುಟ್ಲು ಪ್ರವೀಣ್ ಅವರು ಮಡಿಕೇರಿ ಉಪ ವಿಭಾಗದ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್ ಅವರಿಗೆ ದೂರು ಸಲ್ಲಿಸಿ, ಚೇತನ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ನಿರ್ದೇಶಕ ರಿಷಬ್ ಶೆಟ್ಟಿ ನಿರ್ದೇಶನದ ದೈವಾರಾಧನೆಯ ಕಥೆಯಾಧಾರಿತ 'ಕಾಂತಾರ' ಚಿತ್ರ ಹಾದಿ ತಪ್ಪುತ್ತಿರುವ ಯುವ ಜನಾಂಗಕ್ಕೆ ಮಾರ್ಗದರ್ಶನ ಮಾಡುವಲ್ಲಿ ಯಶಸ್ವಿಯಾಗಿದೆ ಮತ್ತು ದೈವಶಕ್ತಿಯನ್ನು ಪ್ರತಿಬಿಂಬಿಸಿದೆ. ಚಿತ್ರ ಲಕ್ಷಾಂತರ ಭಕ್ತರ ಮನಸೂರೆಗೊಳ್ಳುತ್ತಿರುವ ಹೊತ್ತಿನಲ್ಲೇ ನಟ ಚೇತನ್ ದೈವಾರಾಧನೆಯ ಕುರಿತು ಇಲ್ಲಸಲ್ಲದ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಪ್ರವೀಣ್ ಅಸಮಾಧಾನ ವ್ಯಕ್ತಪಡಿಸಿದರು. ಯುವಸೇನೆಯ ಮುಖಂಡ ಕುಲ್ದೀಪ್ ಪೂಣಚ್ಚ ಕೂಡ ಚೇತನ್ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.

ಬಿಳುಗುಂದ ಗ್ರಾಪಂ ಉಪಚುನಾವಣೆಗೆ ನಾಮಪತ್ರ ಸಲ್ಲಿಕೆ

ಪೊನ್ನಂಪೇಟೆ, ಅ.21– ಬಿಳುಗುಂದ ಗ್ರಾಪಂ ಉಪಚುನಾವಣೆಗೆ ಅಭ್ಯರ್ಥಿಯೊಬ್ಬರು ನಾಮಪತ್ರ ಸಲ್ಲಿಸಿದ್ದಾರೆ. ವಾರ್ಡಿನ ಗ್ರಾಪಂ ಸದಸ್ಯರಾಗಿದ್ದ ಪ್ರಸಾದ್ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ನಡೆಯಲಿರುವ ಉಪಚುನಾವಣೆಯಲ್ಲಿ ಸ್ಪರ್ಧಿಸಲು ಹೆಚ್.ಹೆಚ್.ರಶ್ಮಿ ಎಂಬುವರು ನಾಮಪತ್ರ ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ವಾರ್ಡಿನ ಮತ್ತೋರ್ವ ಸದಸ್ಯ ಪಿ.ಎ.ಹನೀಫ್, ಹಿಂದೆಯೂ ಕಾಂಗ್ರೆಸ್ ಬೆಂಬಲಿತ ಸದಸ್ಯರು ಗೆಲುವು ಸಾಧಿಸಿದ್ದ ಈ ವಾರ್ಡಿನಲ್ಲಿ ಈ ಬಾರಿಯೂ ಗೆಲುವು ಶತಸಿದ್ಧ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ವಲಯ ಕಾಂಗ್ರೆಸ್ ಅಧ್ಯಕ್ಷ ನಾಸಿರ್ ಅಹಮದ್, ಪಕ್ಷದ ಹಿರಿಯ ಮುಖಂಡರಾದ ಸಿ.ಪಿ. ಕಾವೇರಪ್ಪ, ಗ್ರಾಪಂ ಸದಸ್ಯೆ ಸಮೀರ, ಪಕ್ಷದ ಪ್ರಮುಖರಾದ ಮುನಾವರ್, ಇತಿಯಾಜ್, ಸಂಶುದೀನ್, ಸುಬ್ರಹ್ಮಣ್ಯ, ಹರೀಶ್, ಜಹೂರ್ ಮೊದಲಾದವರು ಹಾಜರಿದ್ದರು.

ನರೇಗಾ ಸೌಲಭ್ಯ ಪ್ರತಿಯೊಬ್ಬರಿಗೂ ತಲುಪಲಿ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಬಿ.ಬಿ.ಕಾವೇರಿ ಸೂಚನೆ



ಚಾಮರಾಜನಗರ, ಅ.21– ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸೌಲಭ್ಯ ಪ್ರತಿಯೊಬ್ಬರಿಗೂ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಬಿ.ಬಿ.ಕಾವೇರಿ ಸೂಚಿಸಿದರು.

ನಗರದ ಜಿಪಂ ಕೆಡಿಪಿ ಸಭಾಂಗಣದಲ್ಲಿಂದು ನಡೆದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ನಿರೀಕ್ಷಿತ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರಿಗೂ ಸೌಲಭ್ಯ ತಲುಪಿಸಲು ಪ್ರಾಮಾಣಿಕ ಸೇವೆ ಮಾಡಬೇಕಾಗಿದೆ. ನಿಗದಿತ ಮಾನವದಿನಗಳನ್ನು ಸೃಜಿಸಿ ಎಲ್ಲರಿಗೂ ಯೋಜನೆಯನ್ನು ಪರಿಣಾಮಕಾರಿಯಾಗಿ ತಲುಪಿಸಲು ಸಕ್ರಿಯರಾಗಬೇಕು ಎಂದು ಸೂಚಿಸಿದರು. ಪ್ರಸಕ್ತ ಸಾಲಿನಲ್ಲಿ ವಿವಿಧ ಇಲಾಖೆಗಳು ಭೌತಿಕ ಹಾಗೂ ಆರ್ಥಿಕ ಗುರಿಯನ್ನು ನಿಗದಿಪಡಿಸಿದ ಅವಧಿಯಲ್ಲಿ ಪೂರ್ಣಗೊಳಿಸುವುದು ಅವಶ್ಯ. ಜಿಲ್ಲೆಯಲ್ಲಿ ಈ ಬಾರಿ ಅತಿವೃಷ್ಟಿ ಉಂಟಾಗಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳು ಸಬೂಬು ಹೇಳದೆ ನರೇಗಾ ಯೋಜನೆಯ ಪ್ರಗತಿಯನ್ನು ತ್ವರಿತಗೊಳಿಸಿ ಎಂದರು.

ಶಿಥಿಲಗೊಂಡ ಅಂಗನವಾಡಿ ಕಟ್ಟಡ–ಶಾಲೆ ಕೊಠಡಿಗಳು, ಶಾಲಾ ಮೈದಾನ, ಶಾಲಾ ಕಾಂಪೌಂಡ್ ನಿರ್ಮಾಣ ಸೇರಿದಂತೆ ಇತರೆ ಕಾಮಗಾರಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನ ಬಳಸಿ ಬೇಗನೇ ಪೂರ್ಣಗೊಳಿಸಿ. ಅಂಗನವಾಡಿಗಳಲ್ಲಿ ಕೈತೋಟ ನಿರ್ವಹಣೆಗೂ ನರೇಗಾ ಅನುದಾನ ಬಳಸಿಕೊಳ್ಳಬೇಕು ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಶಿಲ್ಪಾನಾಗ್, ಯೋಜನೆಯ ಕುರಿತು ಜಿಲ್ಲೆಯಲ್ಲಿ ಆಗಿರುವ ಪ್ರಗತಿ ಪರಿಶೀಲಿಸಿದರು. ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಫಲಾನುಭವಿಗಳನ್ನು ಗುರುತಿಸಿ ಜಾಬ್ ಕಾರ್ಡ್ ವಿತರಿಸಬೇಕು. 130 ಗ್ರಾಪಂಗಳಲ್ಲೂ ಆರೋಗ್ಯ ಜಾಗೃತಿ ಕಾರ್ಯಕ್ರಮ(ಐಇಸಿ)ಗಳನ್ನು ಹಮ್ಮಿಕೊಳ್ಳಬೇಕು. ಕಳೆದ 5 ವರ್ಷಗಳ ಮಾಹಿತಿ ಆಧಾರದಲ್ಲಿ ಆಗಿರುವ ಪ್ರಗತಿಯನ್ನು ವಿಶ್ಲೇಷಿಸಬೇಕು. ಪ್ರತಿ ತಿಂಗಳು ಅಥವಾ ಪ್ರತಿವಾರ ಯೋಜನೆಯ ಅನುಷ್ಠಾನ ಅಧಿಕಾರಿಗಳು ಆಯಾ ಗ್ರಾಪಂಗಳಲ್ಲಿ ಯೋಜನೆಯ ಅರಿವು ಶಿಬಿರಗಳನ್ನು ಏರ್ಪಡಿಸಬೇಕು ಎಂದರು.

ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಂಟಿ ನಿರ್ದೇಶಕಿ ಶ್ರೀಶೈಲಾ ದಿದ್ದಿಮನಿ, ಇತರರು ಸಭೆಯಲ್ಲಿರಿದ್ದರು.

ರೈತರನ್ನು ಪ್ರೋತ್ಸಾಹಿಸಲು ಚಾಮುಲ್ ತೀರ್ಮಾನ

ಜಿಲ್ಲೆಯಲ್ಲಿ ಹಾಲು ಖರೀದಿ ದರ 2 ರೂ. ಹೆಚ್ಚಳ

ಚಾಮರಾಜನಗರ, ಅ.21–ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟ(ಚಾಮುಲ್) ಹಾಲು ಉತ್ಪಾದಕರಿಗೆ ಅ.21ರಿಂದ ಅನ್ವಯವಾಗುವಂತೆ ಪ್ರತಿ ಲೀ.ಗೆ 2 ರೂ. ಹೆಚ್ಚಿಸಿ ದೀಪಾವಳಿ ಉಡುಗೊರೆ ನೀಡಿದೆ.

ಇತ್ತೀಚಿನ ದಿನಗಳಲ್ಲಿ ಹಾಲಿನ ಉತ್ಪಾದನಾ ವೆಚ್ಚ ಅಧಿಕವಾಗಿರುವುದಲ್ಲದೆ, ರಾಸುಗಳಲ್ಲಿ ಚರ್ಮಗಂಟು ರೋಗ ಹರಡುತ್ತಿರುವುದರಿಂದ ಹಾಲಿನ ಇಳುವರಿ ಕುಂಠಿತವಾಗಿದೆ. ಇದರ ಪರಿಣಾಮ ಒಕ್ಕೂಟದ ಹಾಲಿನ ಶೇಖರಣೆ ಗಣನೀಯವಾಗಿ ಕಡಿಮೆಯಾಗಿದೆ. ಹೀಗಾಗಿ ಹಾಲು ಉತ್ಪಾದಕರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ರೈತರಿಗೆ ಪ್ರತಿ ಲೀಟರ್‌ಗೆ 2 ರೂ. ಖರೀದಿ ದರವನ್ನು ಹೆಚ್ಚಿಸಲಾಗಿದೆ ಎಂದು ಚಾಮುಲ್ ಅಧ್ಯಕ್ಷ ವೈ.ಸಿ.ನಾಗೇಂದ್ರ ತಿಳಿಸಿದ್ದಾರೆ.

ಅಕ್ಟೋಬರ್ 15ರಂದು ನಡೆದ ಚಾಮುಲ್ ಆಡಳಿತ ಮಂಡಳಿಯ 96ನೇ ಸಾಮಾನ್ಯ ಸಭೆಯಲ್ಲಿ ರೈತರ ಹಾಲು ಖರೀದಿ ದರ ಹೆಚ್ಚಿಸಲು ತೀರ್ಮಾನಿಸಲಾಗಿತ್ತು. ಸದ್ಯ ದರ ಹೆಚ್ಚಿಸಿರುವ ಪರಿಣಾಮ ರೈತರಿಗೆ 28.85 ಸಿಗಲಿದೆ. ಇರುವರೆಗೆ ಪ್ರತಿ ಲೀಟರ್‌ಗೆ 26.85 ನೀಡಲಾಗುತ್ತಿತ್ತು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಖಾಸಗಿಯವರ ಆಮಿಷಗಳಿಗೆ ಒಳಗಾಗಿ ಸರ್ಕಾರದ ವ್ಯವಸ್ಥೆಗೆ ಧಕ್ಕೆ ತರುವಂತಹ ನಿರ್ಧಾರಗಳನ್ನು ರೈತರು ಮಾಡದೆ, ನಿರಂತರ ಮಾರುಕಟ್ಟೆ ಒದಗಿಸುವ ನಂದಿನಿಗೆ ಹಾಲು ಸರಬರಾಜು ಮಾಡುವ ಮೂಲಕ ಸಹಕಾರ ವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ವೈ.ಸಿ.ನಾಗೇಂದ್ರ ರೈತರಲ್ಲಿ ಮನವಿ ಮಾಡಿದ್ದಾರೆ.

ಚಾಮರಾಜನಗರ ನಗರಸಭೆ ಆಯುಕ್ತ ಎಸ್.ವಿ.ರಾಮದಾಸ್ ಅಧಿಕಾರ ಸ್ವೀಕಾರ

ಚಾಮರಾಜನಗರ, ಅ.21–ನಗರಸಭೆ ನೂತನ ಆಯುಕ್ತರಾಗಿ ಎಸ್.ವಿ.ರಾಮದಾಸ್ ಶುಕ್ರವಾರ ಅಧಿಕಾರ ಸ್ವೀಕರಿಸಿದರು. ನಗರಕ್ಕೆ ಆಗಮಿಸಿದ ಎಸ್.ವಿ. ರಾಮದಾಸ್ ಅವರು ನಗರಸಭೆ ಪ್ರಭಾರ ಆಯುಕ್ತರಾಗಿದ್ದ ನಟರಾಜು ಅವರಿಂದ ಅಧಿಕಾರ ಸ್ವೀಕರಿಸಿದರು.



ರಾಮದಾಸ್ ಅವರು ಮಡಿಕೇರಿ ನಗರಸಭೆಯಲ್ಲಿ ಎರಡು ವರ್ಷ ಆಯುಕ್ತರಾಗಿ ಕೆಲಸ ನಿರ್ವಹಿಸಿದ್ದರು. ಅಲ್ಲಿಂದ ಬೆಂಗಳೂರಿನ ಲಾಲ್‌ಬಾಗ್‌ನ ತೋಟಗಾರಿಕೆ ಇಲಾಖೆಗೆ ವರ್ಗಾವಣೆಗೊಂಡು ಮೂರು ತಿಂಗಳ ಕಾಲ ಕಾರ್ಯ ನಿರ್ವಹಿಸಿದ್ದರು. ಈ ಸಂದರ್ಭದಲ್ಲಿ ಕಂದಾಯ ವಿಭಾಗದ ಅಧಿಕಾರಿ ಶರವಣ, ಪರಿಸರ ಇಂಜಿನಿಯರ್ ಗಿರಿಜಾ, ಸಿಬ್ಬಂದಿ ಹಾಜರಿದ್ದರು.

ಬಿಳುಗಲಿ ಕೊಲೆ ಪ್ರಕರಣ ಸಿಬಿಐ ತನಿಖೆಗೆ ಒಪ್ಪಿಸಿ

ಚಾಮರಾಜನಗರ, ಅ.21–ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ಬಿಳಿಗೆರೆ ಹೋಬಳಿಯ ಬಿಳುಗಲಿ ಗ್ರಾಮದ ತಾಯಿ–ಮಗಳ ಜೋಡಿ ಕೊಲೆ ಪ್ರಕರಣ ಸಿಬಿಐ ತನಿಖೆಗೆ ಒಪ್ಪಿಸುವಂತೆ ಸಮಾಜವಾದಿ ಜನತಾ ಪಾರ್ಟಿ ರಾಜ್ಯಾಧ್ಯಕ್ಷ ಜಿ.ಎಂ.ಗಾಡ್ಕರ್ ಸರ್ಕಾರವನ್ನು ಒತ್ತಾಯಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪುಟ್ಟರಂಗಮ್ಮ ಮತ್ತು ಮಣಿ ಎಂಬ ತಾಯಿ–ಮಗಳು ಕೊಲೆಯಾಗಿ 130 ದಿನ ಕಳೆದರೂ ಸಹ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸ್ ಇಲಾಖೆ ಹಾಗೂ ಜಿಲ್ಲಾಡಳಿತ ವಿಫಲವಾಗಿದೆ. ಹೀಗಾಗಿ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಆಗ್ರಹಿಸಿದರು.

ಪುಟ್ಟರಂಗಮ್ಮ ಮತ್ತು ಮಣಿ ಅವರು ಜಮೀನಿಗೆ ಹೋದ ಸಮಯದಲ್ಲಿ ಅವರ ಮೇಲೆ ಕೊಲೆಗಡುಕರ ಗ್ಯಾಂಗ್ ಹಲ್ಲೆ ಮಾಡಿ, ಕೈಕಾಲುಗಳನ್ನು ಕಟ್ಟಿಹಾಕಿ ಸಾಮೂಹಿಕ ಅತ್ಯಾಚಾರ ಎಸಗಿ, ನಂತರ ಕೊಲೆ ಮಾಡಿ ಜಮೀನಿನ ಪಕ್ಕದಲ್ಲಿ ನೀರು ಹರಿಯುವ ಅಡ್ಡಹಳ್ಳಕ್ಕೆ ಹಾಕಿದ್ದಾರೆ. 5 ದಿನದ ನಂತರ ಮೃತದೇಹಗಳು ಪತ್ತೆಯಾಗಿದ್ದವು. ಸ್ಥಳೀಯ ಪೊಲೀಸ್ ಅಧಿಕಾರಿಗಳು, ತಹಸೀಲ್ದಾರ್‌ರಿಂದ ಮಹಜರು ಮಾಡಲಾಗಿದೆ. ವೈದ್ಯರಿಂದ ಮರಣೋತ್ತರ ಪರೀಕ್ಷೆ ಮಾಡಿಸದೆ ಕೊಲೆಯಾದ ಕುಟುಂಬದವರು ಹಾಗೂ ಗ್ರಾಮಸ್ಥರನ್ನು ಹೆದರಿಸಿ, ಆತುರಾತುರವಾಗಿ ಅಂತ್ಯಕ್ರಿಯೆ ನಡೆಸಲಾಗಿದೆ ಎಂದು ಗಾಡ್ಕರ್ ದೂರಿದರು. ಕೊಲೆ ನಡೆದು 130 ದಿನ ಕಳೆದರೂ ಸಹ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಆರತಿ, ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ್ ತಳವಾರ, ಡಿವೈಎಸ್‌ಪಿ ಗೋವಿಂದರಾಜ್ ಅವರು ಕೊಲೆಗಡುಕರನ್ನು ಬಂಧಿಸಿಲ್ಲ. ಇವರು ರಾಜಕೀಯ ಲಾಬಿಗೆ ಮಣಿದಿದ್ದಾರೆ ಎಂದು ಆಪಾದಿಸಿದರು.

ಕೂಡಲೇ ಮೃತರ ಕುಟುಂಬಸ್ಥರಿಗೆ ಸರ್ಕಾರ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ದುರ್ಘಟನೆ ನಡೆದ ಸ್ಥಳದಿಂದ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಪಾದಯಾತ್ರೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಜಿ.ಎಂ.ಗಾಡ್ಕರ್ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ರಾಜ್ಯ ಉಪಾಧ್ಯಕ್ಷ ಮಹದೇವಶೆಟ್ಟಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಬಂಗಾರಸ್ವಾಮಿ, ಜಿಲ್ಲಾ ಅಧ್ಯಕ್ಷ ಪರಶಿವಮೂರ್ತಿ, ಮುಖಂಡರಾದ ಆರ್.ರಂಗಸ್ವಾಮಿ, ಲಕ್ಷ್ಮಣ್ ಸುದ್ದಿಗೋಷ್ಠಿಯಲ್ಲಿದ್ದರು.

ಚಾ.ನಗರದಲ್ಲಿಂದು ಗಣಪತಿ ವಿಸರ್ಜನೆ



ಚಾಮರಾಜನಗರ, ಅ.21–ನಗರದ ರಥ ಬೀದಿಯಲ್ಲಿ ಶ್ರೀ ವಿದ್ಯಾಗಣಪತಿ ಮಂಡಳಿಯು ಪ್ರತಿಷ್ಠಾಪಿಸಿದ್ದ ಗಣಪತಿಯ ವಿಸರ್ಜನಾ ಮಹೋತ್ಸವ ನಾಳೆ(ಅ.22) ನಡೆಯಲಿದೆ.

ಬೆಳಗ್ಗೆ 10.45ಕ್ಕೆ ಶ್ರೀ ಗುರುನಂಜನಶೆಟ್ಟರ ಛತ್ರದ ಮುಂಭಾಗದಿಂದ ಮೆರವಣಿಗೆ ಆರಂಭವಾಗಲಿದೆ. ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಮೆವಣಿಗೆಗೆ ಚಾಲನೆ ನೀಡುವರು. ನಂತರ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ನಡೆದು ಮಧ್ಯರಾತ್ರಿ ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಬಳಿ ಇರುವ ದೊಡ್ಡ ಅರಸನಕೊಳದಲ್ಲಿ ವಿಸರ್ಜಿಸಲಾಗುವುದು ಎಂದು ಗಣಪತಿ ಮಂಡಳಿ ಅಧ್ಯಕ್ಷ ಮನೋಜ್ ಪಟೇಲ್ ತಿಳಿಸಿದ್ದಾರೆ.

ಪೊಲೀಸ್ ಬಂದೋಬಸ್ತ್: ಗಣಪತಿ ಮೆರವಣಿಗೆಯು ಶಾಂತ ರೀತಿಯಲ್ಲಿ ನಡೆಸಬೇಕು ಎಂಬ ಉದ್ದೇಶದಿಂದ ಪೊಲೀಸ್ ಇಲಾಖೆ ನಗರದ ಎಲ್ಲೆಡೆ ಬಿಗಿ ಬಂದೋಬಸ್ತ್ ಮಾಡಿದೆ. ಶುಕ್ರವಾರ ಸಂಜೆ ನಗರದ ಪ್ರಮುಖ ಬೀದಿಗಳಲ್ಲಿ ಪೊಲೀಸರು ಪಥಸಂಚಲನ ನಡೆಸಿದರು. ಪ್ರಮುಖ ವೃತ್ತಗಳು ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ.

ಪೊಲೀಸ್ ಹುತಾತ್ಮರ ದಿನಾಚರಣೆ

ಗಣ್ಯರಿಂದ ಹುತಾತ್ಮರಿಗೆ ಗೌರವ ವಂದನೆ



ಚಾಮರಾಜನಗರ, ಅ.21–ನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ (ಡಿಎಆರ್) ಮೈದಾನದಲ್ಲಿಂದು ಜಿಲ್ಲಾ ಪೊಲೀಸ್ ಇಲಾಖೆಯಿಂದ ಪೊಲೀಸ್ ಹುತಾತ್ಮರ ದಿನ ಆಚರಿಸಲಾಯಿತು.

ಪೊಲೀಸ್ ಹುತಾತ್ಮರ ದಿನ ಅಂಗವಾಗಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಬಿ.ಎಸ್.ಭಾರತಿ ಗೌರವ ವಂದನೆ ಸ್ವೀಕರಿಸಿ, ಬಳಿಕ ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಪುಷ್ಪಗುಚ್ಛ ಅರ್ಪಿಸಿ ಮಾತನಾಡಿ, ಕರ್ತವ್ಯದ ಸಂದರ್ಭದಲ್ಲಿ ಸಾಕಷ್ಟು ಪೊಲೀಸರು ಮೃತಪಟ್ಟಿದ್ದಾರೆ. ಅವರೆಲ್ಲರಿಗೆ ಗೌರವ ಸಲ್ಲಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದರು.

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮಾತನಾಡಿ, ಕರ್ತವ್ಯದ ವೇಳೆ ಮರಣ ಹೊಂದಿದ ಪೊಲೀಸರಿಗೆ ಗೌರವ ಸಲ್ಲಿಸುವ ಸಲುವಾಗಿ ದೇಶಾದ್ಯಂತ ಇಂದು ಪೊಲೀಸ್ ಹುತಾತ್ಮರ ದಿನ ಆಚರಿಸಲಾಗುತ್ತಿದೆ. ಕುಟುಂಬವನ್ನು ಲೆಕ್ಕಿಸದೆ ಸಮಾಜದ ರಕ್ಷಣೆಯಲ್ಲಿ ತೊಡಗಿರುವ ಪೊಲೀಸ್ ವೃತ್ತಿ ಪವಿತ್ರವಾದದ್ದು ಎಂದು ಅಭಿಪ್ರಾಯಪಟ್ಟರು.

ಬಂಡೀಪುರ ಹುಲಿ ಯೋಜನೆ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕ್ಷೇತ್ರ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್ ಮಾತನಾಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಮಲೈಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಜಿ.ಸಂತೋಷ್ ಕುಮಾರ್, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪಅರಣ್ಯ ಸಂರಕ್ಷಣಾಧಿಕಾರಿ ದೀಪ್ ಜೆ.ಕಂಟ್ರಾಕ್ಟರ್, ಕಾವೇರಿ ವನ್ಯಜೀವಿ ವಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಲ್.ನಂದೀಶ್, ಎಡಿಸಿ ಎಸ್.ಕಾತ್ಯಾಯಿನಿದೇವಿ, ಎಎಸ್‌ಪಿ ಕೆ.ಎಸ್.ಸುಂದರರಾಜು, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಕೊಳ್ಳೇಗಾಲ ಡಿವೈಎಸ್‌ಪಿ ನಾಗರಾಜು, ಡಿ.ಆರ್ ವಿಭಾಗದ ಡಿವೈಎಸ್‌ಪಿ ಸೋಮಣ್ಣ, ಗೃಹರಕ್ಷಕ ದಳದ ಕಮಾಂಡೆಂಟ್ ಬಸವರಾಜು, ರೈತ ಮುಖಂಡರಾದ ಹೊನ್ನೂರು ಪ್ರಕಾಶ್, ಹೆಬ್ಬಸೂರು ಬಸವಣ್ಣ ಇತರರು ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದರು. ಬಳಿಕ ಪೊಲೀಸ್ ಧ್ವಜವನ್ನು ಅರ್ಧಕ್ಕೆ ಇಳಿಸಿ 2 ನಿಮಿಷಗಳ ಮೌನಾಚರಣೆ ಸಲ್ಲಿಸಿ ಬಳಿಕ ಪೊಲೀಸ್ ಧ್ವಜವನ್ನು ಮೇಲೇರಿಸಲಾಯಿತು.

ಉಪ್ಪಾರ ಸಮಾಜವನ್ನು ಎಸ್‌ಸಿ ಇಲ್ಲವೇ ಎಸ್‌ಟಿಗೆ ಸೇರಿಸಿ

ಕೊಳ್ಳೇಗಾಲ, ಅ.21–ಶೈಕ್ಷಣಿಕ, ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಉಪ್ಪಾರ ಸಮಾಜವನ್ನು ಸರ್ಕಾರ ಎಸ್‌ಸಿ ಇಲ್ಲವೇ ಎಸ್‌ಟಿ ಮೀಸಲಾತಿ ಪಟ್ಟಿಗೆ ಸೇರಿಸಬೇಕು ಎಂದು ಭಗೀರಥ ತಾಲೂಕು ಸಂಘ ಆಗ್ರಹಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ರಮೇಶ್, ಉಪ್ಪಾರ ಸಮಾಜ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿದೆ. ನಮ್ಮ ಸಮಾಜದಿಂದ ಶಾಸಕ ಪುಟ್ಟರಂಗಶೆಟ್ಟರು ಶಾಸಕರಾಗಿ ಬೆಂಬಲಕ್ಕಿದ್ದಾರೆ. ನಮ್ಮ ಸಮಾಜ ಎಸ್‌ಟಿಗೆ ಸೇರಿಸಬೇಕು ಎಂದು ಈ ಹಿಂದೆ ಚಳವಳಿಗಾರ ವಾಟಾಳ್ ನಾಗರಾಜು ಪ್ರಸ್ತಾಪಿಸಿದ್ದರು. ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ಉಪ್ಪಾರ ಸಮುದಾಯವನ್ನು ಎಸ್‌ಟಿಗೆ ಸೇರಿಸುವಂತೆ ಪತ್ರ ಬರೆದು ಗಮನ ಸೆಳೆದಿದ್ದರು. ಈಗ ಅವರೇ ಸಿಎಂ ಆಗಿದ್ದ, ನಮಗೆ ನ್ಯಾಯ ದೊರಕಿಸಿ ಕೊಡಬೇಕು. ಜಿಲ್ಲೆಯ ನಾಲ್ವರು ಶಾಸಕರು ಪಕ್ಷಾತೀತವಾಗಿ ನಮ್ಮ ಮುಂದಿನ ಹೋರಾಟಕ್ಕೆ ಸಹಕರಿಸಬೇಕು ಎಂದರು.

ತಾಲೂಕು ಭಗೀರಥ ಸಂಘದ ಕಾರ್ಯದರ್ಶಿ ಸೋಮಣ್ಣ ಉಪ್ಪಾರ್ ಮಾತನಾಡಿ, 40 ಲಕ್ಷ ಜನಸಂಖ್ಯೆ ಇದ್ದು, ಹಿಂದಿನ ಎಲ್ಲಾ ಸರ್ಕಾರಗಳು ಸಮಾಜಕ್ಕೆ ದ್ರೋಹ ಎಸಗಿದೆ. ಈಗ ಎಚ್ಚೆತ್ತು ಮೈಸೂರಿನಲ್ಲಿ ಅ.23ರಂದು ಸಭೆ ಕರೆದಿದ್ದು ಸಭೆಯಲ್ಲಿ ಹೊಸದುರ್ಗ ಪೀಠದ ಪುರುಷೋತ್ತಮ ಸ್ವಾಮೀಜಿ ಸೇರಿದಂತೆ ಹಲವಾರು ಮುಖಂಡರು ಹೋರಾಟ ರೂಪಿಸಲು ನಿರ್ಣಯಿಸಲಾಗುವುದು ಎಂದರು. ಸಂಘದ ಉಪಾಧ್ಯಕ್ಷ ಡಿ.ಪಿ.ಗೋವಿಂದ, ಮಹದೇವಸ್ವಾಮಿ, ನಟರಾಜು ಈ ಸಂದರ್ಭದಲ್ಲಿದ್ದರು.



ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ರಾಷ್ಟ್ರೀಯ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಅವರು ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಹನೂರು ತಾಲೂಕಿನ ಅಜ್ಜಿಪುರ ಮತ್ತು ಸುಳ್ಳೇರಿಪಾಳ್ಯ ಗ್ರಾಪಂ ವ್ಯಾಪ್ತಿಯ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ತಾಪಂ ಮಾಜಿ ಅಧ್ಯಕ್ಷ ಮುರುಡೇಶ್ವರ ಸ್ವಾಮಿ, ಮುಖಂಡರಾದ ಸಿ.ನಾಗರಾಜು, ರಮೇಶ್, ಎಂ.ಮಹದೇವ, ರಾಜೇಂದ್ರ, ಲೋಕೇಶ್, ಲಿಂಗರಾಜ್, ಬೈರಾಜು, ಮುನಿಗೌಡ, ಮಾದೇಗೌಡ, ಬಸವಗೌಡ, ಗೋವಿಂದ, ಇನ್ನಿತರ ಕಾಂಗ್ರೆಸ್ ಮುಖಂಡರು ಹಾಗೂ ಅಂಬೇಡ್ಕರ್ ಸಂಘದ ಯುವಕರಿದ್ದರು.



ಮಾಜಿ ಪ್ರಧಾನಿ ದೇವೇಗೌಡರು ಶುಕ್ರವಾರ ಚಾಮುಂಡಿಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು.

ದೇವೇಗೌಡರ ಕಣ್ಣೆದುರೇ ಜೆಡಿಎಸ್ ಅಧಿಕಾರಕ್ಕೆ ಬರಬೇಕು

ಹಾಸನಾಂಬೆಯಲ್ಲಿ ಎಂಎಲ್‌ಸಿ ಟಿ.ಎ.ಶರವಣ ಮೊರೆ



ಹಾಸನ, ಅ.21– ನಮ್ಮ ವರಿಷ್ಠರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕಣ್ಣೆದುರೇ ಜೆಡಿಎಸ್ ಪೂರ್ಣಬಹುಮತದೊಂದಿಗೆ ಅಧಿಕಾರಕ್ಕೆ ಬರಬೇಕೆಂದು ವಿಧಾನಪರಿಷತ್ ಸದಸ್ಯ ಟಿ.ಎ.ಶರವಣ ಹಾಸನಾಂಬೆಯಲ್ಲಿ ಮೊರೆಯಿಟ್ಟಿದ್ದಾರೆ. ಕುಟುಂಬ ಸದಸ್ಯರೊಂದಿಗೆ ಹಾಸನಾಂಬ ದೇವಸ್ಥಾನಕ್ಕೆ ಆಗಮಿಸಿ ತಾಯಿಯ ದರ್ಶನ ಪಡೆದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ವರಿಷ್ಠರಾದ ದೇವೇಗೌಡರು ಆರೋಗ್ಯವಾಗಿದ್ದು, ಮುಂಬರುವ ಚುನಾವಣೆಯಲ್ಲಿ ಅವರ ಹೋರಾಟದ ಮೂಲಕವೇ ನಾವು ಜಯಗಳಿಸಬೇಕು. ನ.1ರಿಂದ ಪಂಚರತ್ನ ರಥಯಾತ್ರೆ ಆರಂಭವಾಗಲಿದ್ದು ಅದರಿಂದ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ದೊಡ್ಡ ಮಟ್ಟದ ಶಕ್ತಿ ಸಿಗಬೇಕು. ವರಿಷ್ಠರಾದ ದೇವೇಗೌಡರ ಕಣ್ಣೆದುರೇ ಜೆಡಿಎಸ್ ಪಕ್ಷ ಪೂರ್ಣಬಹುಮತದೊಂದಿಗೆ ಅಧಿಕಾರಕ್ಕೆ ಬರಬೇಕು. ಜನರ ಆಶೀರ್ವಾದದಿಂದ 123 ಸಂಕಲ್ಪ ಸಾಕಾರವಾಗಬೇಕು. 2023ರಲ್ಲಿ ವಿಧಾನಸೌಧದ 3ನೇ ಮಹಡಿಯಲ್ಲಿ ಕುಮಾರಸ್ವಾಮಿ ಪಟ್ಟಾಭಿಷೇಕ ಆಗಬೇಕೆಂಬ ದೊಡ್ಡ ನಿರೀಕ್ಷೆಯೊಂದಿಗೆ ತಾಯಿ ಹಾಸನಾಂಬೆಗೆ ವಿಶೇಷ ಪ್ರಾರ್ಥನೆ ಸಲ್ಲಿಸಿದ್ದೇನೆ ಎಂದು ತಿಳಿಸಿದರು.

ಮೇಟಗಳ್ಳಿ ಭಾಗದಲ್ಲಿ 3.60 ಕೋಟಿ ವೆಚ್ಚದ ನಾನಾ ಕಾಮಗಾರಿಗೆ ಶಾಸಕ ನಾಗೇಂದ್ರ ಚಾಲನೆ



ಮೈಸೂರು, ಅ.21– ಮೈಸೂರಿನ ಮೇಟಗಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ 3.60 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಶುಕ್ರವಾರ ಗುದ್ದಲಿಪೂಜೆ ನೆರವೇರಿಸಿದರು. ಲೋಕೋಪಯೋಗಿ ಇಲಾಖೆಯ ಅನುದಾನದಲ್ಲಿ ಮೇಟಗಳ್ಳಿ, ಬಿ.ಎಂ.ಶ್ರೀನಗರದ ರೈಲ್ವೆ ಗೇಟ್‌ನಿಂದ ಕರಕುಶಲನಗರದವರೆಗೆ 1ನೇ ಮುಖ್ಯರಸ್ತೆ, 18ನೇ ಅಡ್ಡರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ, ಮಾವಿನ ತೋಪಿನ ಅಡ್ಡರಸ್ತೆ ಅಭಿವೃದ್ಧಿ ಹಾಗೂ ಚರಂಡಿ ನಿರ್ಮಾಣ, ಬಿ.ಎಂ.ಶ್ರೀನಗರ ನರ್ಮ್ ಕಾಂಪ್ಲೆಕ್ಸ್ ಸುತ್ತಲಿನ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಸ್ಥಳೀಯ ಕಾರ್ಪೊರೇಟರ್ ರಮೇಶ್ ಜೊತೆಗೂಡಿ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು.

ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ದೇವರಾಜು, ಮುಖಂಡರಾದ ಪುನೀತ್, ನರಸಿಂಹ ಮೂರ್ತಿ, ರವೀಂದ್ರ, ಪುಟ್ಟಬುದ್ಧಿ, ರುಕ್ಮಿಣಿ, ನಾಗರತ್ನ, ಶೋಭಾ, ಸಾವಿತ್ರಿ, ಮಧು, ರಮೇಶ್, ತಮ್ಮಣ್ಣ, ಗುಂಡ, ರವಿಕುಮಾರ್, ಚಂದ್ರಶೇಖರ್, ಮಂಜುನಾಥ, ಶಿವು, ದಾಸು, ಕರಿಯಪ್ಪ, ಶಂಕರ, ನವೀನ್, ಪಾಪಣ್ಣ, ರಾಮಲಿಂಗು, ಜಯರಾಮಣ್ಣ, ರಾಜಪ್ಪ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ರಾಜು, ಬಾಲಾಜಿ, ಗುತ್ತಿಗೆದಾರರಾದ ಅಶೋಕ್, ಗೋವಿಂದೇಗೌಡ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೇಟಗಳ್ಳಿ ವಾರ್ಡ್ ಕರಕುಶಲನಗರದ 32 ಕರಕುಶಲಕರ್ಮಿ ಫಲಾನುಭವಿಗಳಿಗೆ ಮನೆಯ ಹಕ್ಕು ಪತ್ರ ವಿತರಿಸಲಾಯಿತು. ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ ನಗರ ಪಾಲಿಕೆ ಸದಸ್ಯ ರಮೇಶ್, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಾರುತಿ ಮಲ್ಲಪ್ಪ ಅಷ್ಟಗಿ, ವ್ಯವಸ್ಥಾಪಕ ನಿರ್ದೇಶಕಿ ರೂಪಾ ಡಿ.ಮೌದ್ಗಿಲ್, ನಿರ್ದೇಶಕ ಜಿ.ಎಸ್. ದಯಾನಂದ, ನಗರಪಾಲಿಕೆ ಮಾಜಿ ಸದಸ್ಯ ದೇವರಾಜು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಮೈಸೂರು ಜಿಲ್ಲೆ ಸಂಪೂರ್ಣ ಜವಾಬ್ದಾರಿ

ಎಂದ ಅವರು, ಜಿ.ಟಿ.ದೇವೇಗೌಡರ ವಿಚಾರದಲ್ಲಿ ನಾನು ಬರುವ ಮುನ್ನವೇ ಕುಮಾರಸ್ವಾಮಿ ಅವರು ತೀರ್ಮಾನ ಕೈಗೊಂಡಿದ್ದರು. ಹೀಗಾಗಿ ಯಾವುದೇ ರೀತಿಯ ಅಪಸ್ವರವಿಲ್ಲದೆ ಎಲ್ಲರೂ ಒಗ್ಗಟ್ಟಿನಿಂದಲೇ ನಿರ್ಣಯ ಕೈಗೊಂಡಿದ್ದಾರೆ ಎಂದು ಹೇಳಿದರು.

ದಿವಂಗತ ಚಿಕ್ಕಮಾದು ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿದವರು ಇಲ್ಲೇ ಇದ್ದಾರೆ ಎಂದು ಜಿಟಿಡಿ ಕಡೆ ನೋಡಿದ ಹೆಚ್.ಡಿ.ದೇವೇಗೌಡರು, ಚಿಕ್ಕಮಾದು ಅವರ ಸಮಾಜವನ್ನು ರಾಜ್ಯದಲ್ಲಿ ಯಾರೂ ಗುರುತಿಸಿರಲಿಲ್ಲ. ಅಂತಹ ಸಂದರ್ಭದಲ್ಲಿ ಚಿಕ್ಕಮಾದು ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡುವ ಜವಾಬ್ದಾರಿಯನ್ನು ಜಿ.ಟಿ.ದೇವೇಗೌಡರು ವಹಿಸಿಕೊಂಡಿದ್ದರು ಎಂದರು.

ಜೆಡಿಎಸ್‌ನಿಂದ ಚುನಾವಣಾ ಕಾರ್ಯ ಆರಂಭ

ಜಿಟಿಡಿ, ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ಆರು ತಿಂಗಳಿಂದ ಅನಾರೋಗ್ಯಕ್ಕೊಳಗಾಗಿದ್ದ ಹೆಚ್.ಡಿ.ದೇವೇಗೌಡರು, ಆರೋಗ್ಯ ಸುಧಾರಿಸಿ ಇಲ್ಲಿಗೆ ಬಂದಿದ್ದಾರೆ. ದೇವಿ ದರ್ಶನ ಪಡೆದ ಅವರು ನನಗೆ ಒಂದು ತಿಂಗಳಲ್ಲೇ ವಾಕ್ ಮಾಡುವ ಶಕ್ತಿ ಬರುತ್ತದೆ, ವಾಕ್ ಮಾಡುತ್ತೇನೆ. ಜನವರಿಯಲ್ಲಿ ಚಂಡಿಕಾ ಹೋಮ ಮಾಡಿಸಿ, ಇಲ್ಲಿಂದಲೇ 2023ರ ಚುನಾವಣೆ ಪ್ರಾರಂಭ ಮಾಡುತ್ತೇನೆ ಎಂದು ಪ್ರಾರ್ಥನೆ ಮಾಡಿದ್ದಾರೆ ಎಂದು ಜಿಟಿಡಿ ಹೇಳಿದರು. ನಾನು ಕಳೆದ ಮೂರು ವರ್ಷದಿಂದ ದೂರ ಇದ್ದೆ. ಈಗ ಮತ್ತೆ ಹೆಚ್.ಡಿ.ದೇವೇಗೌಡರ ಜೊತೆ ಇರಲು ಸಂತೋಷವಾಗಿದೆ. ನಿನ್ನೆ ಅವರು ನಮ್ಮ ಮನೆಗೆ ಬಂದು ಸಂತೋಷದಿಂದ ಊಟ ಮಾಡಿದ್ದಾರೆ. ನನ್ನ, ಪತ್ನಿ ಮತ್ತು ಪುತ್ರನ ಜೊತೆ ದೇವೇಗೌಡರ ಕುಟುಂಬದವರೆಲ್ಲರೂ ಅತ್ಯಂತ ಸಂತೋಷದಿಂದ ಮಾತನಾಡಿದ್ದಾರೆ. ಈಗ ನನ್ನ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿಲ್ಲ. ಸಮಾಧಾನವಾಗಿದ್ದೇನೆ. ನಿನ್ನೆಯಿಂದಲೇ ಪಕ್ಷದ ಕಾರ್ಯಕ್ರಮಗಳನ್ನು ಆರಂಭಿಸಿದ್ದೇನೆ ಎಂದರು.

ಚಾಮುಂಡಿಬೆಟ್ಟದಲ್ಲಿ ಮತ್ತೆ ಭೂಕುಸಿತ

ಹಲವು ಕಡೆ ಭೂಕುಸಿತವಾಗಿತ್ತು. ಅದಕ್ಕೆ ಹೊಂದಿಕೊಂಡಂತೆ ವ್ಯೂ ಪಾಯಿಂಟ್‌ಗೆ ಅನತಿ ದೂರದಲ್ಲಿ ಕಳೆದ ರಾತ್ರಿ ಮತ್ತೆ ಕುಸಿದಿದೆ. ಅಲ್ಲಿ ರಸ್ತೆ ಚಿಕ್ಕದಾಗಿ ಬಿರುಕು ಬಿಟ್ಟಿದ್ದರಿಂದ ಭೂ ಕುಸಿತವಾಗುತ್ತದೆ ಎಂಬ ನಿರೀಕೆ ಇತ್ತು ಎಂದು ರಘು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಭೂ ಕುಸಿತವಾಗಿರುವ ಸ್ಥಳದಲ್ಲಿ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಬೇಕೆಂದರೆ ಮಳೆ ನಿಲ್ಲಬೇಕು. ಈಗ ಉಂಟಾಗಿರುವ ಕುಸಿತದ ಬಗ್ಗೆ ಇಂದು ಸಂಜೆ ಜಿಲ್ಲಾಧಿಕಾರಿಗಳಿಗೆ ಸಮಗ್ರ ವರದಿ ಸಲ್ಲಿಸಿದರು. ಕಳೆದ ಒಂದು ವರ್ಷದಿಂದಲೇ ನಂದಿ ಪ್ರತಿಮೆ ರಸ್ತೆ ಬಂದ್ ಮಾಡಲಾಗಿದೆ. ಈಗ ಮತ್ತೆ ಭೂ ಕುಸಿತವಾಗಿರುವುದರಿಂದ ಮತ್ತಷ್ಟು ಎಚ್ಚರಿಕೆ ವಹಿಸಿ, ಯಾವುದೇ ವಾಹನ ಇಲ್ಲಿ ಸಂಚರಿಸದಂತೆ ಎಚ್ಚರಿಕೆ ವಹಿಸುತ್ತಿದ್ದೇವೆ. ಮಳೆ ನಿಂತ ಮೇಲೆ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಕಾಂಕ್ರೀಟ್ ತಡೆ ಗೋಡೆ ನಿರ್ಮಿಸುವ ಕೆಲಸ ಆರಂಭಿಸುತ್ತೇವೆ ಎಂದು ಹೇಳಿದರು.

2021ರ ಅಕ್ಟೋಬರ್ 21 ರಂದು ರಾತ್ರಿ ನಂದಿ ಪ್ರತಿಮೆ ರಸ್ತೆಯಲ್ಲಿ ಭೂ ಕುಸಿತವಾಗಿತ್ತು. ನಂತರ 2021ರ ನವೆಂಬರ್ 18 ಸೇರಿದಂತೆ 3 ಬಾರಿ ಭೂಕುಸಿತವಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಆ ವೇಳೆ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ತಾಂತ್ರಿಕ ತಜ್ಞರು ಬಂದು ಸ್ಥಳ ಪರಿಶೀಲಿಸಿ, ಅವರ ಸಲಹೆ, ವಿನ್ಯಾಸದಂತೆಯೇ ಮೈಸೂರಿನ ಲೋಕೋಪಯೋಗಿ ಇಲಾಖೆ ಇಂಜಿನಿಯರುಗಳು ಕಾಮಗಾರಿಯನ್ನು ಆರಂಭಿಸಿದ್ದರಾದರೂ ಮಳೆಯಿಂದಾಗಿ ಕೆಲ ದಿನಗಳಿಂದ ಕಾಮಗಾರಿ ಸ್ಥಗಿತಗೊಂಡಿತ್ತು. ನಿರಂತರವಾಗಿ ಮಳೆ ಸುರಿದರೆ ಬೆಟ್ಟದಿಂದ ನೀರು ಹರಿದು ಇನ್ನೂ ಹಲವೆಡೆ ಭೂಕುಸಿತವಾಗಬಹುದು, ಮರಗಳು, ಬಂಡೆಗಳು ಉರುಳುವ ಸಾಧ್ಯತೆ ಇದ್ದು, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಆಗಿಂದಾಗ್ಗೆ ಹಾನಿ ಕುರಿತು ಅವಲೋಕಿಸಿ, ಮಳೆ ನಿಂತ ಮೇಲೆ ಸರಿಪಡಿಸುವ ಕಾರ್ಯ ಆರಂಭಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಕೇಂದ್ರ ಸರ್ಕಾರಿ ನೌಕರರು, ಪಿಂಚಣಿದಾರರ ಚಿಕಿತ್ಸೆಗಾಗಿ

ಮೈಸೂರಲ್ಲಿ ವೆಲ್‌ನೆಸ್ ಸೆಂಟರ್ ಕಾರ್ಯಾರಂಭ

● ಶಕ್ತಿನಗರದ ಡಾ. ರಾಜ್‌ಕುಮಾರ್ ರಸ್ತೆಯ ಬ್ಲಾಕ್ ನಂ.11ರಲ್ಲಿರುವ ಸೆಂಟರ್ ● ಪ್ರತಿದಿನ ಬೆಳಗ್ಗೆ 7.30ರಿಂದ ಮಧ್ಯಾಹ್ನ 2 ಗಂಟೆವರೆಗೆ ತೆರೆದಿರುತ್ತದೆ ● ಮಾಹಿತಿಗಾಗಿ 0821-2590080ಗೆ ಕರೆ ಮಾಡಬಹುದು





ಡಾ. ಮಾಂಡವಿಯ ಪ್ರತಾಪ್ ಸಿಂಹ



ಮೈಸೂರು, ಅ. 21(ಆರ್‌ಕೆ)– ಕೇಂದ್ರ ಸರ್ಕಾರಿ ನೌಕರರು ಹಾಗೂ ಪಿಂಚಣಿದಾರರ ಚಿಕಿತ್ಸೆಗಾಗಿ ಕಡೆಗೂ ಮೈಸೂರಿನಲ್ಲಿ ವೆಲ್‌ನೆಸ್ ಸೆಂಟರ್ ಕಾರ್ಯಾರಂಭವಾಗಿದೆ.

ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಕೊಡಗು ಜಿಲ್ಲೆಗಳ ಕೇಂದ್ರ ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿ ಹಾಗೂ ನಿವೃತ್ತ ನೌಕರರಿಗೆ ಮೈಸೂರಿನ ಶಕ್ತಿನಗರದ ಡಾ. ರಾಜ್‌ಕುಮಾರ್ ರಸ್ತೆಯ 11ನೇ ಬ್ಲಾಕ್‌ನ ನಂ. 10ರ ಕಟ್ಟಡದಲ್ಲಿ ಕೇಂದ್ರ ಸರ್ಕಾರಿ ಆರೋಗ್ಯ ಯೋಜನೆ (ಸಿಜಿಹೆಚ್‌ಎಸ್)ಯಡಿ ಈ ವೆಲ್‌ನೆಸ್ ಸೆಂಟರ್ ಬುಧವಾರದಿಂದ ಆರಂಭವಾಗಿದೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ. ಮನ್‌ಸುಖ್ ಎಲ್. ಮಾಂಡವಿಯ ಅಕ್ಟೋಬರ್ 19ರಂದು ವರ್ಚುಯಲ್ ಮೂಲಕ ವೆಲ್‌ನೆಸ್ ಸೆಂಟರ್ ಉದ್ಘಾಟಿಸಿದರು. ರಾಜ್ಯ ಸಚಿವೆ ಡಾ. ಭಾರತಿ ಪ್ರವೀಣ್ ಪವಾರ್ ಹಾಗೂ ಸಂಸದ ಪ್ರತಾಪ್ ಸಿಂಹ ಕಾರ್ಯಕ್ರಮದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಪಾಲ್ಗೊಂಡಿದ್ದರು.

ಪ್ರತಿದಿನ ಬೆಳಗ್ಗೆ 7.30ರಿಂದ ಮಧ್ಯಾಹ್ನ 2 ಗಂಟೆವರೆಗೆ ಸೆಂಟರ್ ತೆರೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ 0821–2590080ಗೆ ಕರೆ ಮಾಡಬಹುದಾಗಿದೆ.


ಬೆಂಗಳೂರಿನಲ್ಲಿ ಮಾತ್ರ ಇರುವ ಸೆಂಟರ್‌ನಲ್ಲಿ ಕೇಂದ್ರ ಸರ್ಕಾರಿ ನೌಕರರು ಹಾಗೂ ನಿವೃತ್ತರಾಗಿರುವವರಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿತ್ತು. ಇದೀಗ ಮೈಸೂರಿನಲ್ಲೇ ಆರಂಭವಾಗಿರುವುದರಿಂದ ಈ ಭಾಗದ ಫಲಾನುಭವಿಗಳು ಇದರ ಪ್ರಯೋಜನ ಪಡೆಯಬಹುದಾಗಿದೆ.

2014ರಲ್ಲಿ 25 ಸೆಂಟರ್‌ಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಇದೀಗ 75 ಸೆಂಟರ್‌ಗಳನ್ನು ತೆರೆದಿದ್ದು, ಅದರಿಂದಾಗಿ ದೂರದ ಊರುಗಳಿಂದ ನಗರಗಳಿಗೆ ಪ್ರಯಾಣಿಸುವ ತೊಂದರೆ ತಪ್ಪಿದಂತಾಗಿದೆ. ಪಿಂಚಣಿದಾರರು ಚಿಕಿತ್ಸೆಗಾಗಿ ಅಲೆದಾಡುವುದನ್ನು ತಪ್ಪಿಸಲು ಪ್ರಧಾನಮಂತ್ರಿಗಳು ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್‌ಗಳ ಸಂಖ್ಯೆಗಳನ್ನು ಹೆಚ್ಚಿಸಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಹೊರರೋಗಿಯಾಗಿ ಬರುವವರ ಆರೋಗ್ಯ ತಪಾಸಣೆ ಮಾಡಿ ಔಷಧಿ ಪೂರೈಸುತ್ತಿದ್ದು, ಪ್ರಯೋಗಾಲಯದಲ್ಲಿ ವಿವಿಧ ಪರೀಕ್ಷೆ ಹಾಗೂ ಒಳರೋಗಿ ಚಿಕಿತ್ಸಾ ಮತ್ತು ಶಸ್ತ್ರಚಿಕಿತ್ಸೆ ಅಗತ್ಯವಿದ್ದವರಿಗೆ ಸಂಬಂಧಪಟ್ಟ ಆಸ್ಪತ್ರೆಗಳಿಗೆ ಶಿಫಾರಸು ಮಾಡುವ ಡಿಸ್ಪೆನ್ಸರಿಯಾಗಿ ಕೇಂದ್ರ ಸೇವೆ ಸಲ್ಲಿಸಲಿದೆ ಎಂದು ಅವರು ತಿಳಿಸಿದರು.

ಕೇಂದ್ರ ಸರ್ಕಾರಿ ನೌಕರರು, ಪಿಂಚಣಿದಾರರು ಹಾಗೂ ಅವರ ಕುಟುಂಬ ಸದಸ್ಯರಿಗೆ ಆರೋಗ್ಯ ಸೇವೆ ಒದಗಿಸಲೆಂದು 1954ರಲ್ಲಿ ಆರಂಭವಾದ ವೆಲ್‌ನೆಸ್ ಸೆಂಟರ್‌ನಲ್ಲಿ ದೇಶಾದ್ಯಂತ 75 ನಗರಗಳ 41 ಲಕ್ಷಕ್ಕೂ ಹೆಚ್ಚು ಮಂದಿ ಸೇವೆ ಪಡೆಯುತ್ತಿದ್ದಾರೆ ಎಂದು ಸಚಿವ ಡಾ. ಮನ್‌ಸುಖ್ ಮಾಂಡವಿಯ ತಿಳಿಸಿದ್ದಾರೆ.

35 ವರ್ಷಗಳ ಹೋರಾಟದ ಫಲ



ಮೈಸೂರು, ಅ. 21(ಆರ್‌ಕೆ)– ನಿರಂತರ 35 ವರ್ಷಗಳ ಹೋರಾಟದ ಫಲವಾಗಿ ಕಡೆಗೂ ಇದೀಗ ಮೈಸೂರಲ್ಲಿ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯಡಿ (ಸಿಜಿಹೆಚ್‌ಎಸ್) ವೆಲ್‌ನೆಸ್ ಸೆಂಟರ್ ಕಾರ್ಯಾರಂಭವಾಗಿದೆ ಎಂದು ಕೇಂದ್ರ ಸರ್ಕಾರಿ ನೌಕರರ ಸಂಘ (ಸಿಜಿಪಿಎ)ದ ಅಧ್ಯಕ್ಷ ಡಾ. ಟಿ.ಎಸ್. ಸತ್ಯನಾರಾಯಣರಾವ್ ತಿಳಿಸಿದ್ದಾರೆ.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಮೈಸೂರು ಭಾಗದಲ್ಲಿ 50ರಿಂದ 60 ಸಾವಿರ ಮಂದಿ ಕೇಂದ್ರ ಸರ್ಕಾರಿ ಪಿಂಚಣಿದಾರರಿದ್ದಾರೆ. ಚಿಕಿತ್ಸೆ ಪಡೆಯಲು ಅವರು ದೂರದ ನಗರಕ್ಕೆ ಹೋಗಬೇಕಾಗಿತ್ತು. ನಾನು ಸೇವೆಯಲ್ಲಿರುವಾಗಲೇ ಮೈಸೂರಿನಲ್ಲಿ ಈ ಡಿಸ್ಪೆನ್ಸರಿ ಬೇಕೆಂಬ ಹೋರಾಟ ನಡೆಯುತ್ತಿತ್ತು ಎಂದು ಅವರು ತಿಳಿಸಿದರು.

ಸಂಘದ ಅಧ್ಯಕ್ಷನಾದಾಗ ದೆಹಲಿಗೆ ಮೂರ್‍ನಾಲ್ಕು ಬಾರಿ ನಿಯೋಗ ಕರೆದೊಯ್ದು ಆರೋಗ್ಯ ಸಚಿವರು ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿ ಒತ್ತಾಯಿಸಿದ್ದೆವು. ಮೈಸೂರಿಗೆ ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್ ಬೇಕೆಂದು ನಾನು 186 ಪತ್ರಗಳನ್ನು ಬರೆದಿದ್ದೆ. ಅದರ ಫಲವಾಗಿ ಈಗ ಹಲವು ವರ್ಷಗಳ ನಂತರ ಮೈಸೂರಿಗೆ ಈ ಸೌಲಭ್ಯ ದೊರಕಿರುವುದಕ್ಕೆ ಸಂತೋಷವಾಗುತ್ತಿದೆ ಎಂದು ಡಾ. ಸತ್ಯನಾರಾಯಣರಾವ್ ತಿಳಿಸಿದರು.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಮುಂದೆ ಅಪಾಯಕಾರಿ 'ಗುಂಡಿ'





ಬಿ.ಎನ್. ರಸ್ತೆ ಅಗಲವಾಗಿದ್ದು, ಪೈಪ್ ಲೈನ್‌ಗಾಗಿ ಅಗೆದ ಭಾಗಕ್ಕೆ ಮಣ್ಣು ಮುಚ್ಚಿದ್ದಾರೆ. ಆದರೆ, ನಿರಂತರ ಮಳೆಯಿಂದ ಈ ಭಾಗದಲ್ಲಿ ವಾಹನಗಳು ಓಡಾಡದ ಪರಿಸ್ಥಿತಿ ಇರುವುದರಿಂದ ಎಲ್ಲಾ ವಾಹನಗಳು ಈ ಗುಂಡಿಯ ಮೇಲೆ ಹಾದು ಹೋಗುತ್ತಿವೆ. ಇದರಿಂದ ವಾಹನ ಸವಾರರು ನರಕಯಾತನೆ ಅನುಭವಿಸುತ್ತಿದ್ದಾರೆ ಎಂದು ಆಟೋ ಚಾಲಕರೊಬ್ಬರು 'ಮೈಸೂರು ಮಿತ್ರ'ನ ಬಳಿ ದೂರಿದರು.

ಮೈಸೂರು, ಅ.21(ಜಿಎ)– ಬಲಿಗಾಗಿ ಕಾದು ಕುಳಿತಿರುವ ರಸ್ತೆ, ಬೃಹತ್ ಗುಂಡಿ... ಇದು ಮೈಸೂರಿನ ಹೃದಯ ಭಾಗದಲ್ಲಿರುವ ಬಿ.ಎನ್ ರಸ್ತೆಯ ಚಿತ್ರಣ...

ನಗರದ ಬಿ.ಎನ್.ರಸ್ತೆಯಲ್ಲಿ ದಸರಾಗೂ ಮುನ್ನ ಯುಜಿಡಿ ಪೈಪ್‌ಲೈನ್ ಅಳವಡಿಸಲು ಗುಂಡಿಯನ್ನು ತೆಗೆದು ಪೈಪ್ ಅಳವಡಿಸಿದ್ದರು. ಆದರೆ, ಗುಂಡಿಯನ್ನು ಮಣ್ಣಿನಿಂದ ಮುಚ್ಚಿದರ ಪರಿಣಾಮ ನಿರಂತರ ಮಳೆಯಿಂದ ಈ ರಸ್ತೆಯಲ್ಲಿ ಬೃಹದಾಕಾರದಲ್ಲಿ ಗುಂಡಿ ಬಾಯಿ ತೆರೆದಿದೆ. ನಿತ್ಯ ಈ ರಸ್ತೆಯಲ್ಲಿ ಸಾವಿರಾರು ವಾಹನಗಳು ಸಂಚರಿಸಲಿದ್ದು, 25ಕ್ಕೂ ಅಧಿಕ ವಾಹನ ಸವಾರರು ಈಗಾಗಲೇ ಬಿದ್ದು ಗಾಯಗೊಂಡಿದ್ದಾರೆ.

ಹಲವಾರು ತಿಂಗಳುಗಳಿಂದ ಮೈಸೂರಿಗರಿಂದ ಕೇಳಿ ಬರುತ್ತಿರುವ ಮಾತೊಂದೇ; ಅದು ನಗರದಲ್ಲಿ ಯಾವುದೇ ರಸ್ತೆಗಳು ಸರಿ ಇಲ್ಲ. ಎಲ್ಲಿ ನೋಡಿದರು ಗುಂಡಿಗಳು ಬಿದ್ದಿವೆ. ಗುಂಡಿಗೆ ಬಿದ್ದು ಬೆಂಗಳೂರಿನ ರೀತಿ ಇಲ್ಲಿಯೂ ಅಮಾಯಕರ ಬಲಿಯಾದ ನಂತರ ಅಧಿಕಾರಿಗಳು ಎಚ್ಚೆತ್ತುಕೊಳ್ಳುತ್ತಾರೋ ನೋಡಬೇಕು ಎಂದು ಪ್ರತಿ ನಿತ್ಯವು ಸಾರ್ವಜನಿಕ ವಲಯದಲ್ಲಿ ಮಾತುಗಳು ಕೇಳಿ ಬರುತ್ತಿವೆ.

ದಸರಾ ಸಂದರ್ಭದಲ್ಲಿ ನಗರದ ಪ್ರಮುಖ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗಿತ್ತು. ಆದರೆ, ಕೆಲ ರಸ್ತೆಗಳು ಮತ್ತೆ ಹದಗೆಟ್ಟಿದ್ದು, ಅದರಲ್ಲೂ ಗ್ರಾಮಾಂತರ ಬಸ್ ನಿಲ್ದಾಣವನ್ನು ಸೇರುವ ಬಹುತೇಕ ರಸ್ತೆಗಳು ಗುಂಡಿಮಯವಾಗಿವೆ. ಸರ್ಕಾರಿ ಬಸ್, ಕಾರು, ಆಟೋ ಮತ್ತು ದ್ವಿಚಕ್ರ ವಾಹನ ಸವಾರರು ಪ್ರತಿನಿತ್ಯ ನರಕಯಾತನೆ ಅನುಭವಿಸುತ್ತಿದ್ದಾರೆ.

ಫೈವ್‌ಲೈಟ್ ಸರ್ಕಲ್‌ನಿಂದ ಬಸ್ ನಿಲ್ದಾಣಕ್ಕೆ ಬರುವ ರಸ್ತೆಯಲ್ಲಿರುವ ಹೆಚ್ಚುವರಿ ಕೃಷಿ ಮೇಲ್ವಿಚಾರಕರ ಕಚೇರಿ ಮುಂಭಾಗ ಪೈಪ್‌ಲೈನ್ ಅಳವಡಿಸಲು ಅಗೆದಿದ್ದ ಗುಂಡಿ ಮೃತ್ಯು ಕೂಪವಾಗಿ ಪರಿವರ್ತನೆಗೊಳ್ಳುತ್ತಿದ್ದು, ನಿತ್ಯವೂ ವಾಹನ ಸವಾರರು ಬಿದ್ದು, ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ವೃತ್ತದಿಂದ ಈ ಕಚೇರಿವರೆಗೂ ರಸ್ತೆಯೂ ಕಡಿದಾಗಿದ್ದು, ವೇಗವಾಗಿ ಬರುವ ವಾಹನ ಸವಾರರು ಹತ್ತಿರ ಬರುತ್ತಿದ್ದಂತೆ ಗುಂಡಿಗೆ ವಾಹನ ಇಳಿಯುವುದನ್ನು ತಪ್ಪಿಸಲು ತಕ್ಷಣ ಬ್ರೇಕ್ ಹಾಕುತ್ತಿದ್ದಾರೆ. ಇದರ ಪರಿಣಾಮ ಹಿಂಬದಿಯಿಂದ ವೇಗವಾಗಿ ಬರುತ್ತಿರುವ ವಾಹನಗಳು ಡಿಕ್ಕಿ ಹೊಡೆದು, ನಿತ್ಯವೂ ವಾಗ್ವಾದಕ್ಕೆ ಇಳಿಯುವ ಘಟನೆಗಳು ಸರ್ವೇ ಸಾಮಾನ್ಯವಾಗಿವೆ.

ದಸರಾಗಿಂತ ಮುಂಚಿತವಾಗಿ ಆರಂಭವಾದ ಕಾಮಗಾರಿ ಇದು. ಆದರೆ, ಇಂದಿನವರೆಗೂ ಈ ರಸ್ತೆಯೂ ಇದೇ ಸ್ಥಿತಿಯಲ್ಲಿದ್ದು, ನಿತ್ಯವೂ ವಾಹನ ಸವಾರರು ಬೀಳುತ್ತಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಗುಂಡಿಯಿಂದ ಓರ್ವ ಮಹಿಳೆ ಮೃತಪಟ್ಟರು. ಅದೇ ರೀತಿ ಇಲ್ಲಿಯೂ ಸದ್ಯದಲ್ಲಿಯೇ ಆಗಲಿದೆ. ಅಧಿಕಾರಿಗಳು ಮಾತ್ರ ಇದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೆದುಳಿನ ಗಡ್ಡೆ ಶಸ್ತ್ರಚಿಕಿತ್ಸೆ ಮೂಲಕ ಗುಣಪಡಿಸಬಹುದು

ಮಣಿಪಾಲ್ ಆಸ್ಪತ್ರೆ ವೈದ್ಯ ಡಾ|| ಮಕ್ಸೂದ್ ಅಹ್ಮದ್ ವಿಶ್ವಾಸ

ಮೈಸೂರು,ಅ.21(ಎಂಟಿವೈ)– ಮೆದುಳು ಹಾಗೂ ಬೆನ್ನುಮೂಳೆ ಶಸ್ತ್ರಚಿಕಿತ್ಸೆ ಅಪಾಯಕಾರಿಯಲ್ಲ. ಮೆದುಳಿನಲ್ಲಿ ಗಡ್ಡೆ ಬೆಳೆದಿದ್ದರೆ ಯಶಸ್ವಿ ಶಸ್ತ್ರಚಿಕಿತ್ಸೆ ಮೂಲಕ ಗುಣಪಡಿಸಬಹುದಾಗಿದೆ ಎಂದು ಮಣಿಪಾಲ್ ಆಸ್ಪತ್ರೆ ತಜ್ಞ ವೈದ್ಯ ಡಾ. ಮಕ್ಸೂದ್ ಅಹ್ಮದ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಲೆನೋವು ಸಮಸ್ಯೆಗೆ ಕೆಲವರು ಮೆದುಳಿನಲ್ಲಿನ ಗಡ್ಡೆ ಕಾರಣ ಎಂದು ಅವಲೋಕಿಸುತ್ತಾರೆ. ಸೂಕ್ತ ಚಿಕಿತ್ಸೆ ಕೊಡಿಸಿದರೆ ಗುಣಪಡಿಸಬಹುದು. ತೀವ್ರ ಸ್ವರೂಪದ ತಲೆನೋವು ಹಠಾತ್ತನೆ ಉಂಟಾಗುವುದು, ಕೆಲವೊಮ್ಮೆ ವಾಂತಿ, ತೊದಲು ಕಾಣಿಸಿಕೊಳ್ಳುವ ಸಮಸ್ಯೆ ಉಂಟಾದಾಗ ಮಾತ್ರ ಮೆದುಳಿನಲ್ಲಿ ಗಡ್ಡೆ ಬೆಳೆದಿರುವ ಲಕ್ಷಣ ಕಂಡುಬರುತ್ತದೆ. ಇಂತಹ ಅನಾರೋಗ್ಯದ ಲಕ್ಷಣ ಕಂಡು ಬಂದರೆ ಸಕಾಲದಲ್ಲಿ ಚಿಕಿತ್ಸೆ ಪಡೆಯಬೇಕು ಎಂದು ಸಲಹೆ ನೀಡಿದರು.

ವಿಶ್ರಾಂತಿ ಪಡೆದರೂ, ಸೂಕ್ತ ಔಷಧಿ ತೆಗೆದುಕೊಂಡರೂ ಬೆನ್ನು ನೋವಿನ ಸಮಸ್ಯೆ ನಿವಾರಣೆಯಾಗದಿದ್ದರೆ ತಪಾಸಣೆಗೆ ಒಳಗಾಗಿ ಚಿಕಿತ್ಸೆ ಪಡೆಯಬೇಕು. ಇಂತಹ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆಗಳೂ ಪರಿಣಾಮಕಾರಿಯಾಗಲಿವೆ ಎಂದರು. ಆಸ್ಪತ್ರೆ ಅಧಿಕಾರಿ ಪ್ರಮೋದ್ ಹಾಜರಿದ್ದರು.

ಇಂದು, ರಾಜ್ಯಮಟ್ಟದ ಸೈಕ್ಲಿಂಗ್ ಸ್ಪರ್ಧೆ

ಮೈಸೂರು,ಅ.21(ಎಂಟಿವೈ)– ಮೈಸೂರಲ್ಲಿ ಅ.22 ಮತ್ತು 23ರಂದು 13ನೇ ರಾಜ್ಯ ಮಟ್ಟದ ಸೈಕ್ಲಿಂಗ್ ಚಾಂಪಿಯನ್‌ಷಿಪ್ 2022 ಸ್ಪರ್ಧೆ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಅಸೋಸಿಯೇಷನ್ ಕಾರ್ಯದರ್ಶಿ ಎಂ.ಆರ್.ಲೋಕೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಕರ್ನಾಟಕ ಭಾಗದ ಕ್ರೀಡಾ ಆಸಕ್ತರಲ್ಲಿ ಸೈಕ್ಲಿಂಗ್ ಸ್ಪರ್ಧೆಯನ್ನು ಉತ್ತೇಜಿಸುವ ಉದ್ದೇಶದಿಂದ ಈ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಅ.22ರಂದು ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಾಲಯದ ಮುಂಭಾಗದಿಂದ ಆರಂಭವಾಗಿ ದೇವೇಗೌಡ ವೃತ್ತದವರೆಗೆ ಸಾಗಲಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 250ಕ್ಕೂ ಅಧಿಕ ಸೈಕ್ಲಿಸ್ಟ್‌ಗಳು ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಮೈಸೂರು ಜಿಲ್ಲೆಯಿಂದ ಒಟ್ಟು 16 ಸೈಕ್ಲಿಸ್ಟ್ ಪಾಲ್ಗೊಳ್ಳಲಿದ್ದಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸಿ ಅರ್ಹತೆ ಪಡೆದವರು ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಲಿದ್ದಾರೆ. ಸ್ಪರ್ಧೆಗೆ ಭಾಗವಹಿಸುವವರು ಕಡ್ಡಾಯವಾಗಿ ಸ್ಪೋರ್ಟ್ಸ್ ಸೈಕಲ್ ತರಬೇಕು ಹಾಗೂ ಸೈಕ್ಲಿಂಗ್‌ಗೆ ಪೂರಕವಾದ ಶೂಗಳನ್ನೆ ಬಳಸಬೇಕು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅಸೋಸಿಯೇಷನ್‌ನ ಅಧ್ಯಕ್ಷ ನಾಗಭೂಷಣ್, ಖಜಾಂಚಿ ಸುರತ್ ಜಮಾದಾರ್ ಹಾಗೂ ಸೈಕ್ಲಿಂಗ್ ತರಬೇತುದಾರ ಪರಿಯಾದ್ ಜಾಮದಾರ್ ಇದ್ದರು.

ಮೈಸೂರಲ್ಲಿ ಹುತಾತ್ಮ ಪೊಲೀಸರಿಗೆ ಭಾವಪೂರ್ಣ ನಮನ









ಮೈಸೂರು, ಅ.21(ಆರ್‌ಕೆ)–ಕರ್ತವ್ಯ ನಿರತರಾಗಿದ್ದಾಗ ಕಳೆದ ಒಂದು ವರ್ಷದ ಅವಧಿಯಲ್ಲಿ ದೇಶದಾದ್ಯಂತ ಹುತಾತ್ಮರಾದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಮೈಸೂರಿನಲ್ಲಿ ಇಂದು ಭಾವಪೂರ್ಣ ನಮನ ಸಲ್ಲಿಸಲಾಯಿತು.

ದಕ್ಷಿಣ ವಲಯ ಐಜಿಪಿ ಕಚೇರಿ, ಮೈಸೂರು ನಗರ–ಜಿಲ್ಲಾ ಪೊಲೀಸ್ ಘಟಕ, ಕರ್ನಾಟಕ ಪೊಲೀಸ್ ಅಕಾಡೆಮಿ, ಕೆಎಸ್‌ಆರ್‌ಪಿ, ಸಿಎಆರ್ ಹಾಗೂ ಕೆಎಆರ್‌ಪಿ ಘಟಕಗಳ ಆಶ್ರಯದಲ್ಲಿ ಮೈಸೂರಿನ ನಜರ್‌ಬಾದಿನ ಎಸ್ಪಿ ಕಚೇರಿ ಬಳಿ ಪೊಲೀಸ್ ಹುತಾತ್ಮರ ಸ್ಮಾರಕ ಉದ್ಯಾನವನದಲ್ಲಿ ಏರ್ಪಡಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಡಾ. ಎಂ.ಮಾಲತಿ ಅವರು ಹುತಾತ್ಮ ಪೊಲೀಸರಿಗೆ ನಮನ ಸಲ್ಲಿಸಿದರು.

ಪೊಲೀಸ್ ಬೆಂಗಾವಲಿನಲ್ಲಿ ಹುತಾತ್ಮರ ಸ್ಮಾರಕಕ್ಕೆ ರೀತ್ ಸಮರ್ಪಿಸಿದ ಅವರು, ಪರೇಡ್ ಕಮಾಂಡರ್‌ರಿಂದ ವಂದನೆ ಸ್ವೀಕರಿಸಿದರು. ನಂತರ ಮಾತನಾಡಿದ ಡಾ. ಮಾಲತಿ ಪ್ರಿಯಾ ಅವರು, ಕರ್ತವ್ಯ ನಿರ್ವಹಿಸುವಾಗ ಹುತಾತ್ಮರಾದ ಧೈರ್ಯಶಾಲಿ ಪೊಲೀಸ್ ಸಿಬ್ಬಂದಿಯನ್ನು ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತೇವೆ. ತಮ್ಮ ಜೀವದ ಹಂಗನ್ನು ತೊರೆದು ಅತ್ಯಂತ ಶ್ರದ್ಧೆಯಿಂದ ಕರ್ತವ್ಯ ನಿರ್ವಹಿಸುವ ಪೊಲೀಸರಿಗೆ ಗೌರವ ಸಲ್ಲಿಸುವುದು ನಮ್ಮ ಕರ್ತವ್ಯ ಎಂದರು.

ಸಮಾಜದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವ ಅತಿರಥ ಜವಾಬ್ದಾರಿ ಹೊಂದಿರುವ ಪೊಲೀಸರು ಅರಣ್ಯ ಸಂಪತ್ತನ್ನು ಕಾಪಾಡುವ ಮೂಲಕ ನಮಗೆ ಸಹಕಾರ ನೀಡುತ್ತಿರುವುದು ಶ್ಲಾಘನೀಯ. ನಮ್ಮನ್ನಗಲಿದ ಪೊಲೀಸರಿಗಾಗಿ ಹುತಾತ್ಮರ ದಿನಾಚರಣೆ ಮೂಲಕ ಗೌರವ ನಮನ ಸಲ್ಲಿಸುವುದು ಅರ್ಥಪೂರ್ಣ ಕೆಲಸ ಎಂದು ಅವರು ನುಡಿದರು.

ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್, ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಕೆಪಿಎ ನಿರ್ದೇಶಕ ಅನುಪಮ್ ಅಗರವಾಲ್, ಉಪ ನಿರ್ದೇಶಕಿ ದಿವ್ಯಾ ಸಾ.ರಾ.ಥಾಮಸ್, ಎಸ್ಪಿ ಆರ್.ಚೇತನ್, ಎಎಸ್ಪಿ ಬಿ.ಎನ್.ನಂದಿನಿ, ಡಿಸಿಪಿ ಪ್ರದೀಪ್ ಗುಂಟಿ, ರಾಜ್ಯ ಗುಪ್ತ ವಾರ್ತಾ ಎಸ್ಪಿ ಎಂ.ಮುತ್ತುರಾಜ್, ಪೊಲೀಸ್ ತರಬೇತಿ ಶಾಲೆ ಪ್ರಾಂಶುಪಾಲ ಡಾ. ಹೆಚ್.ಟಿ.ಶೇಖರ್, ಡಿಸಿಆರ್‌ಇ ಎಸ್ಪಿ ಬಿ.ಟಿ.ಕವಿತಾ, ಎಸಿಬಿ ಎಸ್ಪಿ ವಿ.ಜೆ.ಸಜೀತ್, ಕೆಎಸ್‌ಆರ್‌ಪಿ ಕಮಾಂಡೆಂಟ್ ಆರ್.ಜನಾರ್ಧನ್, ಸಿಎಆರ್ ಡಿಸಿಪಿ ಶಿವರಾಜು, ಕೆಎಸ್‌ಆರ್‌ಪಿ ಕಮಾಂಡೆಂಟ್ ನಾಗರಾಜು, ಎಸಿಪಿ ಎಸ್.ಇ.ಗಂಗಾಧರಸ್ವಾಮಿ, ಡಿವೈಎಸ್ಪಿ ಪೂರ್ಣಚಂದ್ರ ತೇಜಸ್ವಿ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು, ನಿವೃತ್ತ ಪೊಲೀಸ್ ಅಧಿಕಾರಿಗಳು ಹುತಾತ್ಮರ ಸ್ಮಾರಕಕ್ಕೆ ರೀತ್ ಸಮರ್ಪಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ
0821–2496522/23

ಬೇಕಾಗಿದ್ದಾರೆ
ಹುಟ್ಟೂರು ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ.
1) B.Sc (Computer Science) Male & Female
2) BE (Mechanical) Supervisor Male
3) Diploma (Mechanical) Supervisor Male
4) ITI (Fitters), ESI & PF ಸೌಲಭ್ಯವಿರುತ್ತದೆ
8951869646
9902645646

ಶ್ರೀ ಬಾಲಾಜಿ ಟೂರಿಸ್ಟ್
18–11–22: 10 ದಿನ ಕೊಲ್ಲಾಪುರ, ಪಂಢರಾಪುರ, ಶಿರಡಿ, ನಾಸಿಕ್, ತ್ರಯಂಬಕೇಶ್ವರ, ಎಲ್ಲೋರ, ಶಿರಡಿ, ಶನಿಸಿಂಗ್ನಾಪುರ, ನಾಸಿಕ್, ಗಾಣಗಾಪುರ ಇತ್ಯಾದಿ.
12–12–22: 14 ದಿನ ನೇಪಾಳ ಮುಕ್ತಿನಾಥ್, ಪೋಕ್ರಾ, ಮನೋಕಾಮನ, ಕಾಠ್ಮಂಡು, ಪಶುಪತಿನಾಥ್, ಗುಹ್ಯೇಶ್ವರಿ, ಸ್ವಯಂಭೂನಾಥ್, ಬುದ್ಧ ನೀಲಕಂಠ, ಜನಕಪುರ್, ಬಾರಾ ಜ್ಯೋತಿರ್ಲಿಂಗ, ಗಯಾ, ಕಾಶಿ, ವಿಮಾನ/ರೈಲು/A/C ಬಸ್ ಊಟ, ವಸತಿ ಸೇರಿದೆ.
9945770486

ಮನೆ ಮಾರಾಟಕ್ಕಿದೆ
30x40 ಡೂಪ್ಲೆಕ್ಸ್ ಮನೆ ದಿಶಾ ಲೇಔಟ್, ವಿಜಯನಗರ 4ನೇ ಹಂತದ ಹತ್ತಿರ, ಆಲ್ ಟೀಕ್, 3 ಬೆಡ್ ರೂಂ, ಇಟಾಲಿಯನ್ ಕಿಚನ್. ಬೆಲೆ: ರೂ. 86 ಲಕ್ಷ. ಸಂಪರ್ಕಿಸಿ:
Mob: 9945042875

MUDA / DTCP SITES
ಹೆಚ್.ಡಿ.ಕೋಟೆ ರಸ್ತೆಯಲ್ಲಿ ಉತ್ತಮ ನಿವೇಶನಗಳು 11 ಲಕ್ಷಕ್ಕೆ ಲಭ್ಯವಿದೆ. ಬನ್ನೂರು ರಸ್ತೆಯಲ್ಲಿ 30x50 ಅಳತೆಯುಳ್ಳ ಸೈಟುಗಳು 36.5 ಲಕ್ಷಕ್ಕೆ ಮಾರಾಟಕ್ಕಿದೆ. ಬ್ಯಾಂಕ್ ಸೌಲಭ್ಯ ದೊರಕುತ್ತದೆ. ಸಂಪರ್ಕಿಸಿ:
9663104263

ಮಾರುವವರು – ಕೊಳ್ಳುವವರು
18x40 ಎಲ್ಲಾ ಅಳತೆಯ ಹೊಸ
20x30 ಮನೆ, ಹಳೇ ಮನೆ,
30x40 ಸೈಟ್ ಮೈಸೂರು ನಗರದ ಎಲ್ಲಾ ಬಡಾವಣೆಗಳಲ್ಲಿ
40x60 ಮಾರುವವರು –
50x80 ಕೊಳ್ಳುವವರು ಸಂಪರ್ಕಿಸಿ:
Mob: 8618495118

ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
ಟೀ, ಕಾಫಿ, ಜ್ಯೂಸ್, ಸ್ನ್ಯಾಕ್ ಮಾಡಬಲ್ಲವರು ಬೇಕಾಗಿದ್ದಾರೆ. ಆರ್.ಎಂ.ಸಿ. ಹತ್ತಿರ
9886666439

ಬಸವಮಾರ್ಗ ವ್ಯಸನ ಮುಕ್ತ ಕೇಂದ್ರ
3ನೇ ವರ್ಷದ ಅಂಗವಾಗಿ ಉಚಿತ ಕುಡಿತ ಬಿಡಿಸುವ ಶಿಬಿರ 100%** ಶಾಶ್ವತ ಕುಡಿತ ಬಿಡಿಸುವ ಶಿಬಿರ
Dt.: 28/10/22 to 17/11/22
8553111999
8803344999

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 40 ವರ್ಷ, ವಿದ್ಯಾರ್ಹತೆ: 7 ರಿಂದ PUC ಮತ್ತು ITI, ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ರೂಂಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:
9480404036

RECEPTIONIST / FRONT OFFICE MANAGER
ಲಾಡ್ಜ್‌ನಲ್ಲಿ ಕೆಲಸ ಮಾಡಲು ನುರಿತ Receptionist ಹಾಗೂ Room Boys ಬೇಕಾಗಿದ್ದಾರೆ.
Hotel Dewans Residency
Dewans Road, Devaraja Mohalla, Mysore (opp. Hotel Shringar)
9845155940

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ವಾಸವಾಗಿರುವ ಉದ್ಯಮಿಗೆ ಬೆಂಗಳೂರಿನಲ್ಲಿ ಡ್ರೈವರ್ ಕೆಲಸ ಮಾಡಲು ನುರಿತ ವಾಹನ ಚಾಲಕರು ಬೇಕಾಗಿದ್ದಾರೆ. ಉತ್ತಮ ವೇತನ, ಊಟ ಮತ್ತು ವಸತಿ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
9980623210

ಸೈಟು ಮಾರಾಟಕ್ಕಿದೆ
ಮುಡಾ ಅಪ್ರೂವ್ಡ್
20x30 ವಿಜಯನಗರ 4ನೇ ಹಂತ,
30x30 ಆರ್.ಟಿ.ನಗರ ಹತ್ತಿರ,
30x50 ವರಕೋಡ್ ಹತ್ತಿರ,
30x40 ವರಕೋಡ್ ಹತ್ತಿರ,
9900372792

ತಕ್ಷಣ ಬೇಕಾಗಿದ್ದಾರೆ
ಕುಶಾಲನಗರದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಶುದ್ಧ ಸಸ್ಯಹಾರಿ ರೆಸ್ಟೋರೆಂಟ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ. ಅಡುಗೆ ಸಹಾಯಕರು – 2, ಕಾಫಿ, ಟೀ ಮೇಕರ್–4, ಜ್ಯೂಸ್ ಮೇಕರ್ಸ್–2. ಕೂಡಲೇ ಸಂಪರ್ಕಿಸಿ:
9036799149

SITE FOR SALE
20X30 W/F
KHB
Kenchalagudu
Behind R.T.Nagar
9886481265
8310972636

HOUSE FOR SALE
20x30 Duplex House Three (3) BHK MUDA approved Layout, Near Dattagalli, Mysore. Contact:
Mail: pantanginarasimharao@gmail.com
8310259191
8618255505

ತಕ್ಷಣ ಬೇಕಾಗಿದ್ದಾರೆ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Maintence, Billings, Front office Telephone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000–39000 (ESI+PF+OT) ಸೇರಿ
7676939277 / 9353753194

ಮನೆ ಬಾಡಿಗೆಗೆ
ಕುವೆಂಪುನಗರ ನಿಮಿಷಾಂಬ ಬಡಾವಣೆ 1BHK ಪೂರ್ಣ ಸೌಕರ್ಯವುಳ್ಳ ಮನೆ, ವಿವೇಕಾನಂದ ಸರ್ಕಲ್ ಬಳಿ 2BHK ವಾಣಿಜ್ಯ,
8310344367
9449371278

ಹೊಸ ಮನೆ ಮಾರಾಟಕ್ಕಿದೆ
1400 ಅಡಿ ಹಾಗೂ ಸೈಟುಗಳು ಮಾರಾಟಕ್ಕಿವೆ. ಜಡ್ಜ್ ಕ್ವಾಟ್ರಸ್ ಹಿಂಭಾಗ, ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

MAX SOLAR FACTORY
We promote National Standard Solar Products
1. Solar Rooftops
2.Solar Street Lights
3. Solar water Heaters
4. Solar UPS
Expert in large solar Projects
Call us 9535608456

GOLD COMPANY
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ – (T&C)
9964522225

TEACHERS REQUIRED
English Major / PCM, B.Ed qualified teachers required. Interested can walk in or
call: 9742792363
cambridgepublicschool903@gmail.com

ಮನೆ ಕಟ್ಟಿಕೊಡಲಾಗುವುದು
ಮೈಸೂರು, ಬೆಂಗಳೂರು, ತುಮಕೂರು, ಹಾಸನ, ಮಂಡ್ಯ, ಚಾಮರಾಜನಗರ, ಹಳ್ಳಿ ಹಾಗೂ ಸಿಟಿಗಳಲ್ಲಿ.
9740081795, 8073026718

ಬೇಕಾಗಿದ್ದಾರೆ
ಮನೆಯಲ್ಲಿ ಅಡುಗೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. (ಸಸ್ಯಹಾರಿ) ಗಂಗೋತ್ರಿ ಲೇಔಟ್, ಮೈಸೂರು.
9945040509

FOR RENT
500 Sq. Ft. Commercial / Godown space available with bathroom, for Rent in Krishnamurthypuram, 2nd Main Road, 20 feet from Ballal Circle Main Road. For Details Contact:
9886082620

BUILDING FOR RENT
(15x25)
(3rd Floor)
K.T.Street
9449087351
8618622350

HOME LOANS
CORPORATION, MUDA, KHB
GRAMATHANA PROPERTY
Site Purchase,
Site Construction
House Purchase
Site Mortgage
House Mortgage
ROI 7.99%
Contact: 9108416410

TV ಕೆಟ್ಟಿದೆಯೇ? LCD, LED TV
ಫ್ರಿಡ್ಜ್, ವಾಷಿಂಗ್ ಮೇಷಿನ್, Micro Oven Doorstep ಸರ್ವಿಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

SITES @ MYSORE
Near Talur Circle
DTCP APPROVED & 'A' Khata
30x40, 30x50 & Other Dimensions
RERA REGISTERED
SITE LOANS FROM LICHFL | IMMEDIATE REGISTRATION
GSS
CALL: 73497-98444

ಜಮೀನುಗಳು ಬೇಕಾಗಿದೆ
ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಎಲ್ಲಾ ತರಹದ ಜಮೀನುಗಳು ಬೇಕಾಗಿದೆ. ಸಂಪರ್ಕಿಸಿ:
9035440657

NEW HOUSE FOR SALE
20X30 E/F
3 Bedroom Duplex, Dattagalli 1st Stage, University Layout, Near Ring Road.
9886481265
8310972636

A.N. CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ಹೊಸಮನೆ Plan, 3D Elevation Pillar ಸಹಿತ ಕಟ್ಟಿಕೊಡುತ್ತೇವೆ
91647 63079

Star Solar
Renewalle Energy

ಕೇವಲ Easy EMI
19,499/-
200 Ltr
*5 /15 Years Guaranty
ಎಲ್ಲಾ ಕಂಪನಿಯ ಹಳೆಯ ಸೋಲಾರ್‌ಗಳನ್ನು ಸರ್ವೀಸ್ ಮಾಡಿಕೊಡಲಾಗುವುದು.
Old system Exchange offer available
Manufacturing : Belawadi Industrial Sub,Mysore
9945616293 / 9449966293

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ)
MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ESI / PF ನೊಂದಿಗೆ ಊಟ, ವಸತಿಯಿರುತ್ತದೆ.
ಸಂಬಳ + ಓಟಿ
15,000 ರಿಂದ 48,000
9108522259 | 8971622258

ಬಾಡಿಗೆಗೆ
ಮೈಸೂರಿನ ಬಸವೇಶ್ವರ ಮುಖ್ಯರಸ್ತೆಯಲ್ಲಿ ಇರುವ ಅಂಗಡಿ ಮತ್ತು ಚೆನ್ನಾಗಿ ನಡೆಯುತ್ತಿರುವ ದ್ವಿಚಕ್ರ ವಾಹನಗಳ ಸರ್ವೀಸ್ ಸ್ಟೇಷನ್ ಬಾಡಿಗೆಗೆ ದೊರೆಯುತ್ತದೆ. ಆಸಕ್ತರು ಸಂಪರ್ಕಿಸಿ:
9980623210

ಬೇಕಾಗಿದ್ದಾರೆ
1) ಹೌಸ್ ಕೀಪಿಂಗ್ – ಪುರುಷರು, ಕನಿಷ್ಠ –01 ವರ್ಷ ಅನುಭವ
2) ಸೆಕ್ಯೂರಿಟಿ ಗಾರ್ಡ್ – ಪುರುಷರು, ವಯಸ್ಸು – 30 ರಿಂದ 50 ವರ್ಷಗಳು
ESI, PF & ಉತ್ತಮ ಸಂಬಳವಿರುತ್ತದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9739166772
9739199355

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

ಔಟ್ ಡೋರ್ ಸೇಲ್ಸ್ ಮಾಡಲು ಡ್ರೈವರ್ ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಬೇಕರಿ ಪ್ರೊಡಕ್ಷನ್ ಹೌಸ್‌ಗೆ ಔಟ್‌ಡೋರ್ ಸೇಲ್ಸ್ ಡೆಲಿವರಿ ಡ್ರೈವರ್ ಬೇಕಾಗಿದ್ದಾರೆ. ಸಂಬಳದ ಮೇಲೆ ಆಕರ್ಷಕ ಕಮಿಷನ್, ಹೆಚ್ಚುವರಿ ಸವಲತ್ತುಗಳನ್ನು ಒಳಗೊಂಡಿದೆ. ನೀವು ಬೇಕರಿ / ಅಂತಹುದೇ ಆಹಾರ ಉದ್ಯಮದಲ್ಲಿ ಕೆಲಸ ಮಾಡಿದ್ದರೆ ಹೆಚ್ಚಿನ ಆದ್ಯತೆ. ನಿಮ್ಮ ಸ್ವಂತ ವಾಹನ ಇದ್ದರೆ ಆದ್ಯತೆ. ಸಂಪರ್ಕಿಸಿ:
9611690101, 9895535526

Change of Name
I, Shruthi M.S., residing at D.No. 177, 5th Cross, Kandaya Nagara 1st Stage, Srirampura 2nd Stage, Mysuru-570 023, have changed my name as Shruthi Aradhya on my own free will, in front of Notary N.P. Kamala Devi on 18-10-2022. Hereafter in all records, deeds, instruments in writing, in all actions and proceedings I shall sign the said name of Shruthi Aradhya.
Sd/- Shruthi Aradhya

ಮನೆ ಮಾರಾಟಕ್ಕಿದೆ
ಮೈಸೂರು–ಟಿ.ನರಸೀಪುರ ಮುಖ್ಯ ರಸ್ತೆ, ನಾಡನಹಳ್ಳಿ KSRTC ಬಡಾವಣೆ ಮನೆ ನಂ. 42, ಅಳತೆ 30x40, 2 BK ದೇವರ ಮನೆ ಉತ್ತಮ ಗುಣಮಟ್ಟದಿಂದ ನಿರ್ಮಿಸಿರುವ ನೂತನ ಮನೆ ಹಾಗೂ ಪೂರ್ವಕ್ಕೆ ಬಾಗಿಲು ಮುಡಾದಿಂದ ಅನುಮೋದನೆಯಾಗಿದೆ ಮತ್ತು ಬ್ಯಾಂಕು ಸಾಲ ಸೌಲಭ್ಯವಿದೆ. ಆಸಕ್ತರು ಹೆಚ್ಚಿನ ಮಾಹಿತಿಗೆ ಈ ಕೆಳಕಂಡ ಫೋನ್ ನಂ.ಗೆ ಕರೆಮಾಡಿ ತಿಳಿಯಿರಿ.
8971379542, 9480421332

House for Rent / Sale
2 BHK rent at Krishnamurthypuram.
3 BHK rent at Kuvempunagar.
40x60 Duplex Rent at Dattagalli.
30x40 Duplex Sale at Srirampura.
25x40 Old house sale at R.K. Nagar.
Call: 9663136318

30x40 ಸೈಟು @ Rs. 15 ಲಕ್ಷ
MUDA APPROVED LAYOUT
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ಚಾಮುಂಡಿ ಬೆಟ್ಟದ ಹಿಂಭಾಗ, ಲಾಲ್‌ಬಹದ್ದೂರ್ ಶಾಸ್ತ್ರಿ ನಗರದ ನಂತರ
9538583377

ಬಸವಮಾರ್ಗ ವ್ಯಸನ ಮುಕ್ತ ಕೇಂದ್ರ
ಸಸ್ಯಹಾರಿ, ಮಾಂಸಾಹಾರಿ ಅಡುಗೆ ಭಟ್ಟರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಸಂಪರ್ಕಿಸಿ:
8553111999
8803344999

WANTED
Office Assistant & Marketing Candidate (Female only). Qualification any Degree with the knowledge of MS Excel & Word.
Ph: 0821-2953294
M: 9606539394

SITE FOR SALE
30/45 MUDA Site For Sale in Vijayanagar 4th Stage Mysore. 45Lakhs

30/40 Site For Sale in Near JP Nagar Mysore. 25 Lakhs
PH: +91 99004 64111

FOR SALE
1) 30x40 12 Lakhs 30x50 15 L sites available attch Brahmins E blk layout
2)12x36 G+2 House Kuvempu Nagar 28 Guntas land in Varkodu
3) 30x40, 40x60 New RT Nagar attch Prakruthi Properties
90359 90359/95386 90359

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಮನೆ ಮಾರಾಟಕ್ಕಿದೆ
20x30 ಗ್ರೌಂಡ್ ಫ್ಲೋರ್ ಅಂಡ್ ಫಸ್ಟ್ ಫ್ಲೋರ್ ನಾರ್ತ್ ಫೇಸ್ ಆರ್ಕಿಟೆಕ್ಟ್ ಬಿಲ್ಡಿಂಗ್ ಆಲ್ ಟೀಕ್ ಶ್ರೀರಾಂಪುರ ಸೆಕೆಂಡ್ ಸ್ಟೇಜ್, ಮೈಸೂರು, ನಿಯರ್ ಹುಣಸೆ ಮರ ಬಸ್ ಸ್ಟಾಪ್. ಸಂಪರ್ಕಿಸಿ: ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
9845713284
9141353309

ಕ್ರಿಶ್ಚಿಯನ್ ವಧು ಬೇಕಾಗಿದೆ
ಮೈಸೂರಿನಲ್ಲಿ ಸ್ವಂತ ಮನೆ, ಸ್ವಂತ ಉದ್ಯೋಗವಿರುವ 5.5 ಎತ್ತರವಿರುವ, 40 ವರ್ಷದ ವರನಿಗೆ ಕನ್ನಡ ಅಥವಾ ಮಲಯಾಳಂ ಮಾತನಾಡ ಬಲ್ಲ ವಧು ಬೇಕಾಗಿದೆ.
9343434342
9035742437

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

Sudarshan Saur
SOLAR WATER HEATER
ಸರ್ವರಿಗೂ ದೀಪಾವಳಿ ಹಬ್ಬದ ಶುಭಾಶಯಗಳು

ATTRACTIVE OFFER
ಸೇಲ್ಸ್&ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಬೇಕಾಗಿದ್ದಾರೆ
SDJ ಗೋಲ್ಡ್ ಜ್ಯುಯಲ್ಲರಿಗೆ ಕೆಲಸಕ್ಕೆ Telecaller ಮತ್ತು Field executive boys ಬೇಕಾಗಿದ್ದಾರೆ.
ಸಂಬಳ: 20,000
9513066625

ಮನೆ ಮಾರಾಟಕ್ಕಿದೆ
18x40 ಕುವೆಂಪುನಗರ, S/F ಪೂಜಾ ಬೇಕರಿ ಹತ್ತಿರ (Good Location) ಮಾರಾಟಕ್ಕಿದೆ. & ಚಿಕ್ಕ ಸಂಸಾರಕ್ಕೆ ವಿದ್ಯಾರಣ್ಯಪುರಂನಲ್ಲಿ ಮನೆ ಬಾಡಿಗೆಗಿದೆ. ಡಿ.ಡಿ.ರಿಯಲ್ ಎಸ್ಟೇಟ್ (ಮಧ್ಯವರ್ತಿಗಳು ಕ್ಷಮಿಸಿ)
9343361444

ಸೈಟ್ ಫಾರ್ ಸೇಲ್
ಜೆ.ಪಿ.ನಗರ ರಿಂಗ್ ರೋಡ್ ನಿಂದ 5 ಕಿ.ಮೀ ದೂರದ ದಡದಹಳ್ಳಿ ಜ್ಞಾನಭಾರತಿ ಲೇಔಟ್ ಮುಡಾ ಖಾತೆ. ಈಸ್ಟ್ ಫೇಸಿಂಗ್ ಸೈಟ್ ರೂ. 1900 ಚ.ಅಡಿಗೆ ಮತ್ತು ಸೌತ್ ಈಸ್ಟ್ ಫೇಸಿಂಗ್ ಸೈಟ್ ರೂ.2000 ಚ.ಅಡಿಗೆ.
9342123373

HOUSE FOR SALE
2 & 3 BHK New Flat, East facing, 1100 & 1650 sq.ft., 2nd Floor, fully furnished with lift, Jayalakshmipuram, V.V. Mohalla, Mysuru.

30x40, MUDA allotted, 2 BHK single floor house, East facing, 8 years old house, Dattagalli, Mysuru. Price: Rs. 98 Lakhs.
8660105902

SITES FOR SALE
20x30 & 30x40
Bank loan upto 80%, near Gurur Bus Stop, Ramabainagar, Mysore. DTCP Approved (CORPORATION LIMITS)
1.5 kms from JP Nagar Ring Road.
Mob: 8660105902

CHANGE OF NAME
I, Umesh .V S/o Veerabhadrappa residing at #37, Ground Floor, MIG-I, Group-I, KHB Colony, Hootagalli, Belavadi Post, Mysore - 570018, Karnataka State, India have changed my name from Umesh to Umesh.V on my own free will sworn in before Notary B.S.Vijayalakshmi, Mysore vide affidavit dated: 18.10.2022.
Sd/- Umesh.V

ಬೈಕ್ ರೈಡರ್ ಬೇಕಾಗಿದ್ದಾರೆ
rapido BIKE TAXI
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು ಡಿ.ಎಲ್, ವಾಹನದ ದಾಖಲೆಗಳು ಮತ್ತು ಆಧಾರ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
04045209698

ಬೇಕಾಗಿದೆ
60x40, 30x40
ನಿವೇಶನ ಅಥವಾ ಸೈಟು ಕುವೆಂಪುನಗರ ಅಥವಾ ಸರಸ್ವತಿಪುರಂ
Brokers Excuse
7795264993

ಶಾದಿಗುರೂಜಿ.ಕಾಂ
ವಧು – ವರರನ್ನು ಹುಡುಕಲು ಸಹಾಯಬೇಕೇ? ಕೂಡಲೇ ನಮಗೆ ಕರೆ ಮಾಡಿ.
ಡಾ. ಗುರೂಜಿ
ಮೈಸೂರು / ಬೆಂಗಳೂರು
6361740552
www.shaadiguruji.com

ಬ್ಯೂಟಿಷಿಯನ್ ಬೇಕಾಗಿದ್ದಾರೆ
ವಿದ್ಯಾರಣ್ಯಪುರಂ, ಗ್ರೀನ್‌ಟಚ್ ಲೇಡೀಸ್ ಪಾರ್ಲರ್‌ಗೆ
8746089729

ಮನೆ ಬಾಡಿಗೆಗೆ
3 ಬೆಡ್ ರೂಂ ವುಳ್ಳ Duplex ಮನೆ ಬಾಡಿಗೆಗೆ ಇದೆ. ಕನಕದಾಸ ನಗರ, ದಟ್ಟಗಳ್ಳಿ 3ನೇ ಹಂತ, ನೇತಾಜಿ ಸರ್ಕಲ್ ಮುಖ್ಯ ರಸ್ತೆ,
9844775166

HOUSE FOR SALE
9x8 Mtr Duplex, Built Area, Borewell in good condition, Corporation Tap Connection, Full Fledged Residential House.
Locality: #28, Bhagayamma Layout, 3rd Stage, Dattagalli, Kanakadasa Nagar, 'C' Cross, Mysuru. Contact: Shivaswamy
9880117527

IMMEDIATE HIRING
Qualification: 7th, 10th, ITI, Diploma, PUC, Any Degree (Pass or Fail), Salary: 15,000 - 30,000, Age Limit: 35 Below Applicable for Male Candidates Only. Contact No.
6366638189
9880151303

BHASKAR ALLIED HEALTH COLLEGE
DIPLOMA ADMISSION OPEN
* Medical Lab Technician
* X-ray / Sonography Technician
* ECG / Echo Technician
* Critical Care Management
* Patient Care Technician
* Pharmacy Assistant
Contact: PRINCIPAL
0821-2499188 / 9880186386

OFFICE SPACE FOR RENT
1500 Sft, Opposite DFRL Siddartha Nagar, Suitable for any kind of Office or Pharmacy Dealers etc. Contact:
9916803666

ಬೇಕಾಗಿದ್ದಾರೆ
ಮನೆಯಲ್ಲೇ ಇದ್ದು ಮಕ್ಕಳನ್ನೂ ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ. (ಸಸ್ಯಹಾರಿಗಳಿಗೆ ಮಾತ್ರ ಅವಕಾಶ) ಆಸ್ಪತ್ರೆಯ ರೋಗಿಗಳನ್ನು ನೋಡಿಕೊಳ್ಳಲು ಹೌಸ್‌ಕೀಪಿಂಗ್ ಲೇಡೀಸ್, ಹುಡುಗರು, ವಾರ್ಡ್ ಬಾಯ್ಸ್, ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.
Good Salary with ESI + EPF
8884286123 / 8884286321
8884339446
Field Officer required for security and housekeeping agency
Call: 9482142207

ವಧುವಿಗೆ ವರ ಬೇಕಾಗಿದೆ
ವೀರಶೈವ ಲಿಂಗಾಯತ ಸಮುದಾಯದ 34 ವರ್ಷದ ವಿಧವಾ ಹುಡುಗಿಗೆ ವರಬೇಕಾಗಿದೆ. ವೀರಶೈವ ಲಿಂಗಾಯಿತ ಮೈಸೂರು ವಾಸಿ ವರ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ:
9448642726

ಬೇಕಾಗಿದ್ದಾರೆ
PG ಮತ್ತು ಮನೆಗೆಲಸಕ್ಕೆ (ಹೌಸ್ ಕೀಪಿಂಗ್) ಹುಡುಗಿಯರು ಬೇಕಾಗಿದ್ದಾರೆ. ಉಳಿಯಲು ವಸತಿ ಮತ್ತು ಊಟದ ಸೌಲಭ್ಯವಿರುತ್ತದೆ.
7090079700
9035572879

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಸುವರ್ಣ ಯಾತ್ರ
8 ದಿನಗಳ ನೇಪಾಳ ಪ್ರವಾಸ 15/11/22,
7 ದಿನಗಳ ಕಾಶಿ ಪ್ರವಾಸ 15/11/22,
8 ದಿನಗಳ ಗುಜರಾತ್ ಪ್ರವಾಸ 24/11/22,
3 ದಿನಗಳ ಶಿರಡಿ ಪ್ರವಾಸ 11/11/22,
9019462508
9008381022

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ನನ್ನ ನಂಬಿದ ಯಾವ ಸಮುದಾಯಕ್ಕೂ ಅನ್ಯಾಯ ಮಾಡಿಲ್ಲ

ಕುರುಬ ಸಮಾಜದ ಮುಖಂಡರ ಸಭೆಯಲ್ಲಿ ಶಾಸಕ ಸಾ.ರಾ.ಮಹೇಶ್



ಕೆ.ಆರ್.ನಗರ, ಅ.21– ನನ್ನ ನಂಬಿದ ಯಾವ ಸಮುದಾಯಕ್ಕೂ ಯಾವುದೇ ರೀತಿಯಲ್ಲೂ ಅನ್ಯಾಯ ಮಾಡಿಲ್ಲ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಚೀರ್ನಹಳ್ಳಿ ರಸ್ತೆಯಲ್ಲಿರುವ ಸಾಯಿ ಕನ್ವೆನ್ಷನ್ ಹಾಲ್‌ನಲ್ಲಿ ಶುಕ್ರವಾರ ನಡೆದ ಕುರುಬ ಸಮಾಜದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ನನ್ನ ಅಧಿಕಾರವಧಿಯಲ್ಲಿ ಕ್ಷೇತ್ರದ ಕುರುಬ ಸಮಾಜದ ವರಿಗೆ ಯಾವುದೇ ತೊಂದರೆ ನೀಡಿಲ್ಲ. ಯಾರೇ ತಪ್ಪು ಮಾಡಿದಾಗಲೂ ಅದನ್ನು ನೇರವಾಗಿಯೇ ಖಂಡಿಸಿ ಮಾತನಾಡಿದ್ದೇನೆ. ಆದರೆ ದಂಡಿಸುವ, ದ್ವೇಷದ ರಾಜಕಾರಣ ಮಾಡಿಲ್ಲ ಎಂದರು.

ಲೋಕಸಭಾ ಚುನಾವಣೆಯಲ್ಲಿ ಹೆಚ್.ವಿಶ್ವನಾಥ್ ಅವರು ಸೋತಾಗ ಅವರನ್ನು ಜೆಡಿಎಸ್‌ಗೆ ಕರೆತಂದು ಹುಣಸೂರು ಕ್ಷೇತ್ರದ ಅಭ್ಯರ್ಥಿಯನ್ನಾಗಿ ಮಾಡಿ ಗೆಲ್ಲಿಸಿದ್ದು ಯಾರು ಎಂದು ಪ್ರಶ್ನಿಸಿದ ಅವರು ಇದು ನನ್ನ ಜಾತ್ಯತೀತ ರಾಜಕಾರಣಕ್ಕೆ ಸಾಕ್ಷಿ ಎಂದು ನುಡಿದರು.

ಪಕ್ಷ ಅಥವಾ ಜಾತಿ ರಾಜಕಾರಣ ಮಾಡಿ ನನಗೆ ಅಭ್ಯಾಸವಿಲ್ಲ. ನನ್ನದು ಏನಿದ್ದರೂ ಅಭಿವೃದ್ಧಿ ರಾಜಕಾರಣ. ಹಾಗಾಗಿ ನಾನು ಶಾಸಕನಾಗುವ ಮುಂಚೆ ಕ್ಷೇತ್ರ ಹೇಗಿತ್ತು. ಈಗ ಯಾವ ರೀತಿ ಅಭಿವೃದ್ಧಿ ಹೊಂದಿದೆ ಎಂಬುದನ್ನು ಮನಗಾಣಬೇಕು ಎಂದರು.

ಕುರುಬ ಸಮಾಜ ಇರುವ ಗ್ರಾಮದ ರಸ್ತೆಗಳನ್ನು ಅಭಿವೃದ್ಧಿ ಮಾಡಿಲ್ಲ ಎಂದು ಕಾಂಗ್ರೆಸ್‌ನವರು ಸಾಮಾಜಿಕ ಜಾಲತಾಣದಲ್ಲಿ ಹಾಕುತ್ತಾರೆ. ಆದರೆ ನನಗೆ ಅತಿ ಹೆಚ್ಚು ಮತ ನೀಡಿದ ನಮ್ಮ ಸಮಾಜದ ಬೆಟ್ಟಹಳ್ಳಿ, ಶಿಗೇವಾಳು ಗ್ರಾಮದ ಮುಖ್ಯರಸ್ತೆ ಅಭಿವೃದ್ಧಿ ಮಾಡಲು ಸಾಧ್ಯವಾಗಿಲ್ಲ. ಕಾರಣ ಕೋವಿಡ್‌ನಿಂದಾಗಿ ಸರ್ಕಾರ ರಸ್ತೆ ಅಭಿವೃದ್ಧಿಗೆ ಹಣ ನೀಡುತ್ತಿಲ್ಲ. ಕುರುಬ ಸಮಾಜದ ಗ್ರಾಮಗಳಲ್ಲಿ ನದಿಯಿಂದ ಶಾಶ್ವತ ಕುಡಿಯುವ ನೀರು, ನಿರಂತರ ವಿದ್ಯುತ್, ನಾಲೆಗಳಿಗೆ ಬರ ಬಂದಾಗ ನೀರು ಹರಿಸಿದ್ದು, ಕೊರೊನಾ ಸಂಕಷ್ಟದಲ್ಲಿ ಉಚಿತವಾಗಿ ಪಡಿತರ ಕಿಟ್, ನೋಟ್‌ಬುಕ್ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ನೀಡಲಾಗಿದೆ ಎಂದರು.

ಜಿಪಂ ಮಾಜಿ ಅಧ್ಯಕ್ಷ ಹಾಗೂ ಕುರುಬ ಸಮಾಜದ ಮುಖಂಡ ಸಿ.ಜೆ.ದ್ವಾರಕೀಶ್ ಮಾತನಾಡಿ, ಕಳೆದ 14 ವರ್ಷಗಳಿಂದ ಜೆಡಿಎಸ್ ಕುರುಬ ಸಮಾಜ ನಿಮ್ಮ ಬೆನ್ನಿಗೆ ನಿಂತಿದೆ. 2023ರ ಚುನಾವಣೆಯಲ್ಲಿ 15 ರಿಂದ 19 ಸಾವಿರ ಮತಗಳು ನಿಮಗೆ ಬರಲಿದ್ದು, ಮುಂದೆಯೂ ನೀವು ಕುರುಬ ಸಮಾಜ ಬೆನ್ನಿಗೆ ನಿಲ್ಲಿ ಎಂದು ಶಾಸಕ ಸಾ.ರಾ.ಮಹೇಶ್ ಅವರಲ್ಲಿ ಮನವಿ ಮಾಡಿದರು.

ಮಂಚನಹಳ್ಳಿ ಮಹದೇವಣ್ಣ ಅವರು ಗೆದ್ದಾಗ ಜೆಡಿಎಸ್‌ನಲ್ಲಿ ಎಷ್ಟು ಕುರುಬ ಸಮಾಜದ ಮುಖಂಡರಿದ್ದರು. ಅವರೆಲ್ಲಾ ಈ ಚುನಾವಣೆಯಲ್ಲಿ ನಿಮ್ಮ ಜೊತೆ ಬರಲಿದ್ದಾರೆ. ನಾಲ್ಕನೇ ಬಾರಿಗೆ ನೀವು ಶಾಸಕರಾಗಿ ಮಂತ್ರಿಯಾಗುವುದು ಖಚಿತ ಎಂದರು. ಕಾರ್ಯಕ್ರಮಕ್ಕೂ ಮುನ್ನಾ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಯಿಂದ ನೂರಾರು ಕುರುಬ ಸಮಾಜದ ಮುಖಂಡರು ಶಾಸಕ ಸಾ.ರಾ. ಮಹೇಶ್ ಅವರನ್ನು ವಿವಿಧ ಕಲಾ ತಂಡಗಳ ಮೂಲಕ ಮೆರವಣಿಗೆಯಲ್ಲಿ ಸಾಯಿ ಕನ್ವೆನ್ಷನ್ ಹಾಲ್‌ಗೆ ಕರೆ ತಂದರು.

ಈ ವೇಳೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಜಿಪಂ ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್, ಸದಸ್ಯ ಎಂ.ಟಿ.ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎಂ.ನಾಗರಾಜ್, ತಾಪಂ ಮಾಜಿ ಅಧ್ಯಕ್ಷ ರವಿ, ಮಾಜಿ ಸದಸ್ಯ ನಾಗಣ್ಣ, ಮಾಜಿ ಚೇರ್ಮನ್ ಕುನ್ನೇಗೌಡ ಮತ್ತಿತರರು ಮಾತನಾಡಿದರು. ಜಿಲ್ಲಾ ಜೆಡಿಎಸ್ ಹಿಂದುಳಿದ ವರ್ಗಗಳ ಅಧ್ಯಕ್ಷ ಶ್ರೀನಿವಾಸ್, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಕೆ.ಆರ್.ನಗರ ತಾಲೂಕು ಜೆಡಿಎಸ್ ಅಧ್ಯಕ್ಷ ಹೆಚ್.ಸಿ.ಕುಮಾರ್, ಸಾಲಿಗ್ರಾಮ ತಾಲೂಕು ಅಧ್ಯಕ್ಷ ರಾಜಣ್ಣ, ಕುರುಬ ಸಮಾಜದ ಮುಖಂಡರಾದ ಸಿ.ಬಿ. ಲೋಕೇಶ್, ಶಿವಣ್ಣ ಕಾಂತರಾಜು, ಮಹದೇವ್, ಪ್ರಸನ್ನ, ನಟರಾಜ್, ಕೃಷ್ಣೇಗೌಡ, ಶ್ರೀನಿವಾಸ್, ಯಶವಂತ್, ಜೆಡಿಎಸ್ ಮುಖಂಡರಾದ ನಾಗರಾಜು, ಯೋಗೇಶ್, ಹರ್ಷಿತ್, ರುದ್ರೇಶ್, ತನ್ವೀರ್, ಎಚ್.ಕೆ.ಮಧುಚಂದ್ರ ಮತ್ತಿತರರಿದ್ದರು.

ಕಾಂಗ್ರೆಸ್ ಮುಖಂಡನ ವಿರುದ್ಧ ವಾಗ್ದಾಳಿ

ಕೆಲವು ಗ್ರಾಮಗಳ ಅಭಿವೃದ್ಧಿಗೆ ಶಾಸಕರು ಅನುದಾನ ನೀಡಿಲ್ಲ ಎಂದು ಟೀಕಿಸುವವರು ಸಿದ್ದರಾಮಯ್ಯನವರು 5 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದಾಗ ಅಗತ್ಯ ಅನುದಾನ ತಂದು ಕೆಲಸ ಮಾಡಿದ್ದರೆ ನಾನು ಬೇಡ ಎನ್ನುತ್ತಿರಲಿಲ್ಲ ಎಂದು ಶಾಸಕ ಸಾ.ರಾ.ಮಹೇಶ್ ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

ಮಾತೆತ್ತಿದರೆ ಕಳೆದ 2 ಚುನಾವಣೆಯಲ್ಲಿ ಸೋತು ಎಲ್ಲವನ್ನು ಕಳೆದುಕೊಂಡಿದ್ದು, ಈ ಬಾರಿ ಗೆಲ್ಲಿಸಬೇಕೆಂದು ಮತದಾರರನ್ನು ಕೇಳುತ್ತಿರಲ್ಲಾ, ನೀವು ಗೆದ್ದ ನಂತರ ಕ್ಷೇತ್ರದ ಅಭಿವೃದ್ಧಿ ಮಾಡುತ್ತಿರೋ ಅಥವಾ ಹಣ ಸಂಪಾದನೆ ಮಾಡಬೇಕೆಂಬ ಉದ್ದೇಶ ಹೊಂದಿದ್ದೀರಾ ಎಂದವರು ಟೀಕಿಸಿದರು.

ಪ್ರತಿಯೊಬ್ಬರೂ ವಾಲ್ಮೀಕಿ ತತ್ವಾದರ್ಶ ಮೈಗೂಡಿಸಿಕೊಳ್ಳಿ




ಹುಣಸೂರು, ಅ.21– ಪ್ರತಿಯೊಬ್ಬರೂ ಮಹರ್ಷಿ ವಾಲ್ಮೀಕಿಯವರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಉದ್ಯಮಿ ಹೆಚ್.ಪಿ.ಅಮರ್‌ನಾಥ್ ಕರೆ ನೀಡಿದರು.

ತಾಲೂಕಿನ ಬಿಳಿಕೆರೆಯಲ್ಲಿ ಆಯೋಜಿಸಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಎಲ್ಲಾ ಮಹನೀಯರ ಜಯಂತಿಗಳನ್ನು ಸರ್ಕಾರದಿಂದ ಆಚರಿಸುತ್ತಿದ್ದರೂ, ಕೇವಲ ಒಂದೇ ಸಮಾಜದವರು ಭಾಗವಹಿಸಿ ಆಚರಿಸುತ್ತಿದ್ದಾರೆ. ಹೀಗಾಗಿ ಮಹನೀಯರನ್ನು ಒಂದೇ ಸಮಾಜಕ್ಕೆ ಮೀಸಲಿಡದೇ ಎಲ್ಲಾ ಸಮಾಜದವರೂ ಎಲ್ಲಾ ಜಯಂತಿಗಳಲ್ಲಿ ಭಾಗವಹಿಸಿ ಮಹಾನ್ ಪುರುಷರ ತತ್ವಾದರ್ಶ, ಜೀವನ ಶೈಲಿ ಮೈಗೂಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದರು.

ಹಿಂದೂ ಧರ್ಮದ ಪ್ರಮುಖ ಗ್ರಂಥಗಳಲ್ಲಿ ಒಂದಾದ ರಾಮಾಯಣ ಮಹಾಕಾವ್ಯ ಭಗವಾನ್ ವಿಷ್ಣುವಿನ 8 ಅವತಾರಗಳ ಕಥೆ ಹೇಳುತ್ತದೆ. ಮಹರ್ಷಿ ವಾಲ್ಮೀಕಿ ಶ್ರೇಷ್ಠ ಕವಿಗಳಲ್ಲಿ ಒಬ್ಬರೆಂದು ಬಣ್ಣಿಸಿದರು. ಇದಕ್ಕೂ ಮುನ್ನ ಸಿಂಗರಿಸಿದ ವಾಹನದಲ್ಲಿ ವಾಲ್ಮೀಕಿ ಭಾವಚಿತ್ರವನ್ನಿರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಸಭೆಯಲ್ಲಿ ಬಿಳಿಕೆರೆ ನಾಯಕ ಸಮಾಜದ ಯಜಮಾನರಾದ ಸ್ವಾಮಿನಾಯ್ಕ, ಭೈರನಾಯಕ, ಚಿಕ್ಕನಾಯಕ, ನಾಗರಾಜು, ಹರೀಶ್, ಶಿವು, ನಾಗನಾಯಕ, ಕಾರ್ತಿಕ್, ಮಧು, ದರ್ಶನ್, ಸ್ವಾಮಿ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ತಿ.ನರಸೀಪುರದಲ್ಲಿ ಉಪ ನೋಂದಣಿ ಕಚೇರಿ ಉದ್ಘಾಟನೆ



ತಿ.ನರಸೀಪುರ, ಅ.21– ಕಾರ್ಯಾಂಗ ಮತ್ತು ಶಾಸಕಾಂಗ ಸಾರ್ವಜನಿಕರ ಇಚ್ಛೆಗೆ ಅನುಗುಣವಾಗಿ ಕೆಲಸ ಮಾಡಬೇಕು ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧದ ಮೊದಲ ಅಂತಸ್ತಿನಲ್ಲಿದ್ದ ಉಪ ನೋಂದಣಿ ಕಚೇರಿಯನ್ನು ಸಾರ್ವಜನಿಕ ಹಿತಾಸಕ್ತಿ ಮೇರೆಗೆ ಕೆಳ ಅಂತಸ್ತಿಗೆ ಸ್ಥಳಾಂತರಿಸಿ ಉದ್ಘಾಟಿಸಿ ಮಾತನಾಡಿದ ಅವರು, ಸಾರ್ವಜನಿಕ ಕೆಲಸವೇ ನಮ್ಮ ಮುಖ್ಯ ಧ್ಯೇಯವಾಗಬೇಕು. ಸಾರ್ವಜನಿಕ ಕೆಲಸಗಳಿಗೆ ಸ್ಪಂದಿಸುವ ಇಚ್ಛಾಶಕ್ತಿ ನಮ್ಮಲ್ಲಿರಬೇಕು ಎಂದರು.

ಉಪ ನೋಂದಣಿ ಕಚೇರಿ ಮೊದಲ ಅಂತಸ್ತಿನಲ್ಲಿದ್ದ ಕಾರಣ ವಿಶೇಷಚೇತನರು, ವಯೋವೃದ್ಧರು ಮತ್ತು ಅನಾರೋಗ್ಯಕ್ಕೊಳಗಾದವರಿಗೆ ಆಗುತ್ತಿದ್ದ ತೊಂದರೆ ಬಗ್ಗೆ ಹಲವು ರೈತ ಮುಖಂಡರು ನನ್ನ ಜೊತೆ ಚರ್ಚಿಸಿದ್ದರು. ಹೀಗಾಗಿ ನಾನು ಶಾಸಕರು, ತಹಸೀಲ್ದಾರ್ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿ, ಕಚೇರಿ ಸ್ಥಳಾಂತರಿಸುವಂತೆ ಸೂಚನೆ ನೀಡಿದ್ದೆ. ಅದರಂತೆ ಸ್ಥಳಾಂತರ ಮಾಡಿ ಉದ್ಘಾಟಿಸಲಾಗಿದೆ ಎಂದರು.

ಇದೇ ವೇಳೆ ಸಬ್ ರಿಜಿಸ್ಟ್ರಾರ್ ಕಚೇರಿಗೆ ಬರುವ ವಯೋವೃದ್ಧರು ಹಾಗೂ ಅನಾರೋಗ್ಯ ಪೀಡಿತರ ಅನುಕೂಲಕ್ಕಾಗಿ ಪತ್ರ ಬರಹಗಾರರ ಪ್ರಾತಿಪರ ವೇದಿಕೆಯಿಂದ ವ್ಹೀಲ್‌ಚೇರ್ ಕೊಡುಗೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಕರೋಹಟ್ಟಿ ಪ್ರಭುಸ್ವಾಮಿ, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ಗ್ರಾಪಂ ಮಾಜಿ ಅಧ್ಯಕ್ಷ ಶಂಭುಭದೇವನಪುರ ರಮೇಶ್, ಮಾಜಿ ಸದಸ್ಯ ರಾಜಣ್ಣ, ಸೋಸಲೆ ರಾಜೇಶ್, ತಹಸೀಲ್ದಾರ್ ಗೀತಾ, ಉಪ ನೋಂದಣಾಧಿಕಾರಿ ಎಂ.ವಿವೇಕ್, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ವೇದಿಕೆ ಅಧ್ಯಕ್ಷ ನಾಗರಾಜಪ್ಪ, ಗೌರವಾಧ್ಯಕ್ಷ ಚಿಕ್ಕಲಿಂಗಯ್ಯ, ಕಾರ್ಯಾಧ್ಯಕ್ಷ ಲೋಕೇಶ್, ಪ್ರಧಾನ ಕಾರ್ಯದರ್ಶಿ ಸುರೇಶ್, ಸಹ ಕಾರ್ಯದರ್ಶಿ ಗವಿಸಿದ್ದಯ್ಯ, ಖಜಾಂಚಿ ರಮೇಶ್, ಆಪ್ತ ಸಹಾಯಕ ನಾಗರಾಜು, ಕಂದಾಯ ನಿರೀಕ್ಷಕ ಸರ್ವೇಶ್, ಚೆಲುವರಾಜು, ನಟರಾಜು, ನಾಗವೇಣಿ ಇತರರಿದ್ದರು.

ನಂ.ಗೂಡಲ್ಲಿ ಸಂಚಾರ ಪೊಲೀಸ್ ಠಾಣೆ ಲೋಕಾರ್ಪಣೆ



ನಂಜನಗೂಡು, ಅ.21– ನಗರವನ್ನು ಸ್ಯಾಟ್‌ಲೈಟ್ ಟೌನ್ ಆಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಅಗತ್ಯವಿದ್ದ ಸಂಚಾರ ಪೊಲೀಸ್ ಠಾಣೆಯನ್ನು 2 ಕೋಟಿ 6.5 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿ ಲೋಕಾರ್ಪಣೆ ಮಾಡಲಾಗಿದೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ತಿಳಿಸಿದರು.

ನಗರದ ಪೊಲೀಸ್ ವಸತಿಗೃಹ ಸಮೀಪ ನೂತನವಾಗಿ ನಿರ್ಮಿಸಿರುವ ಸಂಚಾರ ಪೊಲೀಸ್ ಠಾಣೆ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು. ಮೈಸೂರಿಗೆ ಹತ್ತಿರವಿರುವ ನಂಜನಗೂಡಿನಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದ್ದ ಪರಿಣಾಮ ನಾನು ಕಂದಾಯ ಸಚಿವನಾಗಿದ್ದ ವೇಳೆ ಸಂಚಾರ ಪೊಲೀಸ್ ಠಾಣೆ ತೆರೆಯುವಂತೆ ಮನವಿ ಮಾಡಿದ್ದೆ. ಅದರಂತೆ ನಗರದ ಎಪಿಎಂಸಿ ಆವರಣದ ಇಕ್ಕಟ್ಟಾದ ಜಾಗದಲ್ಲಿ ತಾತ್ಕಾಲಿಕವಾಗಿ ಸಂಚಾರಿ ಠಾಣೆಗೆ ಅವಕಾಶ ಕಲ್ಪಿಸಲಾಗಿತ್ತು. ಇದೀಗ ಪೊಲೀಸ್ ವಸತಿಗೃಹದ ಸಮೀಪ ಸುಸಜ್ಜಿತ ಕಟ್ಟಡ ನಿರ್ಮಿಸಲಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ನಗರದಲ್ಲಿ ಅಪಘಾತ ಕಡಿಮೆಯಾಗಲಿವೆ ಎಂದು ಅಭಿಪ್ರಾಯಪಟ್ಟರು.

ಮೈಸೂರು–ಚಾಮರಾಜನಗರ ರೈಲ್ವೆ ಲೈನ್ ಮಧ್ಯೆ ನಗರ ವ್ಯಾಪ್ತಿಯಲ್ಲಿ 2 ಲೆವಲ್ ಕ್ರಾಸಿಂಗ್‌ಗಳಿದ್ದು, ಇದರಿಂದ ವಾಹನ ಸವಾರರಿಗೆ ಅನಾನುಕೂಲವಾಗಿತ್ತು. ನಗರದ ಅಪೋಲೋ ವೃತ್ತದ ಬಳಿ ರೈಲ್ವೆ ಮೇಲ್ಸೇತುವೆ ಕಾಮಗಾರಿ ಮುಕ್ತಾಯ ಹಂತದಲ್ಲಿದೆ. ನಗರದ ಭಾರ್ಗವಿ ಚಿತ್ರಮಂದಿರದ ಸಮೀಪ ರೈಲ್ವೆ ಲೆವಲ್ ಕ್ರಾಸಿಂಗ್ ಬಳಿಯೂ ಮೇಲ್ಸೇತುವೆ ನಿರ್ಮಿಸಲಾಗುವುದು. ಹಂತ–ಹಂತವಾಗಿ ಕಾಮಗಾರಿ ನಡೆಸಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್ ಮಾತನಾಡಿ, ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಹೊಸದಾಗಿ ಸಿಗ್ನಲ್‌ಲೈಟ್ ಅಳವಡಿಸಿದ್ದರೂ ವಾಹನ ಸವಾರರು ಸಿಗ್ನಲ್ ಜಂಪ್ ಮಾಡುತ್ತಿರುವುದರಿಂದ ಅಪಘಾತಗಳಾಗುವ ಸಂಭವವಿದೆ. ಸಿಸಿ ಟಿವಿ ಅಳವಡಿಸಿ ಸಿಗ್ನಲ್ ಜಂಪ್ ಮಾಡುವವರ ವಿರುದ್ಧ ಕ್ರಮ ವಹಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ಬಿ.ಹರ್ಷವರ್ಧನ್, ಡಾ.ತಿಮ್ಮಯ್ಯ, ರಾಜ್ಯ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ದಕ್ಷಿಣ ವಲಯ ಪೊಲೀಸ್ ಆಯುಕ್ತ ಪ್ರವೀಣ್ ಮಧುಕರ್ ಪವಾರ್, ಡಿವೈಎಸ್‌ಪಿ ಗೋವಿಂದರಾಜ್, ಸಿಪಿಐಗಳಾದ ಲಕ್ಷ್ಮಿಕಾಂತ ತಳವಾರ್, ಶಿವನಂಜಶೆಟ್ಟಿ, ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಸದಸ್ಯರಾದ ದೊರೆಸ್ವಾಮಿ, ಕಪಿಲೇಶ್, ಮಹದೇವ ಪ್ರಸಾದ್, ಮಹದೇವಮ್ಮ, ವಿಜಯಲಕ್ಷ್ಮಿ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಮುಖಂಡರಾದ ಸುಬ್ಬಣ್ಣ, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ ಇತರರಿದ್ದರು.

ಪಳನಿಅಮ್ಮಾಳ್ ನಿಧನ



ಹೆಚ್.ಡಿ.ಕೋಟೆ, ಅ.21– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ, ಗುತ್ತಿಗೆದಾರ ಆರ್ಮುಗಂ ಅವರ ತಾಯಿ ಪಳನಿಅಮ್ಮಾಳ್ (90) ಶುಕ್ರವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ತಮಿಳುನಾಡಿನ ತಿರಪ್ಪೂರು ಕೆವಿಆರ್ ನಗರದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ತಿ.ನರಸೀಪುರ, ಅ.21– ರಾಜ್ಯ ಬಿಜೆಪಿ ಸರ್ಕಾರ ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಕಡಿಮೆ ಅನುದಾನ ಬಿಡುಗಡೆ ಮಾಡುವ ಮೂಲಕ ತಾರತಮ್ಯ ಮಾಡುತ್ತಿದೆ ಎಂದು ಶಾಸಕ ಡಾ.ಯತೀಂದ್ರ ಬೇಸರ ವ್ಯಕ್ತಪಡಿಸಿದರು.

ಪಟ್ಟೆಹುಂಡಿ ಗ್ರಾಮದಲ್ಲಿ ನೀರಾವರಿ ಇಲಾಖೆ ವತಿಯಿಂದ 15 ಲಕ್ಷ ರೂ. ವೆಚ್ಚದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನನ್ನ ತಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ವರುಣಾ ಕ್ಷೇತ್ರಕ್ಕೆ 1700 ಕೋಟಿ ರೂ. ಅನುದಾನ ನೀಡಿದ್ದರಿಂದ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗಿತ್ತು. ಅಲ್ಲದೇ ಬಡವರಿಗೆ ಪ್ರತಿವರ್ಷ 4 ರಿಂದ 5 ಲಕ್ಷ ಮನೆ ನೀಡುವ ಮೂಲಕ 5 ವರ್ಷಗಳ ಆಡಳಿತಾವಧಿಯಲ್ಲಿ 15 ಲಕ್ಷ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೆವು. ಆದರೆ ಈಗಿನ ಸರ್ಕಾರ ಕ್ಷೇತ್ರಕ್ಕೆ ಅನುದಾನ ಕಡಿಮೆ ನೀಡಿದೆ. ಅಷ್ಟೇ ಅಲ್ಲದೇ ಕಾಂಗ್ರೆಸ್ ಶಾಸಕರಿರುವ ಕ್ಷೇತ್ರಗಳಿಗೆ ಚುನಾವಣೆ ಸಮಯದಲ್ಲಿ 28 ಕೋಟಿ ನೀಡಿ, ಬಿಜೆಪಿ ಶಾಸಕರಿರುವ ಕಡೆ 100 ಕೋಟಿ ತನಕ ಅನುದಾನ ನೀಡಿ ತಾರತಮ್ಯ ಮಾಡಿದೆ ಎಂದು ಆರೋಪಿಸಿದರು.

ಈಗಾಗಲೇ ನೀರಾವರಿ ಇಲಾಖೆಯಿಂದ 11.40 ಲಕ್ಷ ರೂ. ವೆಚ್ಚದಲ್ಲಿ ಗ್ರಾಮದಲ್ಲಿ ರಸ್ತೆ, ಚರಂಡಿ ಅಭಿವೃದ್ಧಿಪಡಿಸಲಾಗಿದೆ. ಇದೀಗ ಮತ್ತೆ 15 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಚಾಲನೆ ನೀಡಿದ್ದೇನೆ. ಮುಂಬರುವ ದಿನಗಳಲ್ಲಿ ಇನ್ನು 20 ಲಕ್ಷ ಅನುದಾನ ನೀಡುತ್ತೇನೆ. ಗ್ರಾಮದ ಅಭಿವೃದ್ಧಿಗೆ ಅನುದಾನ ಸಾಲದಿದ್ದರೆ ಮತ್ತಷ್ಟು ಅನುದಾನ ಕೊಡಿಸುತ್ತೇನೆ ಎಂದು ಭರವಸೆ ನೀಡಿದರು.

ಬಡವರಿಗೆ ಮನೆ ಮಂಜೂರಾಗಿಲ್ಲ: ಬಿಜೆಪಿ ಸರ್ಕಾರ ಬಡವರಿಗೆ ಮನೆ ನೀಡುತ್ತಿಲ್ಲ. 4 ವರ್ಷದಿಂದ ಒಂದೇ ಒಂದು ಮನೆ ಮಂಜೂರಾಗಿಲ್ಲ. ಈಗ ಗ್ರಾಪಂ ವ್ಯಾಪ್ತಿಗೆ ತಲಾ 20 ರಿಂದ 30 ಮನೆಗಳನ್ನು ಸರ್ಕಾರ ನೀಡಿದೆ. ಕೆಲವೆಡೆ ಎರಡು ಮನೆಗಳು ಮಾತ್ರವೇ ಬಂದಿವೆ ಎಂದು ಸರ್ಕಾರದ ನಡೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ರಂಗಸಮುದ್ರ ಗ್ರಾಪಂ ಅಧ್ಯಕ್ಷೆ ಸೌಮ್ಯ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ, ಜಿಪಂ ಮಾಜಿ ಸದಸ್ಯ ಕೆ.ಮಹದೇವು, ಶಿವಪ್ರಸಾದ್, ಗೋಪಿ, ನಾರಾಯಣ, ಕಲ್ಪನಾ, ಚೆಂಗಪ್ಪ, ಮಂಜುನಾಥ್, ಅನಿಲ್ ಕುಮಾರ್, ಮೋಹಿತ್ ಸೇರಿದಂತೆ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಕಾರು ಹರಿದು ಮಹಿಳೆ ಸಾವು

ನಂಜನಗೂಡು, ಅ.21– ಕಾರು ಹರಿದು ಮಹಿಳೆ ಸಾವನ್ನಪ್ಪಿರುವ ಘಟನೆ ನಗರದಲ್ಲಿ ನಡೆದಿದೆ. ನಗರದ ಒಕ್ಕಲಗೇರಿ ನಿವಾಸಿ ಇಂದ್ರಮ್ಮ(50) ಸಾವನ್ನಪ್ಪಿದವರು.

ಶ್ರೀಕಂಠೇಶ್ವರ ದೇವಾಲಯದಲ್ಲಿ ಕಾಯಿ ಒಡೆಯುವ ಕೆಲಸ ನಿರ್ವಹಿಸುತ್ತಿದ್ದ ಇಂದ್ರಮ್ಮ, ಶ್ರೀಕಂಠೇಶ್ವರ ದೇವಾಲಯದ ಮೂಲೆ ಗಣಪತಿ ದೇವಾಲಯದ ಬಳಿ ಮನೆಗೆ ನಡೆದುಕೊಂಡು ಹೋಗುತ್ತಿದ್ದ ವೇಳೆ ಹಳ್ಳದಕೇರಿಯಿಂದ ಅತಿವೇಗವಾಗಿ ಬಂದ ಹೊಸ ಕಾರು ಇಂದ್ರಮ್ಮಳಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಕೆಳಗೆ ಬಿದ್ದ ಆಕೆಯ ಮೇಲೆ ಚಾಲಕ ಕಾರು ಹತ್ತಿಸಿದ್ದರಿಂದ ತೀವ್ರ ಗಾಯಗೊಂಡ ಅವರನ್ನು ತಕ್ಷಣ ಕೃಷ್ಣ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮಾದಾಪುರದಲ್ಲಿ ಉಚಿತ ದಂತ ತಪಾಸಣಾ ಶಿಬಿರ



ಹಂಪಾಪುರ, ಅ.21– ಹೆಚ್.ಡಿ.ಕೋಟೆ ತಾಲೂಕಿನ ಮಾದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ದಂತ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ಹಲ್ಲಿನ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದ ಅವರು, ಸಾರ್ವಜನಿಕರು ಉಚಿತ ದಂತ ತಪಾಸಣಾ ಮತ್ತು ಚಿಕಿತ್ಸಾ ಶಿಬಿರವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ದಂತತಜ್ಞ ಡಾ.ಸಮೀವುಲ್ಲಾ ಗ್ರಾಮೀಣ ಜನರಿಗೆ ದಂತ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ದಿನೇಶ್, ಉಪಾಧ್ಯಕ್ಷರಾದ ಗಿರೀಶ್, ಸದಸ್ಯ ಚಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಚಂದ್ರಕಲಾ, ದಂತ ತಜ್ಞ ಡಾ.ನಾಗೇಶ್ ಕುಮಾರ್, ಡೈರಿ ಕಾರ್ಯದರ್ಶಿ ಮಹೇಶ್, ಗ್ರಾಮದ ಮುಖಂಡ ಮಂಚಯ್ಯ, ಆರೋಗ್ಯ ಇಲಾಖೆ ಸಿಬ್ಬಂದಿ ರವಿರಾಜ್, ಲಕ್ಷ್ಮಿ ಭಟ್, ಪ್ರದೀಪ, ಶೀಲಾ, ದೊರೆ, ಶಶಿರೇಖಾ, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗ, ಆಶಾ ಕಾರ್ಯಕರ್ತೆಯರು, ಶಾಲಾ ಮಕ್ಕಳು, ಸಾರ್ವಜನಿಕರು ಹಾಜರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ

ವಿದ್ಯಾರ್ಥಿಗಳ ಪೋಷಕರಿಂದ ಶಿಕ್ಷಣ ಇಲಾಖೆ ಹಣ ಸಂಗ್ರಹ

ವಿಪಕ್ಷ ನಾಯಕ ಸಿದ್ದರಾಮಯ್ಯ ಕಿಡಿ



ಬೆಂಗಳೂರು, ಅ.21(ಕೆಎಂಶಿ)– ವಿದ್ಯಾರ್ಥಿಗಳ ಪೋಷಕರಿಂದ ಶಿಕ್ಷಣ ಇಲಾಖೆಯು ಹಣ ಸಂಗ್ರಹಿಸಲು ಮುಂದಾಗಿರುವುದಕ್ಕೆ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಪೋಷಕರಿಂದ ಹಣ ವಸೂಲಿ ಮಾಡುವ ಆದೇಶವನ್ನು ಕೂಡಲೇ ಹಿಂಪಡೆಯಬೇಕು. ಅನುದಾನದ ಕೊರತೆಯಿಂದ ಸ್ಥಗಿತಗೊಂಡಿರುವ ಎಲ್ಲ ಶೈಕ್ಷಣಿಕ ಯೋಜನೆಗಳಿಗೆ ಪುನರ್ ಚಾಲನೆ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಸರ್ಕಾರಿ ಶಾಲೆಯ ಬಡ ಮಕ್ಕಳ ಮೇಲೆ ಬಿಜೆಪಿ ನೇತೃತ್ವದ ಸರ್ಕಾರದ ಭ್ರಷ್ಟ ಕಣ್ಣು ಬಿದ್ದಿದೆ. ಕಮಿಷನ್ ಹೆಸರಿನಲ್ಲಿ ರಾಜ್ಯದ ಖಜಾನೆ ಲೂಟಿ ಮಾಡಿ, ಈಗ ಬಡ ಮಕ್ಕಳ ಪೋಷಕರ ಜೇಬಿಗೂ ಕತ್ತರಿ ಹಾಕಲು ಹೊರಟಿದೆ ಎಂದು ಕಿಡಿಕಾರಿದ್ದಾರೆ. ವಿದ್ಯಾರ್ಥಿಗಳಿಗೆ ಹಾಲು ಬಿಸಿಯೂಟ, ಸಮವಸ್ತ್ರ, ಶೂ, ವಿದ್ಯಾಸಿರಿ, ಹಾಸ್ಟೆಲ್ ಸೌಲಭ್ಯಗಳನ್ನು ನೀಡಿದ್ದು, ನಾವು. ಅವರಿಂದ ಒಂದಂದನ್ನೇ ಕಿತ್ತುಕೊಳ್ಳುತ್ತಿರುವ ಸರ್ಕಾರ ಈಗ ದುಡ್ಡು ಕಿತ್ತುಕೊಳ್ಳಲು ಹೊರಟಿದೆ.

ವೇದಿಕೆಯ ಮೇಲೆ ನಿಂತು ಥಮ್, ತಾಕತ್ ಎಂದು ಬೊಬ್ಬಿರಿಯುವವರು ವಿದ್ಯಾರ್ಥಿಗಳ ನೆರವಿನ ಯೋಜನೆಗಳಿಗೆ ಹಣ ಬಿಡುಗಡೆ ಮಾಡಿ, ತಮ್ಮ ತಾಕತ್ ತೋರಿಸಲಿ ಎಂದಿದ್ದಾರೆ. ನಾವು ವಿದ್ಯಾರ್ಥಿಗಳ ಕಲಿಕೆಗೆ ಹತ್ತು ಹಲವು ಸವಲತ್ತು ಕಲ್ಪಿಸಿದ್ದೆವು. ಆದರೆ ಈ ಬಿಜೆಪಿ ಸರ್ಕಾರ ಓದುವ ಮಕ್ಕಳಿಗೆ ತ್ರಿಶೂಲ ಧೀಕ್ಷೆ ನೀಡಿ, ಅವರ ಬದುಕನ್ನು ಕತ್ತಲಿಗೆ ದೂಡುತ್ತಿದೆ ಎಂದಿದ್ದಾರೆ.

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

Big Diwali Sale 8th - 31st Oct.
BUY 2 GET 1 FREE* ON ALL IN-HOUSE BRANDS
2+1 OFFER RUSH
PICK THE BEST FOR UR FEET
GENTS & LADIES FOOTWEAR
SHOE WORLD™ ESTD.1998
Best Brands at Your Feet...
*T&C Apply
SHIVARAMPET, OPP: MANNARS MARKET, Mysuru - 01. SUNDAY OPEN | ✆ : 2424282 11am to 8-30pm


---

BOOKINGS OPEN FOR
Construction of Brand New Architecture Designed Houses
MUDA APPROVED
20'x40 - 30 Lakhs
30'x40' - 44.99 Lakhs
Near St. Joseph's Central School, Hunsur Road, Mysore.
9740767576, 8884001233

ಸಾಲ ಸೌಲಭ್ಯ
* ಕೃಷಿ ಸಾಲ
* ವ್ಯವಹಾರ ಸಾಲ
* ವೈಯಕ್ತಿಕ ಸಾಲ
* ಸ್ಥಿರಾಸ್ತಿ ಸಾಲ
* ವಿದ್ಯಾ ಸಾಲ
* ಮಾರ್ಟ್‌ಗೇಜ್ ಸಾಲ


ಆಕರ್ಷಕ ಬಡ್ಡಿದರ ಹಾಗೂ ಸಬ್ಸಿಡಿ ನೀಡಲಾಗುತ್ತದೆ.
ಸಂಪರ್ಕಿಸಿರಿ
7290953522

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ನಿಂಗಮ್ಮ ಉ॥ ಮರಿಯಮ್ಮ ನವರು
(ಲೇಟ್ ಮಾ॥ ಭೇ. ನರಸೇಗೌಡರ ಧರ್ಮಪತ್ನಿ)
ಇವರು ದಿನಾಂಕ: 13.10.2022 ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 23.10.2022 ಭಾನುವಾರ ಬೆಳಗ್ಗೆ 10.30ಕ್ಕೆ ಮೃತರ ಸ್ವಗೃಹ, ಹೊಸಹುಂಡಿ ಗ್ರಾಮ, ಮೈಸೂರು ತಾ॥ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಭೋಜನ: ಮಧ್ಯಾಹ್ನ 1 ಗಂಟೆಗೆ
ದುಃಖತಪ್ತರು: ಕುಟುಂಬವರ್ಗದವರು, ಬಂಧುಮಿತ್ರರು ಹಾಗೂ ಹೊಸಹುಂಡಿ ಗ್ರಾಮಸ್ಥರು.

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಬೋರಪ್ಪರವರು
(ಪ್ರಧಾನ ಕಾರ್ಯದರ್ಶಿ, ಶ್ರೀ. ಸಿದ್ದಪ್ಪಾಜಿ ದೇವಸ್ಥಾನ ಟ್ರಸ್ಟ್.)
ಕುಂಬಾರಗೇರಿ, ಲಷ್ಕರ್ ಮೊಹಲ್ಲಾ, ಮೈಸೂರು
ದುಃಖತಪ್ತರು: ಸ್ನೇಹ ಬಳಗ

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ – 571428

ಸಾರ್ವಜನಿಕ ಪ್ರಕಟಣೆ

ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟ ಗೆಜ್ಜಲಗೆರೆ ಘಟಕಕ್ಕೆ ಭೂಗತ ಕೇಬಲ್ ಮೂಲಕ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು MUSS ಮದ್ದೂರಿನಿಂದ, ಮದ್ದೂರು ಟಿ.ಬಿ. ಸರ್ಕಲ್, NH-275, ನಲ್ಲಿ ಹಾದು ಹೋಗುವ ಗೆಜ್ಜಲಗೆರೆ ಮಾರ್ಗದಲ್ಲಿ ಪಡೆಯಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಸದರಿ ಮಾರ್ಗದಲ್ಲಿ ಯಾವುದೇ ರೀತಿಯ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟಕ್ಕೆ ಅಥವಾ ಚೆಸ್ಕಾಂ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ ಸಂಭವಿಸಬಹುದಾದ ವಿದ್ಯುತ್ ಅವಘಡಗಳಿಗೆ ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟ, ಗೆಜ್ಜಲಗೆರೆ ಮತ್ತು ಚೆಸ್ಕಾಂ ಮದ್ದೂರು ರವರು ಜವಾಬ್ದಾರರಾಗಿರುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಸ್ಥಳ: ಗೆಜ್ಜಲಗೆರೆ
ದಿನಾಂಕ: 22–10–2022

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಸ್ಥಾಪನೆ : 1994

ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., (ರಿ)
ಪ್ರಧಾನ ಕಛೇರಿ : ನಂ 1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–04. ಮೊ : 0821-2330014
ಶಾಖಾ ಕಛೇರಿ : ನಂ ಸಿಎ16, ವಿಜಯನಗರ, ಎರಡನೇ ಹಂತ, ಮೈಸೂರು–17. ಮೊ : 0821-2411556
Mail ID : agastyasociety.mysore@gmail.com GST No. 29AADAA7412N1ZI

ಸಂಘದ ಸಮಸ್ತ ಸದಸ್ಯ ಬಾಂಧವರಿಗೆ ದೀಪಾವಳಿ ಹಬ್ಬದ ಶುಭಾಶಯಗಳು

ದಿನಾಂಕ: 23/10/2022ನೇ ಭಾನುವಾರ ವಿಜಯನಗರ ಶಾಖಾ ಕಛೇರಿಯಲ್ಲಿ ಬೆಳಿಗ್ಗೆ 10:00 ಘಂಟೆಗೆ ಮತ್ತು ಪ್ರಧಾನ ಕಛೇರಿಯಲ್ಲಿ ಬೆಳಿಗ್ಗೆ 11:30 ಘಂಟೆಗೆ " ಧನಲಕ್ಷ್ಮೀ ಪೂಜೆ"ಯನ್ನು ಏರ್ಪಡಿಸಲಾಗಿದೆ. ಸದಸ್ಯರು ಭಾಗವಹಿಸಬೇಕಾಗಿ ಕೋರಲಾಗಿದೆ.

ಶುಭಕೋರುವವರು:–

ಶ್ರೀ ಸಿ ವಿ ಪಾರ್ಥಸಾರಥಿ	ಶ್ರೀ ಹೆಚ್ ಎಸ್ ಪ್ರಶಾಂತ್ ತಾತಾಚಾರ್	ಶ್ರೀ ಎಂ ಡಿ ಗೋಪಿನಾಥ್
ಅಧ್ಯಕ್ಷರು	ಉಪಾಧ್ಯಕ್ಷರು	ಖಜಾಂಚಿ

ನಿರ್ದೇಶಕರು: ಶ್ರೀ ಕೆ ನಾಗರಾಜ್, ಶ್ರೀ ಪ್ರೀತನ್ ಎಂ ಅರ್, ಶ್ರೀ ಎನ್ ಪಣಿರಾಜ್, ಶ್ರೀ ಎಸ್ ಎನ್ ನಾಗಶಂಕರ, ಶ್ರೀ ಎಂ ಆರ್ ಬಾಲಕೃಷ್ಣ, ಶ್ರೀ ರಂಗನಾಥ್ ಎನ್ ಎಸ್, ಶ್ರೀ ಕೆ ಎನ್ ಅರುಣ್, ಶ್ರೀ ನಾಗೇಂದ್ರ, ಶ್ರೀಮತಿ ರೇಖಾ, ಶ್ರೀಮತಿ ಎಂ ಎನ್ ಸೌಮ್ಯ, ಶ್ರೀಮತಿ ಎಸ್ ರಾಜಮ್ಮ (ಕೋ–ಆಪ್ಟ್), ಶ್ರೀ ಜಿ ಎನ್ ಸತೀಷ್ (ಕೋ–ಆಪ್ಟ್) ಹಾಗೂ ಶ್ರೀಮತಿ ಎನ್ ವೀಣಾ ಪ್ರಭಾರ ಕಾರ್ಯದರ್ಶಿ ಮತ್ತು ಸಿಬ್ಬಂದಿ ವರ್ಗದವರು.

ಸದಸ್ಯರಿಗೆ, ಚಿನ್ನಾಭರಣ ಸಾಲವನ್ನು ಶೇ.10ರ ಬಡ್ಡಿದರದಲ್ಲಿ ಪ್ರತಿ ಗ್ರಾಂ ರೂ. 3900/–ರಂತೆ, ಸ್ಥಿರಾಧಾರ ಸಾಲವನ್ನು ಶೇ.10ರ ಬಡ್ಡಿದರದಲ್ಲಿ ನೀಡಲಾಗುವುದು.

2021–2022ನೇ ಸಾಲಿನ ಲಾಭಾಂಶವನ್ನು ನೀಡಲಾಗುತ್ತಿದೆ. ಸದಸ್ಯರು ಷೇರು ಪಾಸ್‌ಪುಸ್ತಕವನ್ನು ಕಡ್ಡಾಯವಾಗಿ ಹಾಜರುಪಡಿಸಿ ಸಂಘದ ವ್ಯವಹಾರದ ವೇಳೆಯಲ್ಲಿ ಪಡೆದುಕೊಳ್ಳಬಹುದು.

100% ಬ್ರಾಂಡೆಡ್ ಮಾರಾಟ

ನೇರವಾಗಿ ಫ್ಯಾಕ್ಟರಿಯಿಂದ ಬ್ರಾಂಡೆಡ್ ರೆಡಿಮೆಡ್ ಗಾರ್ಮೆಂಟ್ಸ್ ಮತ್ತು ಶೂಸ್‌ಗಳ ಮಾರಾಟ
ಈ ಭಾರಿ ರಿಯಾಯಿತಿ ಮೈಸೂರು ನಗರದ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನಲ್ಲಿ ಮಾತ್ರ
Discount Upto **80%** Plus on the Sports Sale @ **Rs. 450/- & 550/-**
W WILDCRAFT UNITED COLORS OF BENETTON. PUMA adidas The Roadster Life Co. John Player Special
ಮಹಿಳೆಯರ, ಪುರುಷರ ಹಾಗೂ ಮಕ್ಕಳ ಬ್ರಾಂಡೆಡ್ ಜೀನ್ಸ್, ಟ್ರೌಸರ್, ಚೈನೂಸ್ ಪ್ಯಾಂಟ್, 100% ಕಾಟನ್ ಶರ್ಟ್, ಟಿ ಶರ್ಟ್, ಜಾಕೆಟ್, ಬರ್ಮುಡಾ, ಫ್ಯಾನ್ಸಿ 3/4, ಲೇಡಿಸ್ ಟಾಪ್, ಫಲಾಜೋ, ಫ್ರಾಕ್ಸ್, ಮಹಿಳೆಯರ ಲೋವರ್ ಪ್ಯಾಂಟ್, ಜೀನ್ಸ್ ಪ್ಯಾಂಟ್, ಕುರ್ತೀಸ್ ಮತ್ತು ಸೀರೆಗಳು ವಿವಿಧ ಬಗೆಯ ಡಿಸೈನ್‌ಗಳಲ್ಲಿ ದೊರೆಯುತ್ತವೆ
ರೂ. 450/– & 550/– ಮಾತ್ರ
Raymond PARK AVENUE parx FLYING MACHINE ColorPlus INDIAN TERRAIN INDIGO NATION
100% Cotton Shirt, Linen Shirt, Chino Pant, Cotton Pant Rs.750/- to 950/- only
ಸ್ಪೆಷಲ್ ಕೌಂಟರ್ : ಮಹಿಳೆಯರ ಫುಟ್‌ವೇರ್ಸ್, ಬೆಲ್ಲಿ, ಹೀಲ್ಸ್ ಶೂಸ್, ಸ್ಯಾಂಡಲ್, ಲೇಡಿಸ್ ಬ್ಯಾಗ್ ಇತ್ಯಾದಿ ಪುರುಷರ ಶೂಸ್, ಬ್ರಾಂಡೆಡ್ ಕಂಪನಿಗಳಾದ ಪೂಮಾ, ನೈಕ್, ರಿಬಾಕ್, ರೋಡ್‌ಸ್ಟಾರ್, ಅಡಿದಾಸ್, ಬ್ರಾಂಡೆಡ್ ಸ್ಪೋರ್ಟ್ಸ್ ಶೂಸ್, ಸ್ಯಾಂಡಲ್, ಪಾದರಕ್ಷೆಗಳು ಇತ್ಯಾದಿ ನಾನಾ ರೀತಿಯ ವೆರೈಟಿಗಳಲ್ಲಿ ಸಿಗುತ್ತದೆ.
ರೂ. 400/– & 2500/– ಮಾತ್ರ
ಸ್ಥಳ : ದಿ. ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್
ಮುಡಾ ಕಛೇರಿ ಪಕ್ಕದಲ್ಲಿ, ಜೆ.ಎಲ್.ಬಿ. ರಸ್ತೆ, ಮೈಸೂರು.

ಉತ್ತರಕ್ರಿಯಾದಿ ಆಹ್ವಾನ ಪತ್ರಿಕೆ



ಯಜಮಾನ್ ಬಿ.ಎಸ್. ಮಹದೇವೆಗೌಡ್ರು
ಇವರು ದಿನಾಂಕ: 13.10.2022ರಂದು ದೈವಾಧೀನರಾಗಿದ್ದು ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 23.10.2022ನೇ ಭಾನುವಾರ ಬೆಳಿಗ್ಗೆ 10 ಗಂಟೆಗೆ, ನಮ್ಮ ಸ್ವಗೃಹ, ಗದ್ದಿಗೆ ಮುಖ್ಯ ರಸ್ತೆ ಬೋಗಾದಿ, ಮೈಸೂರಿನಲ್ಲಿ ಏರ್ಪಡಿಸಲಾಗಿದೆ. ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ: ದುಃಖತಪ್ತರು: ಶ್ರೀಮತಿ ಗಾಯಿತ್ರಮ್ಮ, ಮಕ್ಕಳು, ಸೊಸೆ, ತಮ್ಮಂದಿರು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಕುಟುಂಬವರ್ಗದವರು. ಮೊ: 9538383813

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಲೇಟ್ ಸಿ.ಎಸ್. ವಿರಕ್ತಮಠ್ ರವರ ಮಗನಾದ **ಶ್ರೀ. ಸಿ.ಎಸ್. ಶಿವಪ್ರಕಾಶ್** ರವರು, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಆಧರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 5 (ಐದು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ, ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಜಯನಗರ–ತೊಣಚಿಕೊಪ್ಪಲ್ ಬಡಾವಣೆ, ಕುವೆಂಪುನಗರ 2ನೇ ಹಂತ, ಕೆ.ಎಚ್.ಬಿ ಕಾಲೋನಿಯಲ್ಲಿರುವ **ಸ್ವತ್ತಿನ ಸಂಖ್ಯೆ 302/ಸಿ**, [ಹಾಲಿ ಎಂ.ಸಿ.ಸಿ. **ಖಾತೆ ಸಂಖ್ಯೆ 49077, ವಾರ್ಡ್ ನಂ. 57**], ಉಳ್ಳ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 9.45 ಮೀಟರ್ ಮತ್ತು ಉತ್ತರ ದಕ್ಷಿಣ 12.19 ಮೀಟರ್, ಇದರಲ್ಲಿರತಕ್ಕ ಕಟ್ಟಡವನ್ನೊಳಗೊಂಡ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸ್ವತ್ತಿನ ಸಂಖ್ಯೆ 302/ಬಿ, ಉತ್ತರಕ್ಕೆ: ಸ್ವತ್ತಿನ ಸಂಖ್ಯೆ 17/ಬಿ ಮತ್ತು ದಕ್ಷಿಣಕ್ಕೆ: ಗಲ್ಲಿ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು,
ಎಸ್‌ಎಲ್‌ಡಿ ಲಾ ಫರ್ಮ್
ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

ಕರ್ನಾಟಕ ಸರ್ಕಾರ
ಜಿಲ್ಲಾ ಸರ್ವೇಕ್ಷಣಾ ಘಟಕ, ಮೈಸೂರು ಜಿಲ್ಲೆ, ಮೈಸೂರು.
ಎನ್.ಪಿ.ಸಿ. ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು 570010.
ದೂ.ಸಂ.: 0821–2971847 E-Mail Id: dsomysuru@gmail.com
ಸಂ:ಎನ್.ಹೆಚ್.ಎಂ/15thFC/ಮೈ/01/2022–23 ದಿ: 20.10.2022

ಇ–ಟೆಂಡರ್ ಪ್ರಕಟಣೆ

15ನೇ ಹಣಕಾಸು ಆಯೋಗದಡಿಯಲ್ಲಿ ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮಕ್ಕೆ ಎಲ್ಲಾ ನಗರ ಪ್ರಾಥಮಿಕ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಅಗತ್ಯವಿರುವ ರೋಗ ಪತ್ತೆ ಕಿಟ್‌ಗಳನ್ನು, ರಾಸಾಯನಿಕಗಳನ್ನು ಮತ್ತು ಪರಿಕರಗಳನ್ನು ಖರೀದಿಸಲು ಇ–ಟೆಂಡರ್ ಆಹ್ವಾನಿಸಿರುವ ಬಗ್ಗೆ. **ಅಧಿಸೂಚನೆ ಸಂಖ್ಯೆ**:ಎನ್.ಹೆಚ್.ಎಂ/ಡಿ.ಹೆಚ್.ಎಸ್/ಮೈ/01/2022–23 ದಿ: 20.10.2022 **ಇ–ಟೆಂಡರ್ ಅಂದಾಜು ಮೊಬಲಗು ರೂ 12,85,000/–** ಇ.ಎಂ.ಡಿ **ರೂ.25,700/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಅಂದಾಜು ಮೌಲ್ಯ: ರೂ.12.85 ಲಕ್ಷ **2) ಇ.ಎಂ.ಡಿ ಮೊಬಲಗು:** ರೂ.25,700/–. **3) ಟೆಂಡರ್‌ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ ಮತ್ತು ಸಮಯ** ದಿ: 21.10.2022 ರಂದು ಮಧ್ಯಾಹ್ನ 03:00 ಗಂಟೆಗೆ. **4) ಪ್ರೀಬಿಡ್ ಸಭೆ ನಡೆಯುವ ದಿನಾಂಕ ಮತ್ತು ಸಮಯ** ದಿ: 29.10.2022 ರಂದು ಮಧ್ಯಾಹ್ನ 04:00 ಗಂಟೆಗೆ **5) ಟೆಂಡರ್ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ** ದಿ: 15.11.2022 ರಂದು ಸಂಜೆ 04:30 ಗಂಟೆಗೆ. **6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:** ದಿ: 17.11.2022 ರಂದು ಸಂಜೆ 05:00 ಗಂಟೆಗೆ **7) ಆರ್ಥಿಕ ಬಿಡ್‌ತೆರೆಯುವ ದಿನಾಂಕ ಮತ್ತು ಸಮಯ:** ದಿ: 19.11.2022 ರಂದು ಸಂಜೆ 05:30 ಗಂಟೆಗೆ. **8) ಟೆಂಡರ್ ತೆರೆಯುವ ಸ್ಥಳ:** ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ನಜರ್‌ಬಾದ್, ಮೈಸೂರು

ಹೆಚ್ಚಿನ ಮಾಹಿತಿಗಾಗಿ: ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣ ಸೊಸೈಟಿ, ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣಾಧಿಕಾರಿಗಳ ಕಛೇರಿ, ಎನ್.ಪಿ.ಸಿ ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು–10 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು

ಸಹಿ/– ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.
DIPR/DDMYS/MCA/588/2022-23

DEEPAWALI SHOPPING MELA
Regd. by : O/o. D.C.H. Ministry of India
Mob: 93429 12819
20th Oct to 30th Oct 2022 | Daily 10.00 am to 9.00 pm
CRAFTS FROM ALL INDIAN STATES AVAILABLE



Exhibition-cum-sale of Over 10,000 Varieties of Handlooms & Handicrafts from all over the Country.
ALL CARDS ACCEPTED | Paytm ACCEPTED HERE | PARKING & ENTRY FREE
VENUE: OPEN GROUND, OPP AISHWARYA PETROL BUNK, VIJAYANAGAR 2ND STAGE, HUNSUR ROAD, MYSORE - 17

ಕಲ್ಯಾಣ್ ಜ್ಯುವೆಲ್ಲರ್ಸ್



Celebrate THIS DHANTERAS WITH KALYAN

UP TO 25% OFF On MAKING CHARGES

INSTANT PRIZE FOR ALL PURCHASES ABOVE ₹25,000

FLAT 25% OFF On STONE VALUE

ICICI Bank FESTIVE BONANZA Up to ₹10,000 Cashback* On ICICI Bank Credit & Debit Cards

T&C apply. *Applicable only for a minimum of 1 lakh stone value

FOR MORE DETAILS CONTACT US ON TOLL FREE NUMBER: 1800 425 7333
WWW.KALYANJEWELLERS.NET | FOLLOW US ON | BUY ONLINE @ WWW.CANDERE.COM
FOR INSTITUTIONAL REQUIREMENTS, WRITE TO B2BINDIA@KALYANJEWELLERS.NET
SCAN THE QR CODE AND STAND A CHANCE TO WIN GOLD COINS